ಪೋಲೀಸಿನವರು ಕನ್ನಡ ಚಳುವಳಿಗಾರರನ್ನು ಕಬ್ಬನ್ ಪಾರ್ಕ್ ಪೋಲೀಸು ಸ್ಟೇಷನ್ನಿನಲ್ಲಿ ಹಾಗು ಇನ್ನೊಂದು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಲಾಕಪ್‌ನಲ್ಲಿಡುವಾಗ ಬೂಡ್ಸುಗಳಲ್ಲಿ ಹೊಡೆದಿದ್ದಾರೆ ಇದರ ಬಗ್ಗೆ ಬರೆದು ಕಳುಹಿಸಿ ಎಂದು ತಾವು ಹೇಳಿದಂತೆ ಕಳಿಸುತ್ತೇನೆ.

Mr. SPEAKER.—The Member is spoiling a good case if he has got. Let him not spoil it simply because he feels speaking today, he may better not speak.

ಶ್ರೀ ವಾಟಾಳ್ ನಾಗರಾಜ್.—ಹಾಗಲ್ಲ ಸ್ವಾಮಿ. ಇದು ಬಹು ಮುಖ್ಯವಾದ ವಿಷಯ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಏನೋ ಬೇರೆ ಕಾರಣಗಳಿರಬಹುದು. ಕಾಂಗ್ರೆಸ್ಸಿನವರು ಎಂದೂ ಆರೀತಿ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾವು ಎಂದೂ ಕಾಂಗ್ರೆಸ್ಸಿನವರಂತೆ ಮಾಡುವುದಿಲ್ಲ.

Mr. SPEAKER.—Order, order,

BUSINESS OF THE HOUSE

Mr. SPEAKER.—Now Call Attention Notice by M. Nagappa. The hon'ble member is absent. It will be taken up next day. The Minister is not introducing the Mysore Khadi and Village Industries Amendment Bill. We will take up the Financial Business. The hon'ble Minister will move the motion.

BUDGET ESTIMATES FOR 1967-68—DEMANDS FOR GRANTS

Demand Nos. 6, 29, 30 and 30A, 31, 32, 43, 45, 46, 47, 48 and 50.

Sri VEERENDRA PATIL (Minister for Public Works).—Sir, on the recommendation of the Governor, I beg to move :

> "That a sum not exceeding Rs. 12,05,000 be granted to the Government to defray the charges which will come in course of payment during the financial year for the period ending 31st day of March 1968, in respect of 'Other Taxes and Duties'."

Mr. SPEAKER.—Motion moved on the recommendation of the Governor.

> "That a sum not exceeding Rs. 12,05,000 be granted to the Government to defray the charges which will come in course of payment during the financial year for the period ending 31st day of March 1968, in respect of 'Other Taxes and Duties'."

The Other Demands, *viz.*, Nos. 29, 30, 30A, 31, 32, 43, 45, 46, 47, 48 and 50 will be deemed to have been moved.

[Mr. DEPUTY SPEAKER in the Chair]

ಶ್ರೀ ಎಸ್. ಶಿವಪ್ಪ. (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಸುಮಾರು 12 ಡಿಮ್ಯಾಂಡುಗಳನ್ನು ಎಂದರೆ ಒಟ್ಟು ಮೊತ್ತ 82 ಕೋಟಿಯಷ್ಟು ಇರುವ 12 ಬೇಡಿಕೆಗಳನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕದ್ದನ್ನು ನಾನು ವಿರೋಧ ಮಾಡುತ್ತೇನೆ. ಲೋಕೋಪಯೋಗಿ ಇಲಾಖೆ ಎನ್ನತಕ್ಕ ಹೆಸರು ಇವೊತ್ತು ಅರ್ಥವಿಲ್ಲದ ಹೆಸರಾಗಿದೆ. ಲೋಕೋಪಯೋಗಿ ಎನ್ನುವ ಹೆಸರಿಗೆ ಬದಲಾಗಿ ಲೋಕ ಉಪಭೋಗಿ ಇಲಾಖೆ ಎಂದು ನಾಮಕರಣ ಮಾಡಿದರೆ ಸರಿಯಾಗುತ್ತದೆ. ಲೋಕದ ಉಪಯೋಗಿ ಇಲಾಖೆ ಆಗುವ ಬದಲು ಲೋಕ ಉಪಭೋಗಿ ಇಲಾಖೆಯಂತೆ ವರ್ತಿಸುತ್ತಾ ಇಲ್ಲಿಯವರೆಗೆ ಬಂದಿದೆ. ಆದುದರಿಂದ ಇಂತಹ ಬದಲಾವಣೆ ಮಾಡು ವುದು ಬಹಳ ಮುಖ್ಯವಾದುದು ಎಂದು ನಾನು ಭಾವನೆ ಮಾಡುತ್ತೇನೆ. ತಾವು ಮೈಸೂರು ದೇಶದ ಪಿ. ಡಬ್ಲ್ಯು. ಡಿ ಇಂಜನೀಯರು ಮಾಡತಕ್ಕ ಕೆಲಸಗಳನ್ನು ನೋಡಿ ಒಂದಾನೊಂದು ಕಾಲದಲ್ಲಿ ಭಾರತ ದೇಶದಲ್ಲೆಲ್ಲಾ ಮೈಸೂರು ದೇಶ ಹೆಸರಾಂತ ದೇಶ ಎಂದು ಪ್ರಸಿದ್ಧಿಯಾಗಿತ್ತು. ಡಾ. ಸರ್. ಎಂ. ವಿಶ್ವೇಶ್ವರಯ್ಯನವರಂತಹ ಶ್ರೇಷ್ಠರನ್ನು ಪಡೆದಂತಹ ದೇಶ ಈ ಮೈಸೂರು ದೇಶ. ಇಂತಹ ದೇಶದಲ್ಲಿ ಇವೊತ್ತಿನ ದಿವಸ ಲೋಕೋಪಯೋಗಿ ಇಲಾಖೆ ಮಾಡುತ್ತ ಇರತಕ್ಕ ಕೆಲಸದಲ್ಲಿ ನಮ್ಮ ದೇಶಕ್ಕೆ ಹಾನಿಯನ್ನುಂಟುಮಾಡುತ್ತಿದೆ ಮತ್ತು ನಿಮ್ಮ ದುಂದು ನೀತಿಯಿಂದ ಇವೊತ್ತು ಹೇರಳವಾಗಿ ಖರ್ಚು ಮಾಡುತ್ತಿದ್ದೀರಿ. ಸುಮಾರು 82 ಕೋಟಿಯಷ್ಟು ಹಣವನ್ನು ಖರ್ಚು ಮಾಡುವ ಇಲಾಖೆ ಯಲ್ಲಿ ಎಷ್ಟು ಮಟ್ಟಿಗೆ ಹಣದ ದುಂದು ವೆಚ್ಚವಾಗಿದೆ ಎನ್ನುವುದನ್ನು ಮತ್ತು ನಿಮ್ಮ ದೇಶದ ಆರ್ಥಿಕ ಸಂಪತ್ತನ್ನು ಬೆಳೆಸುವುದಕ್ಕೆ ಅಸಾಧ್ಯವಾಗಿದೆ ಎನ್ನುವುದನ್ನು ತೋರಿಸುತ್ತದೆ. ನಮಗೆ ದೇಶದಲ್ಲೇ ನಾವು ಉಪಯೋಗಿಸುತ್ತಿರುವ ನೀರಿನ ಅಂಶ ನೋಡಿದರೆ ಮೈಸೂರು ದೇಶ ಬಹಳ ಕಡಿಮೆ ಅಂಶವನ್ನು ಎಲ್ಲ ದೇಶಗಳಿಗಿಂತ ಹೊಂದಿದೆ. ಸುಮಾರು 80 ಕೋಟಿಯಷ್ಟು ಖರ್ಚು ಮಾಡುತ್ತಿರುವ ನಿಮ್ಮ ಇಲಾಖೆಯಲ್ಲಿ ಹಿಂದೆ 7.5 ರಷ್ಟು ಅಂಶ ಇದ್ದದ್ದು ಈಗ 8.2 ರಷ್ಟಾಗಿದೆ. ಇಲ್ಲಿ ನಾವು ದೊಡ್ಡದಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಮಾತ್ರ ಹೇಳುತ್ತೀರಿ. ಇವೊತ್ತು ಮೈಸೂರು ದೇಶದಲ್ಲಿ ನೀರಾವರಿ ಯೋಜನೆಗಳೇ ಆಗಲೀ ಮತ್ತಾವ ಯೋಜನೆಗಳೇ ಆಗಲೀ ಇವೊತ್ತು ನೀವೆಷ್ಟು ಹಣ ಖರ್ಚು ಮಾಡುತ್ತಿದ್ದೀರಿ ಅದಕ್ಕೆ ತಕ್ಕಂತೆ ನಿರೀಕ್ಷಿಸಿದಂತೆ ಸಂಪತ್ತನ್ನು ಅಭಿವೃದ್ಧಿಪಡಿಸುವ ಕಾರ್ಯ ಈ ದೇಶದಲ್ಲಿ ಆಗಲಿಲ್ಲ. ನೀವು ಯಾರನ್ನು ಬೇಕಾದರೂ ಕೇಳಿ, ನೀವು ಮಾಡಿರತಕ್ಕ ಕಾನೂನುಗಳು ಹಾಗೂ ಯೋಜನೆಗಳು ಒಂದು, ಎರಡು ಹಾಗೂ ಮೂರನೇ ಯೋಜನೆಗಳಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಅದಕ್ಕೆ ತಕ್ಕಂತೆ ಎಷ್ಟು ಸಂಪತ್ತನ್ನು ಜಾಸ್ತಿ ಮಾಡಿದ್ದೀರಿ ಎಷ್ಟು ನೀರಾವರಿಯನ್ನು ಜಾಸ್ತಿ ಮಾಡಿದ್ದೀರಿ ಮತ್ತು ಅದರಲ್ಲಿ ಅರ್ಧದಷ್ಟು ಗುರಿಯನ್ನಾದರೂ ಮುಟ್ಟಿ ದ್ದೀರಾ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇದಕ್ಕೆ ಕಾರಣ ನೀವು ಹುಡುಕಿ ನೋಡಬೇಕಾ ಗಿಯೇ ಇಲ್ಲ. ನಿಮ್ಮಲ್ಲಿರುವ ತಜ್ಞರೇ ಇದರ ಬಗ್ಗೆ ಹೇಳಿದ್ದಾರೆ. ಎಲ್ಲರಿಗೂ ಕಾಣುತ್ತಲೇ ಇವೆ. ಅದರಲ್ಲೂ ಮೈಸೂರು ದೇಶದ ಲೋಕೋಪಯೋಗಿ ಇಲಾಖೆಯು ಜವಾಬುದಾರಿಯನ್ನು ಹೊತ್ತಿರ ತಕ್ಕ ತಾವು ಇಲ್ಲಿ ಬೇಜವಾಬುದಾರಿಯುತವಾದ ಕೆಲಸಗಳನ್ನು ಕಳೆದ ಆರು ವರ್ಷಗಳಿಂದಲೂ ನಿರ್ವಹಣೆ ಮಾಡಿಕೊಂಡು ಬಂದಿದ್ದೀರಿ. ನೀವು ಜವಾಬುದಾರಿ ಹೊತ್ತಿರತಕ್ಕ ಇಲಾಖೆಯಲ್ಲಿ ಆಗಿರ ತಕ್ಕ ಅನ್ಯಾಯ ಪರಂಪರೆಗಳನ್ನು, ಹಣದ ದುರ್ವಿನಿಯೋಗ ಹಾಗು ದಂದು ವೆಚ್ಚವನ್ನು ಮಾಡು ತ್ತಿರುವಷ್ಟು ಬೇರೆ ಯಾವ ಇಲಾಖೆಯಲ್ಲೂ ಮಾಡುತ್ತಿಲ್ಲ. ಈ ದುಂದು ವೆಚ್ಚದ ಪರಿಣಾಮವಾಗಿ ನಮ್ಮ ಆರ್ಥಿಕ ಸ್ಥಿತಿ ತಲೆಕೆಳಕಾಗಿ ಇರುವಂತಹ ಪರಿಸ್ಥಿತಿ ಬಂದಿದೆ ಮತ್ತು ಮೈಸೂರು ದೇಶದಲ್ಲಿ ಇಂತಹ ದುಸ್ಥಿತಿಗೆ ಬರಲು ನೂರಕ್ಕೆ ನೂರರಷ್ಟು ನಿಮ್ಮ ನೀತಿಯೇ ಕಾರಣ ಎನ್ನುವ ಮಾತನ್ನು ನೀವು ಒಪ್ಪಿಕೊಳ್ಳಲೇಬೇಕಾಗಿದೆ. ಮೈಸೂರು ದೇಶ ಕೇಂದ್ರದಿಂದ ಪಡೆದಿರತಕ್ಕ ನೆರವಿನ ಪರಿಸ್ಥಿತಿ ಯನ್ನು ವಿಚಾರ ಮಾಡುವುದಾದರೆ ಅದರಲ್ಲೂ ಕೂಡ ವಿಫಲರಾಗಿದ್ದೀರಿ. ಒಂದು ಕೆಲಸವನ್ನು ಮಾತ್ರ ಭುಜ ತಟ್ಟಿಕೊಂಡು ಕೆಲಸ ಮಾಡುತ್ತೇವೆ ಎಂದು ಹೇಳುತ್ತೀರಿ. ಅದು ನೀವು ಮಾಡುತ್ತಿ ರುವ ಡೆಹಲಿ ಯಾತ್ರೆಗಳ ಸಂಬಂಧವಾಗಿ. ಇದನ್ನು ಚಾಚೂ ತಪ್ಪದೆ ಬಹಳ ಚೆನ್ನಾಗಿ ಮಾಡುತ್ತಿ ದ್ದೀರಿ. ಇದರಲ್ಲಿ ನೀವೂ ಮತ್ತು ನಿಮ್ಮ ಹಣಕಾಸಿನ ಸಚಿವರೂ ಇಬ್ಬರೂ ಯುವಕರಾಗಿರುವು ದರಿಂದ ಇಂತಹ ಡೆಹಲಿ ಸಂಚಾರಗಳನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೀರಿ ಎನ್ನುವುದನ್ನು ನಾವು ನೋಡುತ್ತಲೇ ಇದ್ದೇವೆ. ಇಬ್ಬರೂ ಯುವಕರು ಆದರಿಂದ ಬಹಳ ಉತ್ಸಾಹದಿಂದ ಕೆಲಸ ಮಾಡು ತ್ತಾರೆ. ಇರಲಿ. ನಿಮ್ಮ ಜಂಟೀ ಟೂರುಗಳಿಂದ ಏನಾದರೂ ಕೆಲಸಗಳು ನಡೆದಿವೆಯೋ ಇಲ್ಲವೇ ಎನ್ನುವುದನ್ನು ನೀವು ಹೇಳಬೇಕು.

ನಾನು ಇತ್ತೀಚೆಗೆ ಒಂದು ಸಾರಿ ಪ್ರವಾಸ ಮಾಡತಕ್ಕ ಕಾಲದಲ್ಲಿ ಕಾರವಾರಕ್ಕೆ, ಎಂದರೆ, ನಮ್ಮ ಮಾನ್ಯ ಹಣಕಾಸಿನ ಇಲಾಖೆಯವರ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ನಾನು ಹೋಗಿದ್ದಾಗ ಒಬ್ಬರು

ವಯೋವೃದ್ಧರು ಒಂದು ಮಾತು ಹೇಳಿದರು. ಶರಾವತಿಯ ಆಚೆ ಹತ್ತು ಮೈಲಿ ದೂರದಲ್ಲಿ ಒಂದು ಪ್ರವಾಸಿ ಮಂದಿರ ಇದೆ. ಆ ಪ್ರವಾಸಿ ಮಂದಿರವನ್ನು ಯಾರಾದರೂ ನೋಡಿದ್ದೀರಾ ಎಂದು ನನ್ನನ್ನು ಕೇಳಿದರು. ಅದು ಎಂತಹ ಪ್ರವಾಸಿ ಮಂದಿರ ಎಂದು ನಾನು ಕೇಳಿದುದಕ್ಕೆ ಅವರು ಅಧಿಕ ಜಂಕ್ಷನ್ ಪ್ರವಾಸಿ ಮಂದಿರ ಎಂದು ಅವರು ಹೇಳಿದರು. ಇದರ ಬಗ್ಗೆ ನಾನು ಏನನ್ನೂ ಮುಂದೆ ಹೇಳುವುದಕ್ಕೆ ಹೋಗುವುದಿಲ್ಲ.

ಜನಗಳು ಯಾವ ರೀತಿ ಪ್ರವಾಸಿ ಮಂದಿರಗಳ ಬಗ್ಗೆ ಮಾತನಾಡುತ್ತಾರೆ ಎನ್ನುವುದಕ್ಕೆ ಇದನ್ನು ಹೇಳಿದೆ ಅಷ್ಟೆ. ಇವತ್ತು ಮೈಸೂರು ದೇಶದಲ್ಲಿರುವಷ್ಟು ಇಂಜನಿಯರಿಂಗ್ ಕಾಲೇಜುಗಳು ಭಾರತದಲ್ಲಿ ಎಲ್ಲೂ ಕೂಡ ಇಲ್ಲ ಮತ್ತು ಮೈಸೂರು ದೇಶದಲ್ಲಿ ಉತ್ಪನ್ನ ಮಾಡಿರತಕ್ಕಷ್ಟು ಇಂಜನಿಯರುಗಳು ಭಾರತದಲ್ಲಿ ಮತ್ತೆಲ್ಲೂ ಇಲ್ಲ. ಇಷ್ಟೊಂದು ಜನ ಇಂಜನಿಯರುಗಳನ್ನು ಉತ್ಪನ್ನ ಮಾಡಿರತಕ್ಕ ಮೈಸೂರು ದೇಶದಲ್ಲಿ ಅವರ ಉಪಯೋಗವನ್ನು ಪಡೆಯತಕ್ಕ ಒಂದು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ, ಇದಕ್ಕೆ ಕಾರಣವಿಷ್ಟೆ, ಇವತ್ತು ನೀರಾವರಿ ಕಾಮಗಾರಿಗೆ ಆಗಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಲಿ ತಮ್ಮ ಕೈಗೆ ಯಾವ ಹಣವನ್ನು ಕೊಟ್ಟಿದ್ದೇವೆಯೋ ಆ ಹಣ ಕಂಟ್ರಾಕ್ಟುದಾರರುಗಳಿಗೆ ಅರ್ಧವಾದರೆ ದೇಶದಲ್ಲಿ ಆಗಬೇಕಾದ ಉತ್ಪಾದನಾ ಕಾರ್ಯಗಳಿಗೆ ಅರ್ಧಕ್ಕಿಂತಲೂ ಕಡಿಮೆ ಖರ್ಚು ಆಗುತ್ತಾ ಇದೆ ಎಂಬುದನ್ನು ತಾವು ನೋಡಬಹುದು. ಇವತ್ತಿನ ದಿವಸ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಇರೆಗ್ಯುಲಾರಿಟೀಸ್ ಏನಿದೆ ಎಂದು ಹೇಳಿದ್ದಾರೆ. ಆದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಇದುವರೆಗೂ ಕೂಡ ಈ ಶಾಸನ ಸಭೆಗೆ ಹೇಳಿಲ್ಲ. ಅದಕ್ಕಿಂತ ಹೆಚ್ಚಾಗಿ ನಿಮ್ಮ ಸರ್ಕಾರದ ಮೇಲೆ ನಾವು ಅನೇಕ ಅಪಾದನೆಗಳನ್ನೂ ಕೂಡ ಹೊರಿಸಿದ್ದೇವೆ. ಕಂಟ್ರಾಕ್ಟ್ ವಿಲೇ ಮಾಡತಕ್ಕ ವಿಧಾನದಲ್ಲಿ ಆಕ್ಷೇಪಣೆ ಮಾಡಿದ್ದೇವೆ, ಅನೇಕ ದೂರುಗಳನ್ನೂ ಕೂಡ ಹೇಳಿದ್ದೇವೆ, ಅವುಗಳ ಬಗ್ಗೆ ನಾವು ಜವಾಬ್ದಾರಿಯುತವಾಗಿ ಹೇಳುತ್ತಾ ಇದ್ದೇವೆ, ಅವುಗಳನ್ನು ಪರಿಶೀಲನೆ ಮಾಡಿಲ್ಲ; ಇದು ನಿಮ್ಮಲ್ಲಿ ಒಂದು ದೊಡ್ಡ ಅಪರಾಧ ಎಂದು ಹೇಳುತ್ತಾ ಇದ್ದೇನೆ. ತಮ್ಮ ಕಂಟ್ರಾಕ್ಟ್ ವಿಲೇವಾರಿ ಯಾವ ರೀತಿ ನಡೆಯುತ್ತಾ ಇದೆ ಎಂದರೆ, ತಮಗೆ ಬೇಕಾದಂತಹ ದೊಡ್ಡ ದೊಡ್ಡ ಕಂಟ್ರಾಕ್ಟುದಾರರುಗಳು ಯಾರಿದ್ದಾರೋ ಅವರಿಗೆ ಪ್ರೋತ್ಸಾಹ ಮಾಡುವುದಕ್ಕೆ ಅಂಥ ಕೆಲವರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಟೆಂಡರನ್ನು ಕರೆಯುತ್ತಾ ಇದ್ದೀರಿ. ಹೋದ ವರ್ಷ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದೆವು. ಓರ್ ಕ್ಯಾರೀಯಿಂಗ್ ರಸ್ತೆಗಳಿಗೆ ಟಾರ್ ಹಾಕತಕ್ಕ ಕಾರ್ಯವನ್ನು ಮಾಡುವಾಗ ಟೆಂಡರ್‌ಗೆ ನಿಯಮವೇನಿದೆ ಎಂದರೆ ಮೆಷಿನ್ ಯಾರು ಹೊಂದಿದ್ದಾರೋ ಅಂತಹವರೇ ಈ ಕೆಲಸಕ್ಕೆ ಅರ್ಜಿ ಹಾಕಬೇಕೆಂಬ ನಿಬಂಧನೆಯನ್ನು ಹಾಕಿದ್ದೀರಿ. ಬೇರೆಯವರಿಗೆ ದೊರೆಯದೇ ಹೋಗಲಿ ಎಂಬ ದೃಷ್ಟಿಯನ್ನಿಟ್ಟುಕೊಂಡು ಇಂತಹ ಮೆಷಿನರಿಯೇ ಇರಬೇಕೆಂಬ ನಿಬಂಧನೆಯನ್ನು ಹಾಕಿ ತಾವು ಕೊಟ್ಟಂತಹ ಒಬ್ಬ ಕಂಟ್ರಾಕ್ಟುದಾರರಿಗೆ 5 ಲಕ್ಷ ರೂಪಾಯಿಗಳ ಸಾಲವನ್ನು ಪುನಃ ಸರ್ಕಾರದವರೇ ಕೊಟ್ಟು ಮೆಷಿನರಿ ಕೊಟ್ಟಂತಹ ವಿಚಾರವನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ. ಇವತ್ತಿನ ದಿವಸ ಮತ್ತೊಂದು ವಿಚಾರವನ್ನು ತಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಮೊನ್ನೆತಾನೆ ಕೇಂದ್ರದ ಸಚಿವರು ಬಂದು ಇಲ್ಲಿ ವಿಸ್ತಾರವಾದ ಹೋಟೇಲಿನ ನಿರ್ಮಾಣಕ್ಕೆ ಅಸ್ತಿಭಾರವನ್ನು ಹಾಕಿದರು, 5 ಸ್ಟಾರ್ ಹೋಟೇಲ್ ಅಂತ ಅದರ ಹೆಸರು. ಅದರ ನಿಬಂಧನೆಗಳೂ ಕೂಡ ತಮಗೆ ಯಾರಿಗೋ ಕೊಡಬೇಕೆಂಬ ದೃಷ್ಟಿಯನ್ನಿಟ್ಟು ತಾವು ಟೆಂಡರ್ ನೋಟಿಫಿಕೇಷನ್‌ನಲ್ಲಿ ಏನು ಹೇಳಿದ್ದೀರಿ ಎಂದರೆ, ಆ ಕೆಲಸಕ್ಕೆ ಅರ್ಜಿ ಹಾಕುವವರು (ಎ) ಕ್ಲಾಸ್ ಇರಬೇಕು ಎಂದು ಹೇಳಿದ್ದೀರಿ, ಎಲ್ಲರೂ ಅದಕ್ಕೆ ಟೆಂಡರ್ ಹಾಕುವಹಾಗೆ ಇಲ್ಲ. ಅಷ್ಟೇ ಅಲ್ಲದೆ (ಎ) ಕ್ಲಾಸ್ ಟೆಂಡರ್‌ದಾರರಾಗಿದ್ದು, ಯಾರು 5 ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ನ ಆರ್.ಸಿ.ಸಿ. ಕೆಲಸ ಮಾಡಿದ್ದಾರೋ ಅಂತಹವರೇ ಹಾಕಬೇಕೆಂದು ಹೇಳಿ ಕರಾರನ್ನು ಹಾಕಿರುವುದನ್ನು ನೋಡಿದರೆ ಯಾರೋ ಒಬ್ಬ ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟು ಮಾಡಿದ್ದೀರಿ ಎಂಬುದು ಚೆನ್ನಾಗಿ ವೇದ್ಯವಾಗುತ್ತದೆ. ಈಗಾಗಲೇ ನಿಮ್ಮ ಸರ್ಕಾರದ ಪರವಾಗಿ 5 ಮಲ್ಟಿಸ್ಟೋರೀಡ್ ಆಫೀಸ್ ಬಿಲ್ಡಿಂಗ್ ಕಟ್ಟಿರತಕ್ಕ ಕಂಟ್ರಾಕ್ಟುದಾರರಿಗೆ ಇದನ್ನು ಕೊಡಬೇಕೆಂಬ ದೃಷ್ಟಿಯಿಂದ ಈ ಕರಾರನ್ನು ಹಾಕಿರುವುದು ಸ್ಪಷ್ಟವಾಗುತ್ತದೆ:

> "In Class I in the Public Works Department contractors who have executed R.C.C. buildings of a minimum of five storeys and costing not less than 15 lakhs."

ಇಂತಹ ಒಂದು ಕಂಡೀಷನ್ ಹಾಕಿದ್ದೀರಿ. ಬಿಲ್ಡಿಂಗ್ ಕಟ್ಟತಕ್ಕ ನೈಪುಣ್ಯತೆ ಇರತಕ್ಕ ಕಂಟ್ರಾಕ್ಟುದಾರರು ಬೇಕು ನಿಜ. ಆದರೆ 5 ಸ್ಟೋರಿ, ಆರ್.ಸಿ.ಸಿ. ಕಟ್ಟಡ ಕಟ್ಟಿರತಕ್ಕ ಕಂಟ್ರಾಕ್ಟುದಾರರೇ ಆಗಬೇಕು 2—3 ಸ್ಟೋರಿ ಕಟ್ಟಿರತಕ್ಕವರು ಬೇಡ ಎಂದು ಹೇಳತಕ್ಕ ರೀತಿಯಲ್ಲಿ ಮಾಡಿರತಕ್ಕದ್ದರ

(ಶ್ರೀ ಎಸ್. ಶಿವಪ್ಪ)

ಔಚಿತ್ಯವಾದರೂ ಏನು ಎಂದು ಹೇಳಿ ತಮ್ಮಲ್ಲಿ ಕೇಳುತ್ತಾ ಇದ್ದೇನೆ. 5 ಸ್ಟೋರಿ ಆಗಲಿ, 10 ಸ್ಟೋರಿ ಆಗಲಿ ಕಟ್ಟಡ ಕಟ್ಟುವುದಕ್ಕೆ ಪ್ಲಾನ್ ಇದೆ, ಎಸ್ಟಿಮೇಟ್ ಇದೆ, ಮತ್ತು ಅದಕ್ಕೆ ಬೇಕಾದಂತಹ ಇಂಜನಿಯರುಗಳು ಇದ್ದಾರೆ. ಪ್ಲಾನ್ ಪ್ರಕಾರ ಕಟ್ಟತಕ್ಕ ಸೂಚನೆಗಳನ್ನು ಕೊಡುವುದಕ್ಕೆ ಅದರಲ್ಲಿ ಪರಿಶ್ರಮ ಹೊಂದಿರತಕ್ಕ ಇಂಜನಿಯರುಗಳು ಇರುತ್ತಾರೆ ಅವರ ಪ್ರಕಾರ ಅವರು ಕಟ್ಟುತ್ತಾರೆ. ಈ ರೀತಿಯಾಗಿ ಕಂಡೀಷನ್ ಹಾಕುವುದರಿಂದ ಏನು ಕಾಣುತ್ತಾ ಇದೆ ಎಂದರೆ, ಯಾರೋ ಒಬ್ಬ ಕಂಟ್ರಾಕ್ಟದಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ಕೆಲಸ ಕೊಡಬೇಕೆಂಬ ದೃಷ್ಟಿಯಿಂದ ಮಾಡಿದ್ದೀರಿ. 4—5 ಅಂತಸ್ತಿನ ಮಲ್ಟಿಸ್ಟೋರೀಡ್ ಬಿಲ್ಡಿಂಗ್ 16 ಲಕ್ಷ ರೂಪಾಯಿಗಳು ಎಂದು ಪ್ರಾರಂಭವಾದದ್ದು ಮುಗಿಯುವ ಹೊತ್ತಿಗೆ 4—5 ರಷ್ಟು ಆಯಿತು. ಬಹುಶಃ ಅದು ಇನ್ನೂ ಫೈನಲೈಸ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ 80 ಲಕ್ಷ ರೂಪಾಯಿ ಆದರೂ ಆಗಬಹುದು. ಈಗಲೂ ಕೂಡ 5 ಸ್ಟೋರಿ ಅಂತ ಹೇಳಿ 17 ಲಕ್ಷ ರೂಪಾಯಿನ ಎಸ್ಟಿಮೇಟ್ ಕರೆದಿದ್ದೀರಿ 17 ಲಕ್ಷ ರೂಪಾಯಿರಿಗುತ್ತದೆಯೋ ಒಂದು ಕೋಟಿ ರೂಪಾಯಿ ಆಗುತ್ತದೆಯೋ ಗೊತ್ತಿಲ್ಲ. ಒಬ್ಬ ಕಂಟ್ರಾಕ್ಟದಾರರಿಗೆ ಕೊಡುತ್ತೀರಿ ಮತ್ತು ಅದಕ್ಕೇ ಒಂದು ಡಿವಿಜನ್ ಮಾಡುತ್ತಾ ಇದ್ದೀರಿ. ನಿಮ್ಮ ಇಲಾಖೆಯಲ್ಲಿ ಇಷ್ಟು ಮಟ್ಟಿಗೆ ಹಣ ದುಂದು ವ್ಯಯವಾಗುತ್ತಾ ಇದೆ ಎನ್ನುವುದಕ್ಕೆ ಇದೂ ಒಂದು ಉದಾಹರಣೆ, ಇವತ್ತು 17 ಲಕ್ಷ ರೂಪಾಯಿಗಳ ಈ ಒಂದು ಕೆಲಸವನ್ನು ಮಾಡುವುದಕ್ಕೆ ಒಂದು ಡಿವಿಜನ್‌ನನ್ನೇ ಏರ್ಪಡಿಸುತ್ತಾ ಇದ್ದೀರಿ. ಇದರ ಔಚಿತ್ಯ ಏನು ? ಇದಕ್ಕೆ ಹಾಕಿರತಕ್ಕ ಇಂಜನಿಯರು ಸ್ಪೆಷಲೈಸ್ಡ್ ಆರ್ಕಿಟೆಕ್ಟ್ ಆಗಿರಬೇಕೆಂದು ಹೇಳಬಹುದು. ಈ ರೀತಿ ಅನೇಕ ಅನುಪಯುಕ್ತವಾದ ಇಲಾಖೆಗಳನ್ನು ಬೆಳೆಸಿದ್ದೀರಿ, ಇವತ್ತು ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಇನ್‌ವೆಸ್ಟಿಗೇಷನ್ ಡಿವಿಜನ್ ಅಂತ ಇದೆ, ಒಬ್ಬ ಎಕ್ಸಿಕ್ಯೂಟೀವ್ ಇಂಜನಿಯರು, ಸಿಬ್ಬಂದಿ ವರ್ಗ ಇದೆ, ಇನ್‌ವೆಸ್ಟಿಗೇಷನ್ ಎಲ್ಲಾ ಮುಗಿದು ಹೋಗಿ, ಸುಮಾರು 1—2 ಕೋಟಿ ರೂಪಾಯಿಗಳ ಕೆಲಸ ಮಾಡುವುದಕ್ಕೆ ಟೆಂಡರ್ ಕರೆದಿದ್ದೀರಿ, ಹಾಗಿರುವಾಗ ಆ ಡಿವಿಜನ್ ಇನ್ನೂ ಕೂಡ ಏಕೆ ಇರಬೇಕೆಂದು ಕೇಳುತ್ತಾ ಇದ್ದೇನೆ. ಅದಕ್ಕೆ ಬದಲಾಗಿ ಇನ್ನೊಂದು ವರ್ಕ್ ಡಿವಿಜನ್ ಕೊಡಿ ಎಂದರೆ ಸಿಬ್ಬಂದಿ ಇಲ್ಲ ಎಂದು ಒಂದು ಕಡೆ ಹೇಳುತ್ತೀರಿ, ಮತ್ತೊಂದು ಕಡೆ ಕೆಲಸ ಮುಗಿದು ಹೋದಮೇಲೂ ಕೂಡ ಇನ್‌ವೆಸ್ಟಿಗೇಷನ್ ಡಿವಿಜನ್‌ನನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೀರಿ. ಇದೇ ರೀತಿ ಅನೇಕ ಕಡೆಗಳಲ್ಲಿ ಮಾಡುತ್ತಾ ಇರತಕ್ಕ ದೃಷ್ಟಾಂತವನ್ನು ಬೇಕಾದರೆ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ.

ನಮ್ಮ ದೇಶದಲ್ಲಿ ನೀರಾವರಿ ಬಹಳ ಕಡಿಮೆ ದರ್ಜೆಯಲ್ಲಿದೆ. ಅದನ್ನು ಹೆಚ್ಚು ಮಾಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾ ಇದ್ದೇವೆ, ಅದನ್ನು ಕಾರ್ಯಗತ ಮಾಡತಕ್ಕ ಕಾರ್ಯ ಯಾವ ದಿಕ್ಕಿನಲ್ಲಿ ಹೋಗುತ್ತಾ ಇದೆ ಎಂಬುದನ್ನು ನಾವು ನೋಡಬಹುದಾಗಿದೆ, ಇವತ್ತು ಬಜೆಟ್‌ನಲ್ಲಿ ಮೇಜರ್ ಇರಿಗೇಷನ್‌ಗೆ ಸುಮಾರು 8 ಕೋಟಿ ರೂಪಾಯಿಗಳನ್ನು ತೋರಿಸಿದ್ದೀರಿ, ಇದರಿಂದ ಏನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಾವು ಇವತ್ತು ಹೇಳಲೇ ಬೇಕಾಗಿದೆ. ಮೊನ್ನೆ ಆಲಮಟ್ಟಿ ಯೋಜನೆಗೆ 12 ಕೋಟಿ ರೂಪಾಯಿ ಆಗುತ್ತದೆ ಆ ಒಂದು ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ, ಯಾವ ರೀತಿ ಆ ಒಂದು ತೀರ್ಪನ್ನು ತೆಗೆದುಕೊಂಡಿರೋ ಗೊತ್ತಿಲ್ಲ, ಅದಕ್ಕೆ ಹಣ ಮಾತ್ರ ಇಲ್ಲ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಕೇವಲ 15 ಲಕ್ಷ ರೂಪಾಯಿ ಮಾತ್ರ ಇದೆ. ಇದಕ್ಕೆ ಹಣ ಎಲ್ಲಿಂದ ಬರುತ್ತದೆ ಎಂಬುದನ್ನು ಕೂಡ ನಮಗೆ ತೋರಿಸಿಕೊಡಬೇಕು. ಇವತ್ತು ನಮ್ಮ ದೇಶದ ಇರಿಗೇಷನ್ ಪೊಟೆನ್ಷಿಯಾಲಿಟಿ 82 ಲಕ್ಷ ಎಕರೆ ಆಗಿದೆ. ಇದನ್ನು ಮಾಡಬೇಕಾದರೆ ಈ ವರ್ಷದ ಪ್ಲಾನ್‌ನಲ್ಲಿ ಎಷ್ಟು ಸಾಧ್ಯವಾಗುತ್ತದೆ ಎಂಬುದನ್ನು ಈಗಾಗಲೇ ಪರಿಣತರು ಲೆಕ್ಕಹಾಕಿ ಹೇಳಿದ್ದಾರೆ. ಬಹುಶಃ ಇದು ಪೂರ್ಣವಾಗಬೇಕಾದರೆ 5 ಅಥವಾ 6ನೇ ಪ್ಲಾನ್‌ನಲ್ಲೂ ಕೂಡ ಆಗುತ್ತದೆಯೋ ಇಲ್ಲವೋ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಮೈಸೂರು ದೇಶದ ಉತ್ತರ ಭಾಗದಲ್ಲಿ ಬಹುಭಾಗ ನೀರಾವರಿಗೆ ಬರುತ್ತದೆ ಶೇಕಡ 75 ಭಾಗದಷ್ಟು ಆಗದೇ ಇದ್ದರೂ ಶೇಕಡ 40—50 ಭಾಗ ಬರುವುದಕ್ಕೆ ಸಾಧ್ಯವಿದೆ. ಇದನ್ನು ಆದಷ್ಟು ಮಟ್ಟಿಗೆ ಮಾಡಬೇಕು ಅದು ಸರ್ಕಾರದವರ ಜವಾಬ್ದಾರಿ ; ಅದನ್ನು ಯಾರೂ ಕೂಡ ಅಲ್ಲಗಳೆಯುವ ಹಾಗಿಲ್ಲ. ದಕ್ಷಿಣ ಭಾಗದಲ್ಲಿ ಕಾವೇರಿ ಬೇಸಿನ್ ಬಿಟ್ಟರೆ ಬೇರೆ ನೀರನ್ನು ಹೊಂದತಕ್ಕ ಭಾಗ ಯಾವುದೂ ಇಲ್ಲ, ಆದ್ದರಿಂದ ಮೈನರ್ ಇರಿಗೇಷನ್‌ನಲ್ಲೂ ಕೂಡ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಈ ದಿವಸ ನಮ್ಮ ಹಳೇ ಮೈಸೂರಿನಲ್ಲಿ 26 ಸಾವಿರ ಕೆರೆಗಳಿರುತ್ತವೆ, ಕೋಸ್ಟಲ್ ವಿಭಾಗದಲ್ಲಿ 6 ಸಾವಿರ ಕೆರೆಗಳಿವೆ ಮತ್ತು ಉತ್ತರ ಭಾಗದಲ್ಲಿ 1700 ಕೆರೆಗಳಿವೆ. ಇವುಗಳನ್ನೆಲ್ಲಾ ದುರುಸ್ತು ಮಾಡಿ ಜನರಿಗೆ ರಾಜ್ಯದಲ್ಲಿ ನೀರಾವರಿ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಈ ಎಲ್ಲಾ ಕೆರೆಗಳನ್ನೂ ದುರಸ್ತಿ ಮಾಡುವುದಕ್ಕೆ ಈ ದಿವಸ ಸರ್ಕಾರದವರು ಬಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಏತಕ್ಕೂ ಸಾಲದು. ಇಷ್ಟೂ ನೀರಾವರಿಗೆ ಸಂಬಂಧಪಟ್ಟ ವಿಷಯಗಳಾಯಿತು.

3-00 P.M.

... ಇನ್ನೂ ಕಟ್ಟಡಗಳು ಮತ್ತು ರಸ್ತೆಗಳ ವಿಚಾರಕ್ಕೆ ಬಂದರೆ, ಈ ದಾಟಿನಲ್ಲಿ ಕೆಲಸ ಕಾರ್ಯಗಳು ನಡೆಯುತಕ್ಕ ರೀತಿ ಹಣವನ್ನು ಖರ್ಚುಮಾಡತಕ್ಕ ವಿಚಾರ ಈ ಬಗ್ಗೆ ನಾನು ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬಿಚ್ಛಿಸುತ್ತೇನೆ. ಸರ್ಕಾರದವರು ಈ ದಿವಸ ರಾಜ್ಯ ಭವನವನ್ನು ರಿಪೇರಿ ಮಾಡಿಸುವುದಕ್ಕಾಗಿ 13 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ ಅಷ್ಟಕ್ಕೆ ಅದನ್ನು ಅವರು ಕೈಬಿಟ್ಟಿಲ್ಲ. ಅದನ್ನು ಇಂಪ್ರೂವ್ ಮಾಡುವುದಕ್ಕಾಗಿ ಮತ್ತೆ 6 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಹೀಗೆ ಈ ಒಂದು ರಾಜ್ಯಭವನದ ನೆಪದಲ್ಲಿ ಸರ್ಕಾರದವರು ಒಂದು 13 ಲಕ್ಷ ಮತ್ತು ಒಂದು 6 ಲಕ್ಷ ಹೀಗೆ ಒಟ್ಟು 19 ಲಕ್ಷ ರೂಪಾಯಿಗಳನ್ನು ಇದಕ್ಕೆ ಒದಗಿಸಿದ್ದಾರೆ. ಇನ್ನು ದೇಶದಲ್ಲಿ ಅಲ್ಲಲ್ಲೇ ನಡೆಯಬೇಕಾಗಿರತಕ್ಕ ನೀರಾವರಿ ಕೆಲಸಗಳಿಗೆ ಆ ಶಿವಮೊಗ್ಗ ಡಿವಿಜನ್, ಬೆಳಗಾಂ ಡಿವಿಜನ್ ಮತ್ತು ಗುಲ್ಬರ್ಗ ಡಿವಿಜನ್ ಇವುಗಳಿಗೆಲ್ಲಾ 3 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ದೇಶದಲ್ಲಿ ಜನರಿಗೆ ಹೊಟ್ಟೆಗಿಲ್ಲದೆ, ಬೆಳೆಗಳಾಗದೆ ಅವರು ಕೊರಗುತ್ತಿದ್ದರೂ, ಇನ್ನೊಂದು ಕಡೆ ದೇಶದಲ್ಲಿ ಮಕ್ಕಳಿಗೆ ಓದುವುದಕ್ಕೆ ಶಾಲೆಗಳು ಇಲ್ಲ ಎಂದು ಹೇಳುತ್ತಿದ್ದರೂ ಅದನ್ನೆಲ್ಲಾ ಗಮನಿಸದೆ ಈ ಸರ್ಕಾರದವರು ಈ ರಾಜ್ಯಭವನವನ್ನು ಶೃಂಗಾರ ಮಾಡುವುದಕ್ಕಾಗಿ 19 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಹೊರಟಿದ್ದಾರೆ. ಇದು ಯಾವ ನೀತಿ ಎಂದು ಕೇಳುತ್ತೇನೆ. ಗ್ರಾಮದಲ್ಲಿ ಬಡಬಗ್ಗರು ಬಂದು ಒಂದು ಶಾಲೆಯನ್ನು ಕೊಡಿ ಎಂದು ಕೇಳಿದರೆ ಅವರಿಗೆ 2 ಸಾವಿರ ರೂಪಾಯಿಗಳ ಹಣವನ್ನು ಕೊಡಬೇಕೆಂದು ಒತ್ತಾಯಮಾಡುತ್ತಾರೆ. ಅಲ್ಲಿಗೆ ಹಣವಿಲ್ಲ ಎಂದು ಹೇಳತಕ್ಕ ಸರ್ಕಾರ ಇಲ್ಲಿ ರಾಜ್ಯಭವನದ ಶೃಂಗಾರಕ್ಕಾಗಿ 19 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲು ಹೊರಟಿದ್ದಾರೆ. ಇವರು ಹೀಗೆ ಹಣವನ್ನು ಖರ್ಚುಮಾಡುತ್ತಿದ್ದರೆ ಇವರು ಇನ್ನು ಯಾವ ರೀತಿ ಮಿತವ್ಯಯ ಸಾಧನೆ ಮಾಡುತ್ತಾರೆಂದು ನಾನು ಇವರನ್ನು ಪ್ರಶ್ನೆ ಮಾಡಬೇಕಾಗಿದೆ. ಈ ದಿವಸ ಪಿ. ಡಬ್ಲ್ಯು. ಡಿ. ಗೆ ಸಹಸ್ರಾರು ಮೈಲಿ ರಸ್ತೆಗಳನ್ನು ತೆಗೆದುಕೊಳ್ಳಲಾಗಿದೆ. ಅದರ ಜೊತೆಗೆ ಅನೇಕ ಅಪ್ರೋಚ್ ರೋಡುಗಳನ್ನು ಬೇರೆ ತೆಗೆದುಕೊಂಡಿದ್ದಾರೆ. ಇವುಗಳಲ್ಲಿ ಈಗಾಗಲೇ ಅನೇಕ ರಸ್ತೆಗಳು ಮಾಯವಾಗಿವೆ; ಅವು ಪತ್ತೆಯೇ ಇಲ್ಲ. ಅವುಗಳೆಲ್ಲಾ ಮಳೆ ಬಂದು ಕೊಚ್ಚಿಹೋಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದಂಥ ರಸ್ತೆಗಳೆಲ್ಲಾ ಹಾಳಾಗುತ್ತಿವೆ. ಇವುಗಳನ್ನು ಮೊದಲು ಉತ್ತಮಗೊಳಿಸಬೇಕಾದ್ದು ಸರ್ಕಾರದವರ ಮೊದಲನೇ ಕರ್ತವ್ಯ. ರಾಜ್ಯದಲ್ಲಿ ಅನೇಕ ಭಾಗದಲ್ಲಿ ಎತ್ತಿನ ಗಾಡಿಗಳು ಹೋಗುವುದಕ್ಕೆ ದಾರಿ ಇಲ್ಲದಿರುವುದೂ ಹಾಗಿರಲಿ, ಕೆಲವು ಕಡೆ ಕಾಲು ನಡಿಗೆಯಲ್ಲಿ ಹೋಗುವುದಕ್ಕೂ ಕೂಡ ಅವಕಾಶವಿರುವುದಿಲ್ಲ. ಅಂಥಾ ಕಡೆಗಳಲ್ಲಿಯಾದರೂ ಕೂಡಲೆ ರಸ್ತೆಗಳನ್ನು ಮಾಡಿಸಲೇಬೇಕು ಎಂದು ನಾನು ಆಗ್ರಹ ಪೂರ್ವಕವಾಗಿ ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಯಾವ ರೀತಿ ದಕ್ಷತೆ ಇದೆ, ಕೆಲಸಕಾರ್ಯಗಳು ಹೇಗೆ ನಡೆಯುತ್ತಿವೆ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಕಡೆ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡಿ ಸೇತುವೆಗಳನ್ನು, ಕಟ್ಟಡಗಳನ್ನು ಕಟ್ಟಿಸಲಾಯಿತು. ಆದರೆ ಅವು 3—4 ತಿಂಗಳು ಸಹಾ ಇರಲಿಲ್ಲ, ಬಿದ್ದುಹೋದವು. ಉದಾಹರಣೆಗೆ ಕಾಗೇಹಳ್ಳ. ಅದು ಭದ್ರಾ ಕಾಲುವೆಯ ಮಧ್ಯಪ್ರದೇಶದಲ್ಲಿದೆ. ಅಲ್ಲಿ ಕಟ್ಟೆ ಒಡೆದು ಆ ನೀರೆಲ್ಲಾ ಜಮೀನುಗಳ ಮೇಲೆ ನುಗ್ಗಿ ಬೆಳೆಗಳು ಹೋಗಿ ರೈತರನ್ನು ಕೋಟ್ಯಾಂತರ ರೂಪಾಯಿಗಳ ನಷ್ಟಕ್ಕೀಡುಮಾಡಿತು. ಕೋಟ್ಯಾಂತರ ರೂಪಾಯಿಗಳ ಬೆಲೆಬಾಳತಕ್ಕ ನೆಲಗಡಲೆಕಾಯಿ ಹಾಳಾಯಿತು. ಅದನ್ನು ಕಟ್ಟಿ ಇನ್ನೂ 2—3 ವರ್ಷಗಳು ಸಹಾ ಆಗಿರಲಿಲ್ಲ. ಇಂಥಾ ಅಭದ್ರವಾದ ಕೆಲಸವನ್ನು ಮಾಡಿದ ಕಂಟ್ರಾಕ್ಟರು ಯಾರು, ಆ ಕೆಲಸವನ್ನು ಸೂಪರ್‌ವೈಜ್‌ಮಾಡಿದ ಇಂಜನಿಯರು ಯಾರು ಎಂಬುದನ್ನು ಪತ್ತೆಮಾಡಿ ಅವರಿಗೆ ಕ್ರೂರವಾದ ಶಿಕ್ಷೆಯನ್ನು ವಿಧಿಸಬೇಕಾಗಿತ್ತು. ಇನ್ನು ನೆನ್ನೆತಾನೆ ಶ್ರೀಮಾನ್ ಗೋಪಾಲಗೌಡರು ಶರಾವತಿ ವ್ಯಾಲಿಯಲ್ಲಿ ಒಂದು ಹೊಸದಾಗಿ ಕಟ್ಟಿದ್ದ ಸೇತುವೆ ಒಡೆದು ಅಲ್ಲಿ ವಾಸಮಾಡತಕ್ಕ ಜನರು ದ್ವೀಪಾಂತರ ವಾಸಿಗಳಂತೆ ನೀರಿನ ಮಧ್ಯದಲ್ಲಿ ಉಳಿದಿದ್ದಾರೆಂದು ಹೇಳಿದರು. ಅವರು ಈಚೆಗೆ ಬರುವುದಕ್ಕೆ ಮಾರ್ಗವಿಲ್ಲದಂತಾಗಿದೆ ಎಂಬುದಾಗಿ ಅವರು ಹೇಳಿದ್ದಾರೆ. ಆ ಕೆಲಸಗಳಿಗೆ ಕೊಡತಕ್ಕ ಕಬ್ಬಿಣ ಮತ್ತು ಸಿಮೆಂಟನ್ನು ಸರಿಯಾಗಿ ಹಾಕದೆ ಹಣವನ್ನೆಲ್ಲಾ ನೀರುಪಾಲು ಮಾಡಿದ್ದಾರೆ. ಆ ಶರಾವತಿ ವ್ಯಾಲಿಯಲ್ಲಿ ಪ್ರತಿವರ್ಷವೂ ಹೀಗೇ ಆಗುತ್ತಿದೆ. ಅಲ್ಲಿ ಹೀಗೆ ಲಕ್ಷಾಂತರ ರೂಪಾಯಿ ಹಾಳಾಗಿದೆ. ಆದರೆ ನಾನು ಹೇಳತಕ್ಕ ವಿಚಾರಗಳನ್ನೆಲ್ಲಾ ಸರ್ಕಾರದವರು ನಿರಾಕರಣೆಮಾಡಬಹುದು. ನಾನು ಇರತಕ್ಕದ್ದನ್ನು ಹೇಳಿದರೂ ತಾವು ಒಪ್ಪದಿದ್ದರೆ ಅದಕ್ಕೆ ಯಾರು ಏನು ಮಾಡುವುದಕ್ಕೆ ಸಾಧ್ಯ? ಅನೇಕ ಸ್ಕೂಲ್ ಕಟ್ಟಡಗಳೂ ಸಹಾ ಹೀಗೆ ಕಟ್ಟಿದ 2—3 ತಿಂಗಳಲ್ಲೇ ಬಿದ್ದುಹೋಗಿರತಕ್ಕ

(ಶ್ರೀ ಎಸ್. ಶಿವಪ್ಪ)

ನಿದರ್ಶನಗಳು ಇವೆ. ಹೀಗೆ ದೇಶದ ವರಮಾನ ಹಾಳಾಗುತ್ತಿದ್ದರೆ ದೇಶಾಭ್ಯುದಯದ ಕೆಲಸಗಳಿಗೆ ದುಡ್ಡೆಲ್ಲಿಂದ ಬರಬೇಕು? ಅಂಥಾ ಕೆಟ್ಟ ಕೆಲಸಗಳನ್ನು ಮಾಡಿದ ಕಂಟ್ರಾಕ್ಟರ್ ಹಾಗೂ ಇಂಜಿನಿಯರುಗಳನ್ನು ವಿಚಾರಣೆಮಾಡಿ ಅವರಿಗೆ ತಕ್ಕ ಶಿಕ್ಷೆಯನ್ನಾದರೂ ವಿಧಿಸಿದ್ದಾರೆಯೇ ಎಂದರೆ ಅದೂ ಇಲ್ಲ. ಹೀಗೆ ಕೆಲಸಗಳು ಮುಂದುವರಿದರೆ ಮುಂದೆ ದೇಶಕ್ಕೆ ಬಹಳ ಕೆಟ್ಟ ಪರಿಣಾಮವಾಗುತ್ತದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಿಬ್ಬಂದಿಯ ವಿಚಾರಕ್ಕೆ ಬಂದರೆ—ಇದು ತಲೆಶಿರೋಭಾರ ಎನ್ನುವ ಹಾಗೆ ಕೆಲಸ ಮಾಡುತ್ತಿದೆ ಎನ್ನಬಹುದು. ನಮ್ಮ ಶ್ರೀಮಾನ್ ವೀರೇಂದ್ರಪಾಟೀಲರು ಒಂದು ಕಡೆ ನಾವು ಕೇಳತಕ್ಕ ಕೆಲಸಗಳಿಗೆ ಹಣವಿಲ್ಲ ಎಂದು ಹೇಳುತ್ತಿದ್ದರೆ ಅವರು ಇನ್ನೊಂದು ಕಡೆ ಲೆಕ್ಕವಿಲ್ಲದಷ್ಟು ಚೀಫ್ ಇಂಜಿನಿಯರುಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಒಂದು ಕಡೆ 12 ಐಟಂಗಳ ಲೆಕ್ಕವನ್ನು ತೋರಿಸಿದ್ದಾರೆ. ಇನ್ನೊಂದು ಕಡೆ ಇನ್ನೆಷ್ಟು ಲೆಕ್ಕ ತೋರಿಸಿ ಎಲ್ಲಾ ಕನ್‌ಫ್ಯೂಷನ್ ಮಾಡಿದ್ದಾರೆ, ಅಂತೂ ಈ ದಿವಸ ನಮ್ಮ ರಾಜ್ಯದಲ್ಲಿ ಆರೇಳು ಜನರು ಚೀಫ್ ಇಂಜಿನಿಯರುಗಳಿದ್ದಾರೆ. ಇಷ್ಟು ಜನರಿಗೂ ಏನು ಕೆಲಸವಿದೆ? ಯಾರು ಈ ಎಲ್ಲಾ ಚೀಫ್ ಇಂಜಿನಿಯರುಗಳ ಮೇಲೆ ಸೂಪರ್‌ವಿಷನ್ ಮಾಡುತ್ತಿದ್ದಾರೆ? ಇದರಲ್ಲಿ ಕೆಳಗಿನವರು ಯಾರು, ಮೇಲಿನವರು ಯಾರು? ಇವರಲ್ಲಿ ದಕ್ಷರು ಯಾರು? ಈ ಒಂದನ್ನೂ ನೋಡದೆ ಅವರನ್ನು ನೇಮಕ ಮಾಡಿರುವುದರಿಂದ ಅವರಲ್ಲಿ ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಮನಸ್ಸಿರುವುದಿಲ್ಲ. ಹೀಗೆ ಮೈಸೂರು ಸರ್ಕಾರದವರು ಎಲ್ಲಿಯವರೆಗೆ ಅಧಿಕಾರಿಗಳ ದಕ್ಷತೆ ಶಕ್ತಿಸಾಮರ್ಥ್ಯಗಳನ್ನು ನೋಡದೆ ಅವರಿಗೆ ಬಡತಿಗಳನ್ನು ಕೊಡುತ್ತಾ ಹೋಗುತ್ತಾರೋ ಅಲ್ಲಿಯವರೆಗೂ ರಾಜ್ಯದಲ್ಲಿ ನಡೆಯತಕ್ಕ ಕೆಲಸಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲ. ಅದರಿಂದ ದೇಶಕ್ಕೂ ಕೂಡ ಭಾರಿ ಕೆಡಕನ್ನುಂಟುಮಾಡಿದ ಹಾಗೆ ಆಗುತ್ತದೆಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಅಷ್ಟೇ ಅಲ್ಲ—ಈ ರಾಜ್ಯದಲ್ಲಿ ಸತ್ಯವಂತರಾದ, ನಿಷ್ಠಾವಂತರಾದ, ದಕ್ಷರಾದ ಅಧಿಕಾರಿಗಳಿಗೂ ಮತ್ತು ಕಂಟ್ರಾಕ್ಟರ್‌ಗೂ ಈ ಇಲಾಖೆಯಲ್ಲಿ ಪುರಸ್ಕಾರವಿಲ್ಲ. ಅವರು ನಿಷ್ಠೆಯಿಂದ ಕೆಲಸಮಾಡುವುದಕ್ಕೂ ಇಲ್ಲಿ ಅವಕಾಶವಿಲ್ಲ. ಅವರು ಅಡ್ಡದಾರಿಯನ್ನು ಹಿಡಿಯಲೇಬೇಕು. ನನಗೆ ಒಬ್ಬ ಕಂಟ್ರಾಕ್ಟರು ಸಿಕ್ಕಿದ್ದ, ಅವನು ಹೀಗೆ ಹೇಳುತ್ತಿದ್ದ: ಏನಯ್ಯಾ, ಕಂಟ್ರಾಕ್ಟ್ ಮಾಡಿ ದುಡ್ಡು ಮಾಡುವುದಕ್ಕೆ ನೀನೂ ಕೂಡ ಸಾಲ ಮಾಡಿದ್ದೀಯೇ ಎಂದು ಕೇಳಿದ್ದಕ್ಕೆ ಅವನು ನಾನೇನು ಮಾಡಲಿ, ನನಗೆ ಇಂಜನಿಯರುಗಳ ಕಾಟವೆಂದು ಹೇಳಿದನಂತೆ. ಆಗ ಕಂಟ್ರಾಕ್ಟರ್ ಆತನನ್ನು ಎಲ್ಲೋ ನೀನು ಗಾಂಧಿ ಗೋಡ್ದು ಎಂದು ಹೇಳಿ ಇವತ್ತು ನಿಜವಾಗಿ ಕಂಟ್ರಾಕ್ಟ್ ಮಾಡಿ ಚೆನ್ನಾಗಿ ದುಡ್ಡು ಮಾಡಬೇಕಾದರೆ ನನ್ನ ಜೇಬು ತುಂಬ ದುಡ್ಡು ತುಂಬಬೇಕಾದರೆ ಅವರ ಜೇಬೂ ತುಂಬಬೇಕು ಎಂದು ಅಂದನಂತೆ. ಹಾಗೆ ಇಲ್ಲಿ ಆಗಿದೆ. ಬುದ್ಧಿವಂತನಾದ ಕಂಟ್ರಾಕ್ಟರ್ ಇಂಜನಿಯರುಗಳನ್ನು ಪ್ರಶ್ನೆ ಮಾಡಬಾರದು. He must obey the instructions. ಆ ರೀತಿ ಮಾಡಿದರೆ ಅತ ಒಳ್ಳೆಯ ಕಂಟ್ರಾಕ್ಟರ್ ಆಗುವುದಕ್ಕೆ ಸಾಧ್ಯ. ನೇರವಾಗಿ ಸತ್ಯವಂತನಾಗಿ, ನಿಷ್ಠೆಯಿಂದ ಯಾವನು ಕಂಟ್ರಾಕ್ಟ್ ಕೆಲಸ ಮಾಡುತ್ತಾನೋ ಅಂತಹವನಿಗೆ ಈ ದೇಶದಲ್ಲಿ ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವಾತನು ನಿಷ್ಠೆಯಿಂದ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತಾನೋ ಅಂತಹವನಿಗೆ ನಿಜವಾಗಿ ಪ್ರೋತ್ಸಾಹ, ಬಲ ಕೊಡದೇ ಹೋದರೆ ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ನ್ಯಾಯವಾಗಿ ಆ ಕೆಲಸಗಳು ಆಗುವುದಿಲ್ಲ. ಎಷ್ಟು ಕಬ್ಬಿಣ ಮತ್ತು ಸಿಮೆಂಟ್ ಬೇಕೋ ಅಷ್ಟು ಹಾಕುವುದಿಲ್ಲ. ಅಲ್ಲಿ ಮೋಸ ಜರುಗುತ್ತದೆ. ಇದನ್ನು ಸರ್ಕಾರದವರು ತಿಳಿದು ಮಾಡಬೇಕಾಗಿದೆ.

ಕೊನೆಯದಾಗಿ ಒಂದು ವಿಚಾರವನ್ನು ಹೇಳುತ್ತೇನೆ. ಇವತ್ತು ನಮ್ಮ ಮೈಸೂರು ದೇಶದಲ್ಲಿ ಕ್ಲಾಸಿಫೈಡ್ ಕಂಟ್ರಾಕ್ಟರ್ಸ್ ಎಂದು ಹೇಳಿ ಎ. ಬಿ. ಸಿ. ಕ್ಲಾಸ್ ಎಂಬುದಾಗಿ ವರ್ಗಮಾಡಿದ್ದೀರಿ. ಅಲ್ಲಿ ಕೂಡ ಬೇರೆ ಬೇರೆ ವರ್ಗ ಇಟ್ಟಿದ್ದೀರಿ. ಇದು ಯಾವ ಸಮಾಜವಾದ ನೀತಿ ಅಥವಾ ತತ್ವವೆಂದು ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತಿದ್ದೀರಿ. ಆ ರೀತಿಯಾಗಿ ವರ್ಗ ವಿಂಗಡಣೆ ಮಾಡಿರುವುದರಿಂದ "ಎ" ಕ್ಲಾಸ್ ಕಂಟ್ರಾಕ್ಟರ್ಸ್ ಮಾತ್ರ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದಾಗಿ ಹೇಳಿದ್ದೀರಿ. ಅನೇಕ ಜನ ವಿದ್ಯಾವಂತ ಕಂಟ್ರಾಕ್ಟರುಗಳು ಹಣವಿಲ್ಲದೆ ಬಡತನದಲ್ಲಿದ್ದು ನಿಷ್ಠಾವಂತರಾಗಿ ಕೆಲಸ ಮಾಡುವವರಾಗಿದ್ದರೂ ಇಂತಹ ಕೆಲಸಗಳಿಗೆ ಅವರು ಬರುವುದಕ್ಕೆ ಸಾಧ್ಯವಿಲ್ಲ, ದಾರಿ ಇಲ್ಲ, ಆದರೆ "ಎ" ಕ್ಲಾಸ್ ಕಂಟ್ರಾಕ್ಟರುಗಳಿಗೆ ಇವರು ಸುಮಾರು 20-30-40 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ನೀವು ಏಕೆ ಅವರಿಗೆ ಸಾಲ ಕೊಟ್ಟಿದ್ದೀರೆಂದು ನಾನು ಈಗ ಪ್ರಶ್ನೆ ಮಾಡುತ್ತೇನೆ. ಸಾಲವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟು ಯೋಜನಾ ಕೆಲಸಗಳನ್ನು ಮಾಡಿಸು

ವುವರ ವೈಶಿಷ್ಟ್ಯವೇನು ? ಈಗ ಬೇಕಾದಷ್ಟು ವಿದ್ಯಾವಂತ ಬಡ ಕಂಟ್ರಾಕ್ಟರ್ಸ್ ಇದ್ದಾರೆ. ಗ್ರಾಜುಯೇಟುಗಳಾಗಿದ್ದಾರೆ. ಅಂತಹವರಿಗೆ ಈ ಕೆಲಸಗಳನ್ನು ಕೊಡಿ. ಕಂಟ್ರಾಕ್ಟರ್ಸ್ ಮುಖಾಂತರ ಇಂತಹ ಯೋಜನಾ ಕೆಲಸಗಳನ್ನು ಮಾಡಿಸತಕ್ಕ ಪದ್ಧತಿಯನ್ನು ಬದಲಾಯಿಸಿ ಸರ್ಕಾರದವರೇ ಹೇರಳವಾಗಿ ಸಿಬ್ಬಂದಿಗಳನ್ನು ಇಟ್ಟುಕೊಂಡು 6-7 ಜನ ಚೀಫ್ ಇಂಜನಿಯರ್ಸ್ ಮುಖಾಂತರ ಇಂತಹ ದೊಡ್ಡ ದೊಡ್ಡ ಯೋಜನಾ ಕೆಲಸ ಕಾರ್ಯ ಮಾಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ. ಇವತ್ತು ಈ ಸಭೆ ನಡೆಯುತ್ತಿರುವ ವಿಧಾನಸೌಧ ಕಟ್ಟಡವನ್ನು ಯಾವೊಬ್ಬ ಕಂಟ್ರಾಕ್ಟರೇ ಕಟ್ಟಿಲ್ಲ. ಈ ಕಟ್ಟಡದ ಅನೇಕ ಕೆಲಸಗಳನ್ನು ಪೀಸ್‌ವರ್ಕ್ ಸಿಸ್ಟಂನಲ್ಲಿ ಇಲಾಖೆಯವರೇ ಕಟ್ಟಿದ್ದಾರೆ. ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಅನೇಕ ಕಟ್ಟಡಗಳನ್ನೂ ಬಹಳ ಚೆನ್ನಾಗಿ ಕಟ್ಟಿದ್ದಾರೆ, ದೊಡ್ಡ ದೊಡ್ಡ ಸೇತುವೆಗಳನ್ನೂ ಇಲಾಖೆಯವರೇ ಕಟ್ಟಿದ್ದಾರೆ. ಅನೇಕ ಪ್ರಾಜೆಕ್ಟುಗಳನ್ನೂ ಸಹ ಇಲಾಖೆಯವರೇ ಕಟ್ಟಿದ್ದಾರೆ. ಆದರೆ ಈ ಇಲಾಖೆಯ ನೀತಿ ಸರಿಯಿಲ್ಲ. 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಇರುವ ಕೆಲಸವನ್ನು ಇಲಾಖೆಯವರು ನೇರವಾಗಿ ಪೀಸ್‌ವರ್ಕ್ ಮುಖಾಂತರ ಮಾಡಿದರೆ ಆ ಕೆಲಸ ಬಹಳ ಅಚ್ಚುಕಟ್ಟಾಗಿ ನಡೆಯುತ್ತದೆ. ಅದು ಲಾಭದಾಯಕವಾಗಿಯೂ ಇರುತ್ತದೆ.

ಇನ್ನು ನೀರಾವರಿ ಮತ್ತು ರಸ್ತೆ ರಿಪೇರಿ, ಹಾಗೂ ಕಟ್ಟಡಗಳ ನಿರ್ಮಾಣ ಈ ಬಾಬುಗಳಿಗೆ ಹಣವನ್ನು ಖರ್ಚುಮಾಡುವ ಬಗ್ಗೆ ಯಾವ್ಯಾವ ತಾಲ್ಲೂಕುಗಳಿಗೆ, ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಿದ್ದಾರೆಂಬುದನ್ನು ಇದರಲ್ಲಿ ನಮೂದು ಮಾಡದೆ ಇವರು ಬಹಳ ವೊಗಂ ಆಗಿ ಒಂದು ಲಂಪ್‌ಸಂ ಗ್ರಾಂಟು ಎಂಬುದಾಗಿ ತೋರಿಸುವ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇವತ್ತು ಒಂದು ಸಣ್ಣ ನೀರಾವರಿ ಕೆಲಸ ಆಗಬೇಕಾದರೂ ಕೂಡ ಅದನ್ನು ಯಾರು ಮಂಜೂರು ಮಾಡುತ್ತಾರೆಂದು ಕೇಳುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಅಸಿಸ್ಟೆಂಟ್ ಇಂಜನಿಯರನ್ನು ಕೇಳಬೇಕೇ ಜಿಲ್ಲಾ ಮಟ್ಟದ ಎಗ್ಸಿಕ್ಯೂಟೀವ್ ಇಂಜಿನಿಯರನ್ನು ಕೇಳಬೇಕೇ ಅಥವಾ ಚೀಫ್ ಇಂಜನಿಯರನ್ನು ಕೇಳಬೇಕೇ ? ಯಾರನ್ನು ಕೇಳಬೇಕು ಎಂಬುದೇ ಗೊತ್ತಾಗುವುದಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಸರ್ಕಾರದ ಹತ್ತಿರವೇ ಬರಬೇಕು. ಅವರೇ ಪ್ರತಿಯೊಂದನ್ನೂ ಮಂಜೂರು ಮಾಡಬೇಕೆಂದು ಹೇಳುವ ತತ್ವ ಬಹಳ ಕೆಟ್ಟ ತತ್ವ. ನೀವು ಈಗ ಪ್ರತಿಯೊಂದು ಕೆಲಸವನ್ನೂ ವಿಭಾಗ ಮಾಡಿ ಆಯಾ ಇಲಾಖೆಗಳಿಗೆ ಒಬ್ಬೊಬ್ಬ ಅಧಿಕಾರಿಯನ್ನು ನಿಗದಿಸಿದ್ದೀರಿ. ಅಂದ ಮೇಲೆ ಒಬ್ಬ ಎಂ. ಎಲ್. ಎ. ಆದವನು ತನ್ನ ಒಂದು ಕ್ಷೇತ್ರದಲ್ಲಿ ಒಂದು ರಸ್ತೆ ಕೆಲಸವಾಗಲೀ, ಅಥವಾ ಕೆರೆ ರಿಪೇರಿಯಾಗಲಿ ಆಗಬೇಕು ಎಂದರೆ, ಮಂತ್ರಿಗಳ ಹತ್ತಿರ ಏಕೆ ಹೋಗಬೇಕು ? ಅಸಿಸ್ಟೆಂಟ್ ಇಂಜನಿಯರ ಹತ್ತಿರ ಹೋದರೆ ಎಗ್ಸಿಕ್ಯೂಟಿವ್ ಇಂಜನಿಯರ್ ಹತ್ತಿರ ಹೋಗಿ ಎನ್ನುವುದು, ಎಗ್ಸಿಕ್ಯೂಟಿವ್ ಇಂಜನಿಯರ್ ಹತ್ತಿರ ಹೋದರೆ ಚೀಫ್ ಇಂಜಿನಿಯರ್ ಹತ್ತಿರ ಹೋಗಿ ಎನ್ನುವುದು, ಚೀಫ್ ಇಂಜನಿಯರ್ ಹತ್ತಿರ ಹೋದರೆ ಮಂತ್ರಿಗಳನ್ನು ಕೇಳಿ ಎಂದು ಹೇಳುವುದು, ಇದು ಯಾವ ನ್ಯಾಯ ? ಖಂಡಿತ ಇದು ಸರಿಯಿಲ್ಲ. ನಿಮ್ಮನ್ನು ಮಂತ್ರಿವರ್ಯರೇ, ಮಹಾಸ್ವಾಮಿಗಳೇ ಎಂದು ಹೇಳಿ ಅರ್ಜಿ ಕೊಡಬೇಕೆ, ಅಥವಾ ನಿಮ್ಮನ್ನೇನಾದರೂ ಒಡ್ಡೋಲಗದಲ್ಲಿ ಮೆರವಣಿಗೆ ಮಾಡಿಕೊಂಡು ಹಸುರುವಾಣಿ ಚಪ್ಪರಕ್ಕೆ ಕರೆತಂದು ಗೌರವಿಸಿ ಏನಾದರೂ ಹೇಳಬೇಕೇ ತಿಳಿಸಿ. ನಿಮಗೆ ಏನು ಬೇಕೋ ಹೇಳಿದರೆ ಆ ರೀತಿಯೇ ಮಾಡುತ್ತೇವೆ. ಏನೋ ಒಂದು ಭಯದಿಂದ ನಿಮಗೆ ಆ ಮಾತನ್ನು ಹೇಳುವುದಕ್ಕೆ ಕಷ್ಟವಿರಬಹುದು. ಏಕೆ ಆ ಭಯ ? ನಿಮಗೆ ಒಡ್ಡೋಲಗದಲ್ಲಿ ಮೆರವಣಿಗೆ ಮಾಡಬೇಕೆಂದರೆ, ಹಾಗೆಯೇ ಮಾಡುತ್ತೇವೆ. ಆದ್ದರಿಂದ ಅಂತಹ ಕೆಲಸಗಳನ್ನು ಮಾಡಿಸಬೇಕಾದರೆ ನಾವು ಯಾರನ್ನು ಕೇಳಬೇಕು ಎಂಬುದನ್ನು ದಯವಿಟ್ಟು ತಿಳಿಸಬೇಕು. ತಾವು ಇವತ್ತು ನಿಮ್ಮ ಅಧಿಕಾರಿವರ್ಗದವರಲ್ಲಿ ಇಂಥಿಂಥ ಅಂತಸ್ತುಗಳ ಕೆಲಸ ಇಂಥಿಂಥವರಿಗೆ ಇರಬೇಕೆಂದು ಹೇಳಿ ಆ ಕೆಲಸಗಳ ಬಗ್ಗೆ ಅವರ ಜವಾಬ್ದಾರಿ ಎಂದು ಹಂಚದ ಹೊರತು ಈ ಕೆಲಸ ಕಾರ್ಯಗಳು ಸಾಧನೆಯಾಗುವುದಿಲ್ಲ. ಆ ರೀತಿ ಮಾಡದೆ ಎಲ್ಲವನ್ನೂ ನೀವೇ ಇಟ್ಟುಕೊಂಡು ಎಲ್ಲರೂ ನಿಮ್ಮ ಬಳಿಗೇ ಬರಬೇಕೆಂದು ಹೇಳಿದರೆ ಅದು ಖಂಡಿತವಾಗಿ ಸಾಧ್ಯವಾಗುವುದಿಲ್ಲ. ನಾನು ಏಕೆ ಅಂತಹ ಒಂದು ಕೆಲಸಕ್ಕಾಗಿ ನಿಮ್ಮ ಬಳಿಗೆ ಬರಬೇಕು ? I don't like to be a petitioner before the Minister. ನಾನೊಬ್ಬ ಅರ್ಜಿದಾರನಾಗಬೇಕೇ ? ನಿಮ್ಮ ಮನೆ ಬಾಗಿಲನ್ನು ತಟ್ಟಿ ಮಂತ್ರಿಗಳಲ್ಲಿ ನಿಯೋಗ ಹೋಗಬೇಕೇ ? ತಾವು ದಯವಿಟ್ಟು ಶಾಸನ ಸಭಾ ಸದಸ್ಯರನ್ನು ಹೆಚ್ಚಿನ ಗೌರವದಿಂದ ಕಾಣಬೇಕಾಗಿದೆ. ಎಲ್ಲರನ್ನೂ ಒಂದೇ ಸಮನಾಗಿ ಕಾಣಬೇಕು. ಒಟ್ಟಿನಲ್ಲಿ ಆಯಾ ಕ್ಷೇತ್ರದ ಕೆಲಸ ಕಾರ್ಯಗಳು ವಿಳಂಬವಾಗದೆ ಕೂಡಲೇ ಅಧಿಕಾರಿಗಳಿಂದ ನಡೆಯುವ ಮಾರ್ಗವನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಹೇಳಿ ಸಭಾಧ್ಯಕ್ಷರಿಗೆ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ವಂದಿಸಿ ಈ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಮರಾಮತ್ತು ಇಲಾಖೆಯ ಮಂತ್ರಿವರ್ಯರು ಈ ದಿನ ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಅವರ ಪರ್ಯಾಲೋಚನೆಗೆ ಮಂಡಿಸಬೇಕೆಂದು ಆಶಿಸುತ್ತೇನೆ. ಮೊಟ್ಟಮೊದಲನೆಯದಾಗಿ ಈ ದಿವಸ ಜನತೆಯ ಆಶೆ ಆಕಾಂಕ್ಷೆಗಳನ್ನು ಸರ್ಕಾರದವರು ಈಡೇರಿಸುವಾಗ ಬೇಸಾಯಗಾರರಿಗೆ ಪ್ರಧಾನವಾಗಿರತಕ್ಕ ಈ ದೇಶದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ವ್ಯವಸ್ಥೆ ಮಾಡಬೇಕು. ಕಳೆದ ಸುಮಾರು 15 ವರ್ಷಗಳಿಂದಲೂ ಸಣ್ಣ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಒದಗಿಸಿರತಕ್ಕ ಮೊಬಲಗನ್ನು ವರ್ಷಂಪ್ರತಿ ಹೆಚ್ಚು ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಆರ್ಥಿಕ ಮುಗ್ಗಟ್ಟು ಪರಿಸ್ಥಿತಿ ಇದ್ದಾಗ್ಯೂ ಈ ಬಾಬಿಗೆ ಎಷ್ಟು ಪ್ರಾಶಸ್ತ್ಯ ಕೊಡಬೇಕೋ ಅಷ್ಟನ್ನು ಕೊಡುತ್ತಾ ಇಲ್ಲ. ಈಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಎಷ್ಟೋ ಹಣವನ್ನು ವಿನಿಯೋಗ ಮಾಡುತ್ತಿದ್ದರೂ ಅವು ಶೀಘ್ರವಾಗಿ ಪ್ರತಿಫಲ ಕೊಡುವ ಸ್ಥಿತಿಯಲ್ಲಿಲ್ಲ. ಆ ಕಾರಣದಿಂದ ನಮ್ಮ ದೇಶಕ್ಕೆ ಮತ್ತು ನಮ್ಮ ಮಗ್ಗುಲ ಪ್ರಾಂತಗಳಿಗೆ ಆಗಿರತಕ್ಕ ನೀರಿನ ವ್ಯವಹಾರದಲ್ಲಿ ಕೇಂದ್ರ ಸರ್ಕಾರದ ಮಾಧ್ಯಸ್ಥಿಕೆಯಿಂದ ನೀರಿನ ಹಂಚಿಕೆಯನ್ನು ನಿರ್ಧಾರ ಮಾಡಿಕೊಂಡು ಶೀಘ್ರವಾಗಿ ಫಲ ಕೊಡತಕ್ಕ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನೂ ಹಾಗೂ ಮೊಬಲಗನ್ನು ಒದಗಿಸಿ ಕೊಡಬೇಕೆಂದು ಸರ್ಕಾರದವರಲ್ಲಿ ನಾನು ಬೇಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಈಗ 4,600 ಕೆಲಸಗಳು ಅಪೂರ್ಣ ಸ್ಥಿತಿಯಲ್ಲಿವೆ. ಈಗ ಆ ಕೆಲಸಗಳನ್ನು ಮುಗಿಸಬೇಕಾಗಿದೆ. ಅದಕ್ಕೆ ಖರ್ಚು ಮಾಡಬೇಕೆಂದು ಇಟ್ಟುಕೊಂಡಿರುವುದು ಸುಮಾರು 4 ಕೋಟಿ ರೂಪಾಯಿಗಳು. ಬಹುಶಃ ಈ ಒಂದು ದೃಷ್ಟಿಯಿಂದ ನೋಡಿದರೆ ಹಳೆಯ ಕಾಮಗಾರಿಗಳು ಏನು ಅರ್ಧಂಬರ್ಧ ಆಗಿವೆಯೋ ಅವುಗಳನ್ನು ಪೂರ್ತಿಯಾಗಿ ಮಾಡಿ ಮುಗಿಸಬೇಕಾದರೆ ಈಗ ಆ ಬಾಬಿಗೆ ಒದಗಿಸಿರುವ ದುಡ್ಡು ಖಂಡಿತ ಸಾಲುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ದೃಷ್ಟಿಯಲ್ಲಿ ಮತ್ತ ಯಾವುದಾದರೂ ಬಾಬುಗಳನ್ನು ಗೊತ್ತು ಮಾಡಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣವನ್ನು ಮೀಸಲಾಗಿಡುವುದಕ್ಕಿಂತ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಟ್ಟು ಆ ಕೆಲಸಗಳನ್ನು ಕೂಡಲೇ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಕಾರಣವಾದರೂ ಇಷ್ಟೇ. ಈ ದೇಶದ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಒಂದು ರಾಷ್ಟ್ರವನ್ನು ನಿರ್ಮಾಣ ಮಾಡುವಾಗ ಜನತೆಯ ಆಶೆ ಆಕಾಂಕ್ಷೆಗಳನ್ನು ಖಂಡಿತ ಈಡೇರಿಸುತ್ತೇವೆಂದು ಭರವಸೆ ಕೊಟ್ಟಿದ್ದರೂ ಸರ್ಕಾರದವರು ಆ ಕಡೆಗೆ ಅಷ್ಟಾಗಿ ಗಮನ ಕೊಡುತ್ತಾ ಇಲ್ಲವೆಂದು ಹೇಳಬಹುದು. ನಮ್ಮ ದೇಶದಲ್ಲಿ ಹೆಚ್ಚು ಜನ ಒಂದೇ ವೃತ್ತಿಯನ್ನು ಅವಲಂಬಿಸಿರುವವರು ಬೇಸಾಯಗಾರರು. ಅವರ ಹಳ್ಳಿಗಳಲ್ಲಿ ಹಳೆಯ ಕೆರೆಗಳು, ಹೊಸಕೆರೆಗಳು ಏನಿವೆಯೋ ಅವುಗಳಿಗೆ ಸರ್ಕಾರದವರು ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಅವರ ಜೀವನ ಮಟ್ಟವನ್ನು ಹೆಚ್ಚಿಸುವುದಕ್ಕೆ ಅವರ ವೃತ್ತಿಯಲ್ಲಿ ಅವರನ್ನು ಮುಂದಕ್ಕೆ ತರುವುದಕ್ಕೆ ಪ್ರಯತ್ನ ಮಾಡದೇ ಹೋದ ಪಕ್ಷದಲ್ಲಿ ಜನ ರೊಚ್ಚಿಗೇಳಬಹುದು ಎಂದು ನಾನು ಹೇಳುತ್ತೇನೆ. ಜನಗಳಿಗೆ ಜಿಗುಪ್ಸೆಯುಂಟಾಗುತ್ತದೆ. ಈಗ ಸಮಾಜದಲ್ಲಿ ನಾವು ನೋಡುತ್ತಿದ್ದೇವೆ; ಸರ್ಕಾರಿ ಅಧಿಕಾರಿಗಳು ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಕೂಲಿಗಾರರು ಸಂಘವನ್ನು ಮಾಡಿಕೊಂಡಿದ್ದಾರೆ. ಹೋಟೇಲು ಮಾಲೀಕರು ಸಂಘಗಳನ್ನು ಮಾಡಿಕೊಂಡಿದ್ದಾರೆ. ಹೀಗೆಯೇ ಅನೇಕರು ತಮ್ಮ ತಮ್ಮ ವೃತ್ತಿಗೆ ಅನುಸರಿಸಿಕೊಂಡು ಜನಗಳ ಸಂಘವನ್ನು ಮಾಡಿಕೊಂಡಿದ್ದಾರೆ. ಈ ರೀತಿ ಅನೇಕರು ಸಂಘಗಳನ್ನು ಮಾಡಿಕೊಂಡು ತಮಗೆ ಬೇಕಾದಂತಹ ಸೌಲಭ್ಯಗಳನ್ನು ಪಡೆಯುತಕ್ಕಂಥ ಕಾಲದಲ್ಲಿ ಹರಿದು ಹಂಚಿಹೋಗಿರುವ ಜನರ ಕೂಗು ಸರ್ಕಾರಕ್ಕೆ ಮುಟ್ಟುವ ಪರಿಸ್ಥಿತಿಯಲ್ಲಿಲ್ಲ. ವ್ಯವಸಾಯವನ್ನೇ ಮುಖ್ಯವಾಗಿ ಅವಲಂಬಿಸಿಕೊಂಡಿರತಕ್ಕ ಜನಗಳಿಗೆ ಸರ್ಕಾರದವರು ಸೌಲಭ್ಯವನ್ನು ಮಾಡಿಕೊಡದೇ ಹೋದರೆ ಅವರಿಗೆ ಜಿಗುಪ್ಸೆ ಹತ್ತೀತು ಆದ್ದರಿಂದ ಸರ್ಕಾರದವರು ಎಚ್ಚರಿಕೆಯನ್ನು ವಹಿಸಬೇಕು ಎಂದು ನಾನು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಗೆ ಸೇರಿದ ಕೆರೆಗಳನ್ನು ಮರಾಮತ್ತು ಇಲಾಖೆಯವರು ವಹಿಸಿಕೊಂಡಿದ್ದಾರೆ, ಅವುಗಳನ್ನು ರಿಪೇರಿ ಮಾಡಬೇಕು. ಅನೇಕ ಕೆರೆಗಳು ಬಹಳ ಕಾಲದಿಂದ ದುರಸ್ತು ಇಲ್ಲದೆ ಬಹಳ ಮಟ್ಟಿಗೆ ಶಿಥಿಲವಾಗಿವೆ. ಅವುಗಳನ್ನೆಲ್ಲಾ ರಿಪೇರಿ ಮಾಡಬೇಕು. ಹೊಸ ಕೆರೆಗಳನ್ನು ಕಟ್ಟತಕ್ಕದ್ದು, ಶಿಥಿಲವಾಗಿರತಕ್ಕ ಕೆರೆಗಳನ್ನು ದುರಸ್ತು ಮಾಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಕೆರೆಯಲ್ಲಿರತಕ್ಕ ನೀರನ್ನು ರೈತರು ಉಪಯೋಗಿಸಿಕೊಂಡು, ಅದು ಸದುಪಯೋಗವಾಗುವ ರೀತಿಯಲ್ಲಿ ಬೆಳೆಯನ್ನು ಬೆಳೆಯತಕ್ಕದ್ದು ಮುಖ್ಯ ಗುರಿಯಾಗಿರಬೇಕು. ಯಾವ ಕೆರೆಯಲ್ಲಿ ಎಷ್ಟು ನೀರು ಇದೆ, ಯಾವ ಕಾಲದಲ್ಲಿ ಎಷ್ಟು ನೀರನ್ನು ಯಾವ ಬೆಳೆ ಬೆಳೆಯುವುದಕ್ಕೆ ಕೊಡಬೇಕು ಎನ್ನುವ ವ್ಯವಸ್ಥೆಯನ್ನು ಈ ದಿವಸ ಸರ್ಕಾರದವರು ಮನಗಂಡಿಲ್ಲ. ಇವೊತ್ತು ಸ್ವೇಚ್ಛೆಯಾಗಿ ಜನ ಕೆರೆಯ ತೂಬನ್ನು ಎತ್ತಿ

ನೀರನ್ನು ಹಾಳುಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಕೆರೆಗಳು ಮತ್ತು ಸಣ್ಣ ಸಣ್ಣ ಕೆರೆಗಳಲ್ಲಿ ನೀರನ್ನು ಬಿಡತಕ್ಕ ವ್ಯವಸ್ಥೆ ಸರಿಯಾಗಿಲ್ಲದೇ ಇರುವುದರಿಂದ ರೈತರಿಗೆ ತೊಂದರೆಯಾಗಿದೆ. ಹಳ್ಳಿಗಳಲ್ಲಿ ಕೆರೆಗಳಲ್ಲಿ ನೀರನ್ನು ಬಿಡುವುದುಕ್ಕೋಸ್ಕರ ಅನೇಕ ವರ್ಷಗಳಿಂದ ಒಂದು ಪಂಚಾಯಿತಿ ಎಂದು ಮಾಡಿಕೊಂಡಿದ್ದರು. ಅವರು ಕೆರೆಗಳಲ್ಲಿ ನೀರನ್ನು ಬಿಡತಕ್ಕ ಒಂದು ವ್ಯವಸ್ಥೆಯನ್ನು ನೋಡಿಕೊಂಡು ಬರುತ್ತಿದ್ದರು. ಆದರೆ ಇತ್ತೀಚೆಗೆ ಯಾವ ಕೆರೆಯ ಅಚ್ಚುಕಟ್ಟಿನಲ್ಲಿಯೂ ಪಂಚಾಯಿತಿಗಳನ್ನು ನೇಮಕಮಾಡಿಕೊಂಡಿಲ್ಲ. ವಿಶ್ವೇಶ್ವರಯ್ಯ ನಾಲೆಯ ಕೆಳಗೆ ಕೂಡ ಮರಾಮತ್ ಇಲಾಖೆಯವರು ನೀರನ್ನು ಬಿಡತಕ್ಕ ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲ. ಆದ್ದರಿಂದ ತಾಲ್ಲೂಕು ಬೋರ್ಡ್ ಸಮಿತಿಯವರು ಮತ್ತು ಮರಾಮತ್ತು ಇಲಾಖೆಯವರು ಕೂಡಿಕೊಂಡು ಕೆರೆಯಲ್ಲಿರತಕ್ಕ ನೀರನ್ನು ರೈತರು ಉಪಯೋಗಿಸಿಕೊಂಡು ಕಡ್ಡಾಯವಾಗಿ ಇಂಥಾ ಬೆಳೆಯನ್ನೇ ಬೆಳೆಯಬೇಕು ಎಂದು ಗೊತ್ತು ಮಾಡಬೇಕು. ಇಲ್ಲದೇಹೋದರೆ ಹೆಚ್ಚು ಪ್ರತಿಫಲವನ್ನು ನಿರೀಕ್ಷಿಸುವುದಕ್ಕೆ ಕಷ್ಟವಾಗುತ್ತದೆ. ಮರಾಮತ್ತು ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳು ಸಣ್ಣಪುಟ್ಟ ಕೆಲಸಗಳು ಎಂದರೆ ತೂಬು ರಿಪೇರಿ, ನಾಲೆ ಒಡೆದರೆ ಪೈಪು ಒಡೆದರೆ ಅಂಥವುಗಳನ್ನು ಶೀಘ್ರವಾಗಿ ಮಾಡಿಕೊಡುವುದಕ್ಕೆ ಅನುಕೂಲವಾಗುವಂತೆ ಆ ಕಾಮಗಾರಿಗಳನ್ನು ಮಂಜೂರು ಮಾಡತಕ್ಕ ಅಧಿಕಾರವನ್ನು ತಾಲ್ಲೂಕುಮಟ್ಟದ ಮರಾಮತ್ತು ಇಲಾಖೆಯ ಅಧಿಕಾರಿಗಳಿಗೇ ಕೊಡಬೇಕು. ಪ್ರತಿಯೊಂದು ವಿಚಾರದಲ್ಲಿಯೂ ಮರಾಮತ್ತು ಇಲಾಖೆಗೆ ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಅಧಿಕಾರಿಗಳೇ ಬಂದು ನೋಡಿ ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದರೆ ಕಾಲವಿಳಂಬವಾಗಿ ರೈತರಿಗೆ ಕಾಲಕ್ಕೆ ಸರಿಯಾಗಿ ಪರಿಹಾರಸಿಕ್ಕದಿದ್ದರೆ ಬೆಳೆ ನಷ್ಟವಾಗುತ್ತದೆ. ಈ ಒಂದು ದೃಷ್ಟಿಯಿಂದ ತಾಲ್ಲೂಕುಗಳಲ್ಲಿ ಸಣ್ಣಪುಟ್ಟ ನೀರಾವರಿ ಕೆಲಸಗಳನ್ನು ಶೀಘ್ರವಾಗಿ ಮಾಡುವುದಕ್ಕಾಗಿ ಜಿಲ್ಲಾಮಟ್ಟದ ಅಧಿಕಾರಿಗಳ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ, ಯಾವ ಕೆಲಸವನ್ನು ಮಾಡಬೇಕಾದರೂ ರೈತರಾಗಲೀ ಅಥವಾ ಜನತೆಯ ಪ್ರತಿನಿಧಿಗಳಾಗಲೀ ಬಂದು ಸರ್ಕಾರದವರಲ್ಲಿ ಹೇಳಿಕೊಳ್ಳಬೇಕು. ಆ ಒಂದು ವ್ಯವಸ್ಥೆ ತಪ್ಪಬೇಕು. ಅನೇಕ ಜನ ಸೆಕ್ಷನ್ ಆಫೀಸರುಗಳು ಇದ್ದಾರೆ. ಸಬ್ ಓವರ್‌ಸಿಯರ್‌ಗಳು ಇದ್ದಾರೆ. ಅವರಿಗೆ ಜ್ಯೂರಿಸ್‌ಡಿಕ್ಷನ್ ಕೊಟ್ಟಿದ್ದಾರೆ. ಹೀಗಿದ್ದರೂ ಕೂಡ ಕೊನೆಯ ಪಕ್ಷ ಕೆಟ್ಟು ಹೋಗಿರತಕ್ಕ ರಸ್ತೆಗಳನ್ನು ರಿಪೇರಿಯನ್ನು ಸಹ ಮಾಡುವುದಿಲ್ಲ. ಆಗಾಗ್ಗೆ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳಬೇಕು, ಎಲ್ಲೆಲ್ಲಿ ಏನೇನು ಕೆಲಸಗಳಾಗಬೇಕೆಂಬುದನ್ನು ತಿಳಿದುಕೊಂಡು ಅವುಗಳನ್ನು ಕಾರ್ಯಗತ ಮಾಡಬೇಕು. ಸರ್ಕಾರಕ್ಕಾಗಲೀ ಅಧಿಕಾರಿಗಳಾಗಲೀ ಯಾರಾದರೂ ಹೋಗಿ ಇಂಥಾ ಕೆಲಸಗಳನ್ನು ಮಾಡಬೇಕು, ಎಂದು ಹೇಳುವಂತಹ ಒಂದು ವ್ಯವಸ್ಥೆ ತಪ್ಪಬೇಕು. ಅಧಿಕಾರಿಗಳೇ ಯಾವ ಯಾವ ಕೆಲಸಗಳಾಗಬೇಕೆಂಬುದನ್ನು ಮನದಟ್ಟು ಮಾಡಿಕೊಂಡು ಆಯಾ ಕೆಲಸಗಳನ್ನು ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಸರ್ಕಾರದವರು ರೂರಲ್ ಕಮ್ಯುನಿಕೇಷನ್ ರಸ್ತೆಗಳಿಗಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇಂಥಾ ರಸ್ತೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಿದ್ದಾರೆ. ಒಳ್ಳೆಯ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಆದರೆ ಆ ರಸ್ತೆಗಳಲ್ಲಿ ಕ್ರಾಸ್ ಡ್ರೈನೇಜ್ ಕೆಲಸಗಳನ್ನು ಕೆಲವು ಮಾಡಿಸಿದ್ದಾರೆ. ಕೆಲವು ಕೆಲಸಗಳನ್ನು ಮಾಡಿಸಿಲ್ಲ. ಈಗ ಮಾಡಿಸಿರತಕ್ಕ ಕ್ರಾಸ್ ಡ್ರೈನೇಜುಗಳ ಉಪಯೋಗವಾಗತಕ್ಕದ್ದು ಬಹಳ ಕಡಿಮೆಯಾಗಿದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಈ ರೂರಲ್ ಕಮ್ಯುನಿಕೇಷನ್ ರೋಡುಗಳಿಗೆ ತಂದೆ ತಾಯಿಗಳು ಯಾರೂ ಇಲ್ಲ. ಆ ರಸ್ತೆಗಳನ್ನು ಯಾರೂ ಸರಿಯಾಗಿ ಮೇಂಟೇನ್ ಮಾಡುತ್ತಾ ಇಲ್ಲ. ತಾಲ್ಲೂಕು ಅಭಿವೃದ್ಧಿ ಸಮಿತಿಯವರನ್ನು ಕೇಳಿದರೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಅವುಗಳನ್ನು ರಿಪೇರಿ ಮಾಡಿಸುವುದಿಲ್ಲ. ಇದರಿಂದಾಗಿ ಆ ರಸ್ತೆಗಳ ರಿಪೇರಿ ಕೆಲಸ ನಡೆಯದಂತಾಗಿದೆ. ಇಂಥಾ ಸಂದರ್ಭದಲ್ಲಿ ಸರ್ಕಾರದವರು ಆ ರಸ್ತೆಗಳನ್ನು ವಹಿಸಿಕೊಂಡು ಆ ರಸ್ತೆಗಳ ರಿಪೇರಿಯನ್ನು ಮಾಡತಕ್ಕದ್ದು ಸೂಕ್ತ ಎಂದು ನಾನು ಹೇಳುತ್ತೇನೆ. ರೂರಲ್ ಕಮ್ಯುನಿಕೇಷನ್ ರಸ್ತೆಗಳು ಬಹಳ ಪ್ರಾಮುಖ್ಯವಾದುವುಗಳು. ಆದ್ದರಿಂದ ಅವುಗಳ ಕ್ರಾಸ್ ಡ್ರೈನೇಜ್ ಕೆಲಸಗಳು ಮತ್ತು ರಸ್ತೆ ದುರಸ್ತಿ ಇತ್ಯಾದಿಗಳನ್ನು ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ಹಿಂದೆ ಸಕ್ಕರೆ ತಯಾರಿಕೆಗೆ ಬಂದಂಥ ಕಬ್ಬಿನ ಮೇಲೆ ಟನ್ ಒಂದಕ್ಕೆ ಆರು ರೂಪಾಯಿಗಳಂತೆ ಸೆಸ್ಸು ಹಾಕಿ ಅದರಿಂದ ಬಂದಂತಹ ಹಣವನ್ನೆಲ್ಲಾ ಕ್ರೋಢೀಕರಿಸಿ ಆಯಾಯ ಏರಿಯಾದ ಅಭಿವೃದ್ಧಿಗೆ ಎಂದರೆ ರಸ್ತೆಗಳ ಅಭಿವೃದ್ಧಿಗಾಗಲೀ, ಆರೋಗ್ಯದ ಸೌಕರ್ಯದ ವ್ಯವಸ್ಥೆಗಳಿಗಾಗಲೀ ಆ ಹಣವನ್ನು ಖರ್ಚು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಅದಕ್ಕೆ ಪಿ. ಡಬ್ಲ್ಯು. ಸಬ್ ಡಿವಿಜನ್

ಮಾಡಿ ಕಬ್ಬನ್ನು ಬೆಳೆಯತಕ್ಕ ಪ್ರದೇಶದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರು. ಈಗ ಕಳೆದ ಐದು-ಆರು ವರ್ಷಗಳಿಂದ ಆ ಒಂದು ಪದ್ಧತಿಯನ್ನು ತಪ್ಪಿಸಿ ಕಬ್ಬಿನ ಮೇಲೆ ಹಾಕತಕ್ಕಂಥ ಸೆಸ್ಸನ್ನು ಡೆವಲಪ್‌ಮೆಂಟ್ ಪೂಲಿಗೆ ಬರುವ ಹಾಗೆ ಮಾಡಿಕೊಂಡು ಆ ರಸ್ತೆಗಳು ವ್ಯವಸ್ಥಿತವಾದ ರೀತಿಯಲ್ಲಿ ಆಗತಕ್ಕಂಥದ್ದನ್ನು ತಪ್ಪಿಹೋಗಿದೆ. ಅಲ್ಲಿ ಕಬ್ಬಿನ ಗಾಡಿಗಳು ಬರಬೇಕಾದರೆ ಬಹಳ ಕಷ್ಟ ಇದೆ. ಆದ್ದರಿಂದ ಈಗ ಸಕ್ಕರೆ ಕಾರ್ಖಾನೆಯವರು ⅓ ಭಾಗ, ಕೇಂದ್ರ ಸರ್ಕಾರದವರು ⅓ ಭಾಗ ಮತ್ತು ನಮ್ಮ ರಾಜ್ಯ ಸರ್ಕಾರದವರು ⅓ ಭಾಗ ಹಣವನ್ನು ಕೊಟ್ಟರೆ ಆ ರಸ್ತೆಗಳ ದುರಸ್ತಿಯನ್ನು ಮಾಡಿ ರೈತರಿಗೆ ಅನುಕೂಲ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಈ ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಕೆಳಗಡೆ ಇದ್ದಂಥ ಸಕ್ಕರೆ ಕಾರ್ಖಾನೆಗೆ ನಷ್ಟವಾಗಿರುವುದರಿಂದ ಅವರು ಈಗ ಮೂರು ವರ್ಷಗಳಿಂದ ಸಕ್ಕರೆ ಕಾರ್ಖಾನೆಯ ಕೆಲಸಕಾರ್ಯಗಳನ್ನು ನಿಲ್ಲಿಸಿದ್ದಾರೆ. ಆದರಿಂದ ಈಗ ಅವರು ತಮ್ಮ ಪಾಲಿನ ಹಣವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ. ಈಗ ರೈತರು ಆ ರಸ್ತೆಗಳಲ್ಲಿ ಕಬ್ಬನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬೇಕಾದರೆ ಭಯವುಂಟಾಗುವಂತಹ ಅವ್ಯವಸ್ಥೆಯುಂಟಾಗಿದೆ. ಇದರಿಂದಾಗಿ ರೈತರಿಗೆ ಬಹಳಮಟ್ಟಿಗೆ ನಷ್ಟವುಂಟಾಗುತ್ತದೆ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ಸಕ್ಕರೆ ಕಂಪೆನಿಯವರಿಂದ ಬರಬೇಕಾದ ಹಣ ಮತ್ತು ಕೇಂದ್ರ ಸರ್ಕಾರದಿಂದ ಬರಬೇಕಾದ ಹಣವನ್ನು ಬರಮಾಡಿಕೊಂಡು ಅದಕ್ಕೆ ತಮ್ಮ ಭಾಗದ ಹಣವನ್ನು ಹಾಕಿ ಕಟ್ಟು ಹೋಗಿರುವ ರಸ್ತೆಗಳನ್ನು ದುರಸ್ತಿ ಮಾಡಬೇಕು. ಮತ್ತು ಹೊಸದಾಗಿ ಯಾವ ಯಾವ ರಸ್ತೆಗಳನ್ನು ನಿರ್ಮಾಣ ಮಾಡಬೇಕಾಗಿದೆಯೋ ಅವುಗಳನ್ನು ಸಹ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ಕೃಷ್ಣರಾಜಸಾಗರದ ಬಲ ನಾಲೆಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಎಸ್ಟಿಮೇಟಿನಲ್ಲಿ ಕಪಿನಿ ಪ್ರಾಜೆಕ್ಟ್ ಕೂಡ ಸೇರಿಸಿ ಎರಡು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಕೃಷ್ಣರಾಜಸಾಗರದ ಬಲದಂಡೆಯ ನಾಲೆಯ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರದವರು ಜನಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂದು ಕೇಳಿ ಬರುತ್ತಿದೆ. ಈ ವಿಷಯದಲ್ಲಿ ನಾವು ಕೂಡ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದೇವೆ. ಈ 10 ವರ್ಷಗಳ ಅವಧಿಯಲ್ಲಿ ಕೆ. ಆರ್. ಎಸ್. ಸಾಗರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಇಲ್ಲ. ಹೀಗಿರುವಾಗ ಮಂಡ್ಯ ಸಕ್ಕರೆ ಕಾರ್ಖಾನೆಗೆ, ಬೆಳಗೊಳದ ಆರ್ಟಿಫಿಸಿಯಲ್ ಸಿಲ್ಕ್ ಫ್ಯಾಕ್ಟರಿಗೆ ಮತ್ತು ಮೈಸೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಗೆ ನೀರನ್ನು ಈ ಕೆ. ಎ. ಆರ್. ಎಸ್ ಸಾಗರದಿಂದಲೇ ಒದಗಿಸಬೇಕಾಗಿದೆ. ಇದರ ಜೊತೆಗೆ ಹಾರಂಗಿ, ಕಂಬದಕಡ, ಹೇಮಾವತಿ ಅಣೆಕಟ್ಟುಗಳನ್ನು ಕಟ್ಟಿದಮೇಲೆ ಕೆ. ಆರ್. ಎಸ್ ಸಾಗರಕ್ಕೆ ಯಾವ ಮಟ್ಟದಲ್ಲಿ ನೀರು ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈಗಾಗಲೇ ಕೆ. ಆರ್. ಎಸ್. ಸಾಗರದ ಹಿಂದುಗಡೆ 30-40 ಸಾವಿರ ಎಕರೆಗೆ ನೀರು ಸಾಲದೆ ಬೆಳೆ ಆಗದೆ ಆ ಪ್ರದೇಶದ ರೈತರಿಗೆ ಕಂದಾಯವನ್ನು ರೆಮಿಷನ್ ಕೊಡುವ ಪರಿಸ್ಥಿತಿಯೂ ಕೂಡ ಬಂದಿದೆ. ಇವುಗಳನ್ನೆಲ್ಲಾ ಸುಧಾರಿಸಿಕೊಂಡು ರೈತರಿಗೆ ಹಾನಿಯುಂಟಾಗದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಪರಿಣತರ ಸಮಿತಿಯನ್ನು ನೇಮಕ ಮಾಡಬೇಕು.

3-30 P.M

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಮರಾಮತ್ ಇಲಾಖೆಯ ಬೇಡಿಕೆಯನ್ನು ವಿರೋಧಿಸುತ್ತಾ ಕೇವಲ ಒಂದೆರಡು ವಿಷಯಗಳ ಮೇಲೆ ಮಾತ್ರ ನಾನು ಮಾತನಾಡಲು ಅಪೇಕ್ಷಿಸುತ್ತೇನೆ. ಮೊದಲನೆಯದು ಕೃಷ್ಣಾ ಬೇಸಿನ್ ನೀರು ಎರಡನೆಯದು ಕಾವೇರಿ ಬೇಸಿನ್ ನೀರು, ಕನ್ನಡ ರಾಜ್ಯ ಭಾವೈಕ್ಯವಾಗಬೇಕು ಒಂದಾಗಬೇಕು ಕನ್ನಡ ರಾಜ್ಯದಲ್ಲಿ ಬಡತನ ನಿರ್ಮೂಲವಾಗಬೇಕು, ಕನ್ನಡ ರಾಜ್ಯ ಶ್ರೀಮಂತವಾಗಬೇಕಾದರೆ ಕೃಷ್ಣಾ ಬೇಸಿನ್ ಮತ್ತು ಕಾವೇರಿ ಬೇಸಿನ್‌ನ ನೀರಿನ ಪೂರ್ತಿ ಪ್ರಯೋಜನ ಪಡೆದರೆ ಮಾತ್ರ ಸಾಧ್ಯವಾಗುತ್ತದೆ ; ಇಲ್ಲವಾದರೆ ಭಾವೈಕ್ಯ ಸಾಧನೆಯಾಗದೆ ಅದು ಸಮಾಧಿಯಾಗುತ್ತದೆ. ಈ ಎರಡು ವಿಷಯಗಳ ಬಗ್ಗೆ ಸರ್ಕಾರದ ಧೋರಣೆಯ ಮೇಲೆ ಅದು ಅವಲಂಬಿಸಿದೆ ಎಂದು ನಾನು ಹೇಳುತ್ತೇನೆ. ಕೃಷ್ಣಾ ನದಿ ನೀರಿನ ವಿಷಯದಲ್ಲಿ ನಮಗೆ ಗುಲ್ಹಾಟಿ ಕಮಿಷನ್ ಅವರು ನೀರು ಅಲೋಕೇಟ್ ಮಾಡಿದ್ದಾರೆ. ಅವರ ಪ್ರಕಾರ 600 ಟಿ.ಎಂ.ಸಿ ಎಫ್.ಟಿ ನೀರು ನಮಗೆ ಬಂದಿದೆ. ಈ ವಿಷಯದಲ್ಲಿ ಹಿಂದೆ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಘೋರ್ಪಡೆಯವರು 3-4-1963 ನೇ ದಿವಸ ಬೇಕಾದಷ್ಟು ವಿಷಯ ಹೇಳಿದ್ದಾರೆ. 1961ನೇ ಇಸವಿಯ ಅಗ್ರೀಮೆಂಟನ್ನು ನಾವು ಒಪ್ಪುವುದಾಗಿಲ್ಲ, ಅದು

ಸರಿಯಾಗಿಲ್ಲ, ಅದು ನಮಗೆ ಬಂಧನಕಾರಕವಲ್ಲ ಎಂದು ಹೇಳಿದ್ದಾರೆ. ಅಗ್ರೀಮೆಂಟ್ ಆಧಾರದ ಮೇಲೆ ಗುಲ್ಹಾಟಿ ಕಮಿಷನ್ ಅವರು ನೀರು ಅಲೋಕೇಟ್ ಮಾಡಿದ್ದು ನ್ಯಾಯವಾಗಿಲ್ಲ. ನಮ್ಮ ರಾಜ್ಯದ ಹಿತವನ್ನು ಅಲಕ್ಷ್ಯ ಮಾಡಿ ಒಂದು ಪರವಾದ ತೀರ್ಮಾನವಾದಂತೆ ಆಗಿದೆ ಅದನ್ನು ಒಪ್ಪಿಕೂಡದು ಎಂದು ಆಗಿನ ಸಭೆಯಲ್ಲಿ ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಮಂತ್ರಿವರ್ಯರು ಒಂದು ಸಮಾಧಾನ ಕೊಟ್ಟರು. ಅವರ ಭಾಷಣದ ಪ್ರತಿಯನ್ನೇ ಹಿಡಿದುಕೊಂಡು ಅದನ್ನು ಓದುತ್ತೇನೆ :

> "Had we undertaken huge projects and utilised water, the position of allocation so far as our State is concerned would have been different."

ಎನ್ನತಕ್ಕಂಥ ಮಾತು ಹೇಳಿದ್ದಾರೆ. ಈ ನೀರು ಉಪಯೋಗದ ರೈಟ್ ಆಂಧ್ರದವರಿಗೆ ಇತ್ತು ಎಂದು ಪರೋಕ್ಷವಾಗಿ ಸೂಚನೆ ಕೊಟ್ಟಿರುವರೋ ಏನೋ ಎಂದು ನನಗೆ ಅನಿಸುತ್ತದೆ. ಇದುವರೆಗೆ ಅದುದನ್ನು ನೋಡಿದರೆ ಕೃಷ್ಣಾ, ಘಟಪ್ರಭಾ ಮಲಪ್ರಭಾ ಯೋಜನೆ ಏನು ಇತ್ತೋ ಅಂಥ ಯಾವ ಯೋಜನೆ ಕಾರ್ಯಗತ ಮಾಡುವುದಕ್ಕೆ ತಗೆದುಕೊಳ್ಳಬೇಕಾಗಿತ್ತೋ ಅದನ್ನು ಇನ್‌ವೆಸ್ಟಿಗೇಷನ್ ಮಾಡಿ ಪೂರ್ತಿ ಮಾತ್ರ ಮಾಡಿಲ್ಲ. ನಮ್ಮ ಸರ್ಕಾರಕ್ಕೆ ಈ ನದಿಯ ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶವಿದೆಯೋ ಎಂದು ಅನುಮಾನವಿದೆ. ಯಾಕೆಂದರೆ ಕೇಂದ್ರ ಸರ್ಕಾರದ ನೀರಾವರಿ ಸಚಿವರು ಪುನಃ ನೀರಾವರಿ ಸಚಿವರು ಆದ ಮೇಲೆ ಅವರ ಮನೋಭಾವ ನೋಡಿದರೆ ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಅವರು ಮಲತಾಯಿ ಧೋರಣೆ ಅನುಸರಿಸಿದ್ದಾರೆ. ಈಗ ಹಾಲಿ ಇರತಕ್ಕಂಥ ನೀರಾವರಿ ಸಚಿವರು ಇನ್ನು ಮುಂದೆ ಮುಂದುವರಿದರೆ ನಮ್ಮ ರಾಜ್ಯಕ್ಕೆ ನ್ಯಾಯವಾದ ಹಕ್ಕನ್ನು ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕು. ಎಷ್ಟು ಬೇಗ ಮಾಡಬೇಕೋ ಅಷ್ಟು ಬೇಗ ಇದನ್ನು ಮಾಡಬೇಕೆಂದು ಒತ್ತಾಯ ಪೂರ್ವಕ ಸರ್ಕಾರದಲ್ಲಿ ತಿಳಿಸುತ್ತೇನೆ. 1000 ಟಿ.ಎಂ.ಸಿ.ಎಫ್.ಟಿ. ನೀರು 95 ಪರ್ಸೆಂಟ್ ಡಿಪೆಂಡೆಬಿಲಿಟಿ ಮೇಲೆ ಹಂಚಿಕೆ ಆಯಿತು 75 ಪರ್ಸೆಂಟ್ ಡಿಪೆಂಡಬಿಲಿಟಿ ಮೇಲೆ 2100 ಟಿ.ಎಂ.ಸಿ.ಎಫ್‌ಟಿ.ಗೆ ಹಂಚಿಕೆ ಮಾಡುವಾಗ 300 ಟಿ.ಎಂ.ಸಿ.ಎಫ್.ಟಿ. ಉಳಿಕೆಯಾಯಿತು. ಈ 300 ಟಿ.ಎಂ.ಸಿ.ಎಫ್.ಟಿ. ನಮಗೆ ಬರಬೇಕು. 47 ಪರ್ಸೆಂಟು ಕಾನೂನು ಬದ್ಧವಾಗಿ ರೈಪೇರಿಯನ್ ಹಕ್ಕಿನ ಪ್ರಕಾರ ಕೃಷ್ಣಾ ಬೇಸಿನ್‌ನಲ್ಲಿ ನಮಗೆ ಬರಬೇಕು. ಈ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದರೆ ಕೇಂದ್ರದವರು ಆಯಾಯ ಅಭಿಪ್ರಾಯಕ್ಕೆ ಅನುಸರಿಸಿ ಎಲ್ಲ ರಾಜ್ಯಗಳಿಗೆ ಪೆಂಡಿಂಗ್ ಆಗಿ ಇಡಬೇಕಾಗಿರಲಿಲ್ಲ. ನ್ಯಾಯವಾಗಿ ನಮ್ಮ ರಾಜ್ಯಕ್ಕೆ ಅದನ್ನು ತಕ್ಷಣ ಅಲಾಟ್ ಮಾಡಬೇಕಾಗಿತ್ತು. ಯಾತಕ್ಕೆ ಅಲಾಟ್ ಮಾಡಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮಾನ್ಯ ಸಚಿವರು ಅದನ್ನು ತಿಳಿದುಕೊಂಡು ಹೇಳಬೇಕು. ಒಂದು ವಿಷಯ ಮಾತ್ರ ಹೇಳುತ್ತೇನೆ. 1961ರ ಅಂತರ ರಾಜ್ಯ ನೀರಿನ ಕಾಯಿದೆ 3ನೇ ಸೆಕ್ಷನ್ ಪ್ರಕಾರ ನದಿ ಮಂಡಲಿ ರಚಿಸಿ ಈ ವಿವಾದ ಅವರಿಗೆ ಬಿಡಿರಿ ಎಂದು ನಮ್ಮ ಸರ್ಕಾರ ಒತ್ತಾಯಪಡಿಸಿಕೊಂಡು ಬರುತ್ತಿದ್ದಾರೆ. ಅದನ್ನು ಕೈಬಿಟ್ಟಿಲ್ಲ ಎಂದು ನೀರಾವರಿ ಸಚಿವರು ಹೇಳುತ್ತಾರೆ. ಅದನ್ನು ಆಲೋಚನೆ ಮಾಡುತ್ತಿದ್ದೇವೆ ಎಂದು ಸಮಾಧಾನಕಾರಕ ಉತ್ತರ ನಮ್ಮ ಸಚಿವರು ಹೇಳುತ್ತಾರೆ. ಈ ರೀತಿ ಹೇಳುವುದು ಆಗಬಾರದು. ರಾಜ್ಯದ ಹಿತ ಲಕ್ಷ್ಯದಲ್ಲಿಟ್ಟುಕೊಂಡು ನಡೆಸುವುದಾದರೆ ನಮ್ಮ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ವರ್ಷವಾದರೂ ಕಾನೂನು ಪ್ರಕಾರ ನೀರು ಪಡೆಯಬೇಕು. 1961ನೇ ಇಸವಿಯಲ್ಲಿ ಲಾ ಡಿಪಾರ್ಟ್‌ಮೆಂಟು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ನಮ್ಮ ಹಕ್ಕನ್ನು ಸ್ಥಾಪನೆ ಮಾಡಿ ಎಂದು ಹೇಳಿದಾರೆ. ಆದರೂ ಕೂಡ ಇದುವರೆಗೆ ಯಾವ ಕಾರ್ಯಕ್ರಮ ಕೈಕೊಂಡಿಲ್ಲ ಎಂದು ಎಚ್ಚರಿಕೆ ಕೊಡುತ್ತೇನೆ. ಇದನ್ನು ಸರಿಯಾಗಿ ಮಾಡದೇ ಇದ್ದರೆ ನಿಮಗೆ ದೇಶದ ಜನ ಶಾಪ ಹಾಕುತ್ತಾರೆ. ಇಡೀ ದೇಶದ ಜನರ ಕೋಪಕ್ಕೆ ತುತ್ತಾಗುತ್ತೀರಿ ಈ ಕೃಷ್ಣಾ ನದಿಯ ನೀರಿನ ವಿಚಾರದಲ್ಲಿ. ಈ ವಿಷಯ ಇಲ್ಲಿಗೇ ಬಿಡುತ್ತೇನೆ.

ಇನ್ನು ಕಾವೇರಿ ಬೇಸಿನ್ ವಿಷಯ ಯೋಚನೆ ಮಾಡಿದಾಗ ನನಗೆ ಬಹಳ ದುಃಖವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಕಾವೇರಿ ಬೇಸಿನ್ ಕೃಷ್ಣಾ ಬೇಸಿನ್ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಮಲತಾಯಿ ಧೋರಣೆ ತಾಳಿದ್ದಾರೆ. ನಮ್ಮ ರಾಜ್ಯ ಸರ್ಕಾರ ಕೂಡ ಹಳೇ ಮೈಸೂರು ಎನ್ನತಕ್ಕಂಥ ಪ್ರದೇಶದ ವಿಚಾರದಲ್ಲಿ ಮಲತಾಯಿಧೋರಣೆ ತಳೆದಿದೆ ಎಂದು ಹೇಳಬಯಸುತ್ತೇನೆ. ಕಾವೇರಿ ಬೇಸಿನ್ ವಿಚಾರದಲ್ಲಿ ತಪ್ಪು ದಾರಿಗೆ ಎಳೆಯುವುದಕ್ಕೆ ಇಷ್ಟೊಂದು ರೀತಿಯಲ್ಲಿ ಏತಕ್ಕೆ ನಡೆದಿದೆ ಎನ್ನುವುದನ್ನು ಅವರು ಉತ್ತರ ಕೊಡುವ ಕಾಲದಲ್ಲಿ ಹೇಳಲಿ. ನಮ್ಮ ಹೇಳಿದರು, 1924ರ ಅಗ್ರಿಮೆಂಟ್ ಪ್ರಕಾರ ಲಿಫ್ಟ್ ಇರಿಗೇಷನ್ ಯೋಜನೆ ತೆಗೆದುಕೊಳ್ಳಲು ಕಷ್ಟವಾಗಿದೆ ಎಂದು ಹೇಳಿದರು. 1924ರ ಅಗ್ರಿಮೆಂಟನ್ನು ನಾನು ಮೊದಲಿನಿಂದ ಕೊನೆಯವರೆಗೆ ಓದಿದ್ದೇನೆ. ಅದ

(ಶ್ರೀ ಎಚ್. ಎನ್. ನಂಜೇಗೌಡ)

ರಲ್ಲಿ ಇಂಥ ಯಾವ ಪ್ರೊವಿಜನ್ ಇಲ್ಲ. 45 ಟಿ.ಎಂ.ಸಿ.ಎಫ್‌ಟಿ. ನೀರನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುವಕ್ಕೆ ಯೋಜನೆ ಕೈಗೊಳ್ಳಲು ಇವರಿಗೆ ಮನಸ್ಸು ಇಲ್ಲ ಎಂದು ನನಗೆ ಅನಿಸುತ್ತದೆ. ಇವರ ಆಸಕ್ತಿ ನೋಡಿದರೆ ಯಗಚಿ ಯೋಜನೆಯ ನೀರನ್ನು ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಇದೆ. ಯಗಚಿ ಯೋಜನೆ ಕಾವೇರಿ ಬೇಸಿನ್‌ನಲ್ಲಿ ಇದೆ. ವೇದಾವತಿ ಕೃಷ್ಣಾ ಬೇಸಿನ್‌ನಲ್ಲಿ ಇದೆ. ಯಾವ ಕಾರಣದಿಂದ ಈ ರೀತಿ ಕೃಷ್ಣಾ ಬೇಸಿನ್ನಿಗೆ ತೆಗೆದುಕೊಂಡು ಹೋಗುತ್ತೀರಿ ! ಜನರಿಗೆ ಅನುಕೂಲವಾಗುವುದಿಲ್ಲ ಎಂದು ಮಂತ್ರಿಗಳು ಹೇಳುತ್ತಾರೆ. ಮಂತ್ರಿಗಳು ಪುನರ್ ವಿಮರ್ಶಿಸಿ ಯಗಚಿ ಕಾವೇರಿ ಬೇಸಿನ್, ವೇದಾವತಿ ಕೃಷ್ಣಾ ಬೇಸಿನ್ ಇದು ಕಾನೂನು ಕಾಯಿದೆಗೆ ಮೀರಿದಕೆಲಸ. ಇದು ಆಗಬಾರದಂಥ ಕೆಲಸ. ಇದನ್ನು ಮಾಡುವುದಕ್ಕೆ ಹೋರಡಬೇಡಿ ಎಂದು ಹೇಳುತ್ತೇನೆ. ಕಾವೇರಿ ಬೇಸಿನ್‌ನಲ್ಲಿ ನಮಗೆ 1924ರ ಅಗ್ರಿಮೆಂಟ್ ಪ್ರಕಾರ 45 ಟಿ.ಎಂ.ಸಿ.ಎಫ್‌ಟಿ. ನೀರು ಇದೆ. ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳುತ್ತೇನೆ. ಹೇಮಾವತಿ ಪ್ರೊಜೆಕ್ಟ್ ಬಿಟ್ಟರೆ ಇನ್ನಾವುದೂ ಇಲ್ಲ. ಕಬಿನಿ ಎಂದು ಹೇಳುತ್ತಾರೆ. ಅದು ಅಫ್‌ಸೆಟ್ ರಿಜರ್ವಾಯಿರ್ ಯೋಜನೆ. 45 ಟಿ.ಎಂ.ಸಿ.ಎಫ್‌ಟಿ. ನೀರನ್ನು 1974 ಮುಗಿಯುವುದರೊಳಗೆ ಉಪಯೋಗಿಸುವ ತೀರ್ಮಾನಕ್ಕೆ ಬರುವ ಮನೋಭಾವನೆ ಸರ್ಕಾರಕ್ಕೆ ಇಲ್ಲ. ಈ ಮನೋಭಾವನೆಯನ್ನು ಇವರು ಮುಂದುವರಿಸಿಕೊಂಡು ಬಂದರೆ ಹಳೇ ಮೈಸೂರಿಗೆ ಅನುಕೂಲವಾಗತಕ್ಕಂಥ ಕಾವೇರಿ ಬೇಸಿನ್ ನೀರನ್ನು ಪೂರ್ತಿ ಉಪಯೋಗಿಸಿಕೊಳ್ಳದೇ ಹೋದರೆ ಕನ್ನಡ ರಾಜ್ಯದ ಭಾವೈಕ್ಯವಾಗುವುದಿಲ್ಲ, ಕನ್ನಡ ರಾಜ್ಯ ಒಂದುಗೂಡುವುದಿಲ್ಲ ಎಂದು ಹೇಳುತ್ತೇನೆ. ಭಾವೈಕ್ಯ ಸಮಾಧಿಯಾಗುತ್ತದೆ. ಇದಕ್ಕೆ ಮರಾಮತ್ ಇಲಾಖೆ ಮಂತ್ರಿಗಳು ರಾಜ್ಯ ಸರ್ಕಾರ ಕಾರಣರಾಗುತ್ತಾರೆ ಎಂದು ಇವತ್ತು ಘಂಟಾಘೋಷವಾಗಿ ಎಚ್ಚರಿಕೆಯ ಮೂಲಕ ಅವರಿಗೆ ತಿಳಿಸುತ್ತೇನೆ. ಇವತ್ತು ಹಾರಂಗಿ ಪ್ರಾಜೆಕ್ಟ್ ರಿಪೋರ್ಟನ್ನು ಮದ್ರಾಸು ಸರ್ಕಾರಕ್ಕೆ ಪರಿಶೀಲನೆಗೆ ಕಳಿಸಿದ್ದಾರೆ ಎಂದು ನಮ್ಮ ಮರಾಮತ್ ಮಂತ್ರಿಗಳು ಅಪ್ಪಣೆ ಕೊಡಿಸಿದರು. ನಾನು ಅವರನ್ನು ಕೇಳುತ್ತೇನೆ. ಹಾರಂಗಿ ಷೆಡ್ಯೂಲ್ ರಿವರ್ ಅಲ್ಲ. ಮದ್ರಾಸ್ ಸರಕಾರಕ್ಕೂ ಹಾರಂಗಿ ಯೋಜನೆಗೂ ಏನು ಸಂಬಂಧ ಇದೆ ? ಏತಕ್ಕೆ ಮದ್ರಾಸ್ ಸರಕಾರಕ್ಕೆ ಇದನ್ನು ಕಳಿಸಿದರು ? ತಾವು ಕಳಿಸಿದ್ದು ತಪ್ಪು. ಇದಕ್ಕೆ ಆಸ್ಪದ ಮಾಡಿಕೊಡುವುದು ಏತಕ್ಕೆ ? ಇದು ಷೆಡ್ಯೂಲ್ ರಿವರ್ ಇಲ್ಲದೇ ಇರುವುದರಿಂದ ನಮಗೆ ಸಂಬಂಧಪಟ್ಟದ್ದು ಆಗಿದೆ. ಹಾರಂಗಿ ಯೋಜನೆ ಮದ್ರಾಸಕ್ಕೆ ಸಂಬಂಧವಿಲ್ಲ. 1924ರ ಅಗ್ರಿಮೆಂಟಿನಲ್ಲಿ ಹಾರಂಗಿ ನದಿ ಸೇರಿಲ್ಲ ಯಾಕಂದರೆ ಅದು ಷೆಡ್ಯೂಲ್ ರಿವರ್ ಅಲ್ಲ ಎಂದು ವಿನಯದಿಂದ ತಿಳಿಸುತ್ತೇನೆ.

ಇನ್ನು ಕೊಡಗಿನ ಹಿತದ ಮಾತನ್ನು ಈ ಮಾನ್ಯ ಸಭೆಯಲ್ಲಿ ಅವರು ಹೇಳಿದ್ದಾರೆ. ಹಾಗು ನಮ್ಮ ವಿರೋಧ ಪಕ್ಷದ ಸದಸ್ಯರಾದ ಮಂಜುನಾಥಯ್ಯನವರು ಸಹ ಹೇಳಿದ್ದಾರೆ. ಕೂರ್ಗ್ ಇಂಟರೆಸ್ಟ್ ಅಂದರೆ ಏನು ನಾನು ಹೇಳುತ್ತೇನೆ. ಹಾರಂಗಿ ಡ್ಯಾಮ್ ಕಟ್ಟಬೇಕು ಎಂಬುದು ತೀರ್ಮಾನವಾಗಿರತಕ್ಕ ವಿಷಯ. ಡ್ಯಾಂ ಕಟ್ಟಲೇ ಕೂಡದು ಎಂದು ಕೊಡಗಿನವರು ಹೋರಾಟ ಮಾಡಿ ನೋಡಿದರು. ಸರಕಾರ ಒಂದು ತೀರ್ಮಾನಕ್ಕೆ ಬಂದಿದೆ. ಒಂದು ಡ್ಯಾಂ ಕಟ್ಟುತ್ತೇವೆ, ಡ್ಯಾಂ ಕಟ್ಟಲೇ ಬೇಕು ಅಂದರೆ ಕೊಡಗಿನವರ ಅಭಿಪ್ರಾಯ ಕೇಳಲಿ. ಹರದೂರು ಬಳಿಯಲ್ಲಿ ಕಟ್ಟಬೇಕೋ ಹುದಗೂರು ಬಳಿ ಕಟ್ಟಬೇಕೋ ಎಂದು ಕೇಳುವುದಾದರೆ ಹರದೂರು ಬಳಿ ಕಟ್ಟಬೇಕೆಂದು ನಾನು ಹೇಳುತ್ತೇನೆ. ಹುದಗೂರು ಬಳಿ ಕಟ್ಟಬೇಕೆಂದು ಮರಾಮತ್ ಮಂತ್ರಿಗಳು ಹಾಗು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಈ ವಿಷಯದಲ್ಲಿ ಅವರಿಗೆ ಧೈರ್ಯವಿದ್ದರೆ, ಪಕ್ಷಗಳನ್ನು ಮರೆತು ನಾನೂ ಕೊಡಗಿನವನಲ್ಲ, ಅವರೂ ಕೊಡಗಿನವರಲ್ಲ—ಅವರು ಹೇಳುವ ರೀತಿಯಲ್ಲಿ ಕೊಡಗಿನವರಿಗೆ ಇಷ್ಟವಾಗಿರಬೇಕು. ನಾನು ಹೇಳುತ್ತೇನೆ ಆ ರೀತಿ ಇಲ್ಲ ಎಂದು. ಕೊಡಗಿನ ಜನತೆ ಒಳ್ಳೆಯವರು, ಜಾಣರು. ಇವರಿಗೆ ಧೈರ್ಯವಿದ್ದರೆ ಚುನಾವಣೆಗೆ ನಿಲ್ಲಲಿ: ಅವರು ಹುದಗೂರು ಬಳಿ ಕಟ್ಟೆ ಕಟ್ಟುತ್ತೇವೆಂದು ಹೇಳಲಿ. ನಾನು ಹರದೂರು ಬಳಿ ಕಟ್ಟಬೇಕೆಂದು ಹೇಳುತ್ತೇನೆ. ನಾನು ಅವರಿಗೆ ಚಾಲೆಂಜ್ ಮಾಡುತ್ತೇನೆ. ಅವರಿಗೆ ಗೆಲ್ಲುವುದಕ್ಕೆ ಆಗುವುದಿಲ್ಲ ಎಂದು. ಹಾರಂಗಿ ಬಳಿ ಕಟ್ಟಿದರೆ ಕೊಡಗಿನಲ್ಲಿ ಸಾವಿರಾರು ಎಕರೆ ಜಾಸ್ತಿ ನೀರಾವರಿಯಾಗುತ್ತದೆ. ಅವರು ತಮಗೆ ಆಗತಕ್ಕ ಅನುಕೂಲವನ್ನು ಬೇಡವೆನ್ನುತ್ತಾರೆಯೇ ? ಕೊಡಗು ಜಿಲ್ಲೆಯಲ್ಲಿ ಮೇಲ್ಗಡೆ ಕಟ್ಟೆಯನ್ನು ಕಟ್ಟಿ ಅದರಿಂದ ಹೆಚ್ಚು ನೀರಾವರಿ ಪಡೆಯುವುದಕ್ಕೆ ಇಷ್ಟವಿಲ್ಲವೇ ? ಅಲ್ಲಿಯ ಜನರ ಅಭಿಪ್ರಾಯವನ್ನು ನಾನು ತಿಳಿದುಕೊಂಡಿದ್ದೇನೆ. ನಾನು ಒಂಬತ್ತನೆಯ ತಾರೀಖು ಕೊಡಗಿಗೆ ಹೋಗಿದ್ದೆ. ಕೊಡಗಿನಲ್ಲಿ ಕಟ್ಟೆ ಆಗಬೇಕೆಂದು ಸರ್ಕಾರ ತೀರ್ಮಾನಿಸಿರುವುದರಿಂದ ಮೇಲೆ ಕಟ್ಟಿದರೆ

ನಮಗೆ ಅನುಕೂಲವಾಗುತ್ತದೆ, ಮೇಲ ಕಟ್ಟುವಂತೆ ಒತ್ತಾಯ ಮಾಡಿ ಎಂದು ಹೇಳಿದ್ದಾರೆ. ಕೆಲವು ಹಿತಾಸಕ್ತಿಗಳಿಂದ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ.

ಸರ್ಕಾರದವರು ಹೊರಡಿಸಿರತಕ್ಕ ಒಂದು ಪುಸ್ತಕ ಕೊಟ್ಟಿದ್ದಾರೆ. ಅದರಲ್ಲಿ ಮಾನ್ಯ ಮಂತ್ರಿಗಳ ಫೋಟೋಗಳು ಕೂಡ ಇವೆ ಅವರಲ್ಲಿ ಹೀಗೆ ಹೇಳಿದ್ದಾರೆ :

> "ಎಡದಂಡೆ ನಾಲೆಯ 10ನೆಯ ಮೈಲಿನಲ್ಲಿ ಬಲಭಾಗದ ನಾಲೆಯು ಚಣಿವೆ ಹತ್ತಿರ ಕವಲೊಡೆಯ ಕಾವೇರಿ ನದಿಯನ್ನು ದಾಟಿ 142 ಮೈಲಿ ಉದ್ದ ಹರಿದು ಪಿರಿಯಾ ಪಟ್ಟಣ, ಹುಣಸೂರು, ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ 50,000 ಎಕರೆಗಳಷ್ಟು ಜಮೀನಿನ ನೀರಾವರಿ ಸೌಕರ್ಯವನ್ನು ಏರ್ಪಡಿಸುತ್ತದೆ."

50 ಸಾವಿರ ಎಕರೆಗೆ ನೀರಾವರಿ ಸೌಕರ್ಯ ಬೇಕು ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ, 50 ಸಾವಿರ ಎಕರೆ ನೀರಾವರಿ ಮಾಡುವುದಕ್ಕೆ ಉದ್ದೇಶ ಮಾಡಿದ್ದೀರಲ್ಲ, ಇದು ತಪ್ಪು. ರೈಪೇರಿಯನ್ ರೈಟ್ಸ್‌ಗೆ ತೊಂದರೆ ಬಾರದಹಾಗೆ ಏನು ಬೇಕೋ ಅದನ್ನೆಲ್ಲಾ ಮಾಡಿಕೊಳ್ಳಿ. ಆದರೆ ಇದು ಶುದ್ಧಾಂಗ ತಪ್ಪು. ಇದು ಒಂದು ಪಿತೂರಿ. 1924ನೇ ಒಪ್ಪಂದದ ಪ್ರಕಾರ 1974ನೇ ಇಸವಿಯೊಳಗಾಗಿ ತಾವು ಯೋಚನೆ ಮಾಡುತ್ತಿರುವುದನ್ನು ನೋಡಿದರೆ ಕಾವೇರಿ ಬೇಸಿನ್‌ನಲ್ಲಿ ಷೆಡ್ಯೂಲ್ಡ್ ರಿವರ್ಸ್ ಪೈಕಿ ಹೇಮಾವತಿ ಒಂದಕ್ಕೆ ಅಣೆಕಟ್ಟನ್ನು ಕಟ್ಟುತ್ತೀರಿ. ಅದರಲ್ಲಿ 18 ಟಿ.ಎಂ.ಸಿ.ಎಫ್.ಟಿ. ನೀರು ಉಪಯೋಗವಾಗುತ್ತದೆ. ಇನ್ನೂ 27 ಟಿ. ಎಂ. ಸಿ. ಎಫ್. ಟಿ. ನೀರು ಉಳಿಯುತ್ತದೆ. 1974ನೇ ಇಸವಿಯ ನಂತರ ಸರ್ಪ್ಲಸ್ ಆಗಿ ಉಳಿಯುವುದನ್ನು ಉಪಯೋಗಿಸಿಕೊಳ್ಳಲು ನಿಮಗೆ ಡ್ಯಾಂ ಸೈಟ್ ಇರತಕ್ಕದ್ದು ಒಂದೇ ಒಂದು ಕಡೆ. ಅದು ಕಂಬದಕಡ. ಅದನ್ನು ಕಟ್ಟದ ಹಾಗೆ ಮಾಡುವುದಕ್ಕೆ ಈಗಿನಿಂದಲೇ ಪಿತೂರಿ. ಕಂಬದಕಡ ಕಾವೇರಿ ರೈಪೇರಿಯನ್ ರೈಟ್ಸ್‌ನಲ್ಲಿ ಬರುತ್ತದೆ. ಅದರ ಕೆಳಗೆ ಬಹಳ ಜಮೀನು ಇದೆ. ಇದೆಲ್ಲ ಕಾವೇರಿ ರೈಪೇರಿಯನ್ ಜಮೀನು. ಇದಕ್ಕೆ ಈಗ ನೀರು ಕೊಟ್ಟರೆ ಕಂಬದಕಡ ತಲೆ ಮೇಲೆ ಖಾಯಂ ಆಗಿ ಕಲ್ಲು ಹಾಕಿ ನಿಲ್ಲಿಸಬಹುದು. ಇದು ಸರ್ಕಾರದವರ ಪಿತೂರಿ. ಈ ಪಿತೂರಿಯನ್ನು ಮಾಡಬೇಡಿ. 1924ರ ಒಪ್ಪಂದದ ಪ್ರಕಾರ ಉಳಿಯುತಕ್ಕ ಸರ್ಪ್ಲಸ್ ನೀರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎಂದು ಆಲೋಚನೆ ಮಾಡಿ. ಇದಕ್ಕೆ ನಿಮಗೆ ಯಾವ ಡ್ಯಾಂ ಸೈಟ್ ಇದೆ? ಎಲ್ಲಿಯೂ ಡ್ಯಾಂ ಸೈಟ್ ಇಲ್ಲ. ಇದ್ದರೆ ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ.

ಒಂದೊಂದು ಬಾರಿ ನಮ್ಮ ರಾಜ್ಯದ ಮಹಾಮಾತ್ಯ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಮದ್ರಾಸ್ ಸರ್ಕಾರದ ಏಜೆಂಟರಂತೆ ವರ್ತಿಸುತ್ತಿದ್ದಾರೆ ಎಂದೆನಿಸುತ್ತದೆ. ಕಾವೇರಿ ನದಿಯ ನೀರಿನ ವಿಷಯದಲ್ಲಿ ನಮಗೆ ಹೊಟ್ಟೆ ಉರಿ, ದುಃಖ ಅನುಕಂಪ ಬರುತ್ತದೆ. ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಕಾವೇರಿ ಬೇಸಿನ್ ನೀರನ್ನು ಅವರಿಗೆ ಮಾರಾಟ ಮಾಡಬೇಡಿ. ಹರಾಜು ಹಾಕಬೇಡಿ ಪಿತೂರಿ ಮಾಡುವುದಕ್ಕೆ ಹೋಗಬೇಡಿ. ಜನ ಸಂಕಟ ಪಡುತ್ತಿದ್ದಾರೆ.

ವರುಣ ನಾಲೆಯನ್ನು ತೆಗೆಯುವುದಕ್ಕೆ ಹೊರಟಿದ್ದೀರಿ. ಇದರ ವಿಷಯ ಮಾನ್ಯ ಸದಸ್ಯರು ಹೇಳಿದರು. ಈ ನಾಲೆಯನ್ನು ತೆಗೆಯತಕ್ಕದು ಕೃಷ್ಣರಾಜ ಸಾಗರದಲ್ಲಿನ ನೀರನ್ನು ಆ ನಾಲೆಯಿಂದ ಉಪಯೋಗಿಸಿಕೊಂಡು ಕಬಿನಿಯಲ್ಲಿ ಪವರ್ ಜನರೇಷನ್‌ಗೆ ನೀರು ಕೊಡತಕ್ಕದ್ದು ಮುಖ್ಯ ಗುರಿ; ಅವರ ಪ್ಲಾನ್ ಮತ್ತು ಎಸ್ಟಿಮೇಟ್. ಇದು ಮಾನ್ಯ ಮಂತ್ರಿವರ್ಯರಿಗೆ ಗೊತ್ತಿರಬಹುದು. ಆದರೆ ಕಬಿನಿ ಪ್ರಾಜೆಕ್ಟ್ ಕೆಲಸ 150 ವರ್ಷವಾದರೂ ಮುಗಿಯುವುದಿಲ್ಲ. ಮುಗಿಯುವುದಿಲ್ಲ ಎಂದು ತಿಳಿದ ಮೇಲೆ ಯಾವ ಜನತೆಯ ಉದ್ಧಾರಕ್ಕೆ ಯಾರ ಉದ್ಧಾರಕ್ಕೆ ಮಾಡುತ್ತಿದ್ದೀರಿ, ತೊಂದರೆ ಕೊಡುವುದಕೆ ಮಾಡುತ್ತಿದ್ದೀರಾ ಎಂದು ಕೇಳುತ್ತೇನೆ. ಕಬಿನಿ ಪ್ರಾಜೆಕ್ಟ್ ವಿಚಾರ ಹೇಳಬೇಕಾದರೆ, ಅಲ್ಲಿ ನಾಚಪ್ಪಾದಂ ಎಂಬ ಕಂಟ್ರಾಕ್ಟರಿಗೆ ಮೇಸನರಿ ವರ್ಕ್ ಮಾಡಲು ಫಾರೀನ್ ಎಕ್ಸ್‌ಛೇಂಜ್ ಮೂಲಕ ಮೆಷಿನರಿ ತರಿಸಿಕೊಟ್ಟಿದ್ದೀರಿ. ಇದನ್ನು ಹಿಂದೆಯೂ ಹೇಳಿದ್ದೇನೆ, ಇಂದೂ ಹೇಳುತ್ತಿದ್ದೇನೆ. ಇದಕ್ಕೆ ಉತ್ತರ ಕೊಟ್ಟಿಲ್ಲವೆನ್ನುವುದಕ್ಕೆ ಪದೇ ಪದೇ ಹೇಳುತ್ತೇನೆ. ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಮಂತ್ರಿವರ್ಯರು ಇದಕ್ಕೆ ಉತ್ತರಿಸಬೇಕು. ತಾವು ಫಾರೀನ್ ಎಕ್ಸ್‌ಛೇಂಜ್ ಮೂಲಕ ತರಿಸಿಕೊಟ್ಟ ಯಂತ್ರಗಳನ್ನು ಈ ಕಂಟ್ರಾಕ್ಟರ್ ಮಹಾಶಯ ಕೇರಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಕೆಲಸ ಮಾಡುತ್ತಿದ್ದಾನೆ. ಇಲ್ಲಿಯ ಕೆಲಸಕ್ಕೆ ಉಪಯೋಗವಾಗುತ್ತಿಲ್ಲ ಎಂದು ಹೇಳುತ್ತೇನೆ. ಇದಕ್ಕೆ ಏನು ಕಾರ್ಯಕ್ರಮ ತಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ.

[MR. SPEAKER in the Chair]

ಇನ್ನೊಬ್ಬ ಕಂಟ್ರಾಕ್ಟರು ಮಣಿ ಅಂಡ್ ಕಂಪೆನಿಯವರಿಗೆ ಡ್ಯಾಂ ಮೇಸನರಿ ಕೆಲಸವನ್ನು ಕೊಟ್ಟಿದ್ದೀರಿ. ಅಲ್ಲಿ ಒಂದು ಕಥೆಯಾಗಿದೆ. ಕಟ್ಟೆ ಕಟ್ಟುವ ಸ್ಥಳದಲ್ಲಿದ್ದ ಜಮೀನಿನ ರೈತರಿಗೆ ಸರಿ

(ಶ್ರೀ ಎಚ್. ಎನ್. ನಂಜೇಗೌಡ)

ಹಾರವನ್ನು ಕೊಟ್ಟು ಅವರನ್ನು ಬಿಡಿಸಿದಿರಿ. ಇದಕ್ಕೆ ಉತ್ತರ ಭಾಗದಲ್ಲಿ 150 ಎಕರೆ ಜಮೀನು ಇದೆ. ಈ ಮಣಿ ಅಂಡ್ ಕಂಪೆನಿಯವರು ಯಾರ ಅನುಮತಿಯೂ ಇಲ್ಲದೆ, ಮರಾಮತ್ತು ಇಲಾಖೆಯವರ ಅನುಮತಿಯೂ ಇಲ್ಲದೆ ದೊಡ್ಡದಾಗಿ ಲಿಫ್ಟ್ ಇರಿಗೇಷನ್ ಇಟ್ಟುಕೊಂಡು ಒಂದು ವರ್ಷಕ್ಕೆ ಲಕ್ಷಾವಧಿ ಮೇಲೆ ಆದಾಯವನ್ನು ಹೊಂದುತ್ತಿದ್ದಾರೆ.

ಇದಲ್ಲದೆ ಇವರಿಬ್ಬರು ಕಂಟ್ರಾಕ್ಟರುಗಳು ಸೇರಿ ನಮ್ಮ ರಾಜ್ಯದಲ್ಲಿರುವ ಮರಗಳನ್ನು, ತೇಗ ಮುಂತಾದುವನ್ನು, ರಾಜ್ಯದಲ್ಲೇ ಹೆಸರಾಂತ ಕಾಕನಕೋಟೆ ಕಾಡಿನಿಂದ ಕೇರಳಕ್ಕೆ ಸಾಗಿಸುತ್ತಿದ್ದಾರೆ. ಕೇರಳ ಬಾರ್ಡರ್ ಅಲ್ಲಿಗೆ ಒಂದೆರಡು ಮೂರು ಮೈಲಿ ದೂರದಲ್ಲಿದೆ. ಇವರು ಮರಗಳನ್ನು ಕಡಿದು ಕೇರಳಕ್ಕೆ ಸಾಗಿಸತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ದುಡ್ಡು ಹೋಗಿ ಈ ಇಬ್ಬರು ಕಂಟ್ರಾಕ್ಟರುಗಳೂ ಹಣ ಸಂಪಾದನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ದಯವಿಟ್ಟು ಉತ್ತರ ಕೊಡಬೇಕು.

ಕೊನೆಯಲ್ಲಿ ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನೀವು ಆಡಳಿತ ನಡೆಸುತ್ತಿದ್ದೀರಿ. ನಿಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡಿರಿ. ಅದರಿಂದ ರಾಷ್ಟ್ರಕ್ಕೆ ದ್ರೋಹವಾಗುತ್ತಿದೆ. ಕಪಿಯ ಕೈಯಲ್ಲಿ ಮಾಣಿಕ್ಯವನ್ನು ಕೊಟ್ಟ ಹಾಗೆ ಆಗಿದೆ. ಇಷ್ಟು ಹಣವನ್ನು ನಿಮ್ಮ ಕೈಗೆ ಕೊಡುವಾಗ ಅದನ್ನು ನೀವು ಹಾಳು ಮಾಡಿದರೆ ಮರ್ಕಟದ ಕೈಗೆ ಮಾಣಿಕ್ಯ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ರಾಜ್ಯದ ಹಣವನ್ನು ಸರಿಯಾಗಿ ವಿನಿಯೋಗಿಸಿ, ಚೆನ್ನಾಗಿ ಆಡಳಿತ ಮಾಡಿ, ಒಳ್ಳೆಯ ಆಡಳಿತಗಾರರು ಎನ್ನುವ ಹೆಸರನ್ನು ಹೊಂದುವಂತೆ ಕೆಲಸ ಮಾಡಿರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I find this is a very important Demand involving very large amount of money. A large number of Members are anxious to speak. They have disclosed and some of them are in the process of disclosing. I can visualise from their faces. Therefore, I am making a suggestion they may kindly consider it. Tomorrow, we will sit in the morning and if necessary in the evening also.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮೊದಲು ಈ ಬೇಡಿಕೆಗಳಿಗೆ ಮೂರು ದಿವಸ ಕೊಡಬೇಕೆಂದು ತೀರ್ಮಾನವಾಗಿತ್ತು. ಮಧ್ಯೆ ಒಂದು ಮಸೂದೆಯನ್ನು ತೆಗೆದುಕೊಳ್ಳಬೇಕಾಗಿ ಬಂದುದರಿಂದ ಎರಡು ದಿವಸ ಮಾಡಿತ್ತು. ತಾವು ಸೂಚನೆ ಕೊಟ್ಟಿರುವ ಪ್ರಕಾರ ಬೆಳಗ್ಗೆ 9 ರಿಂದ ಒಂದು ಗಂಟೆವರೆಗೆ ಮತ್ತು ಮಧ್ಯಾಹ್ನ ಮೂರರಿಂದ ಏಳರವರೆಗೆ, ಎರಡು ಹೊತ್ತೂ ಕುಳಿತುಕೊಂಡರೆ ಆಗ ಹೆಚ್ಚು ಕಾಲ ಮಾನ್ಯ ಸದಸ್ಯರಿಗೆ ಸಿಕ್ಕುತ್ತದೆ. ಈ ರೀತಿ ಮಾಡಬಹುದೆಂದು ಹೇಳುತ್ತೇನೆ.

Sri D. M. SIDDIAH (Biligere).—We will agree.

Mr. SPEAKER.—Then we will drop Question-Hour also. Tomorrow we will commence at 9 A.M. and there will be no Question Hour, and no call attention. We will commence directly the Demands.

ಶ್ರೀ ಅಲ್ಲಂ ಕರಿಬಸಪ್ಪ (ಕುರುಗೋಡು).—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಡಿಮಾಂಡುಗಳನ್ನು ಅನುಮೋದಿಸುತ್ತ ಕೆಲವು ವಿಚಾರಗಳನ್ನು ಹೇಳಲು ಬಯಸುತ್ತೇನೆ.

ಈಗ ಸುಮಾರು ಐದಾರು ವರ್ಷಗಳಿಂದ ನಮ್ಮ ಇಡೀ ಮೈಸೂರು ರಾಜ್ಯದಲ್ಲಿ, ಮೇಲಾಗಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ರಸ್ತೆಗಳಾಗಿವೆ ಎಂದು ಹೇಳಲಿಕ್ಕೆ ಬಹಳ ಸಂತೋಷವಾಗುತ್ತದೆ. ಈ ಸಮಯದಲ್ಲಿ ಹೆಚ್ಚಾದರೂ ಕೂಡ ಸಂಪೂರ್ಣವಾಗಿ ಆಗಿಲ್ಲ ಮತ್ತು ನಮ್ಮ ಬಳ್ಳಾರಿ ಜಿಲ್ಲೆ ಮುಖ್ಯವಾಗಿ ಬಹಳ ಹಿಂದುಳಿದ ಜಿಲ್ಲೆ ಮತ್ತು ತಾಲ್ಲೂಕು ಆಗಿರುವುದರಿಂದ ಇಂಥ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಅಥವಾ ಟಾಪ್ ಪ್ರಯಾರಿಟಿ ಕೊಟ್ಟು ಅಲ್ಲಿ ಹೆಚ್ಚಿನ ರಸ್ತೆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಪ್ಲಾನಿಂಗ್ ಪ್ರಕಾರ ಹಳ್ಳಿಯಿಂದ ಹಳ್ಳಿಗೆ ರಸ್ತೆಗಳು ಆಗಲೇಬೇಕು. ಅದಕ್ಕೆ ಹೇಗಾದರೂ ಮಾಡಿ ಹಣವನ್ನು ಒದಗಿಸಿದರೆ ಬಹಳ ಚೆನ್ನಾಗಿ ಆಗುತ್ತದೆ. ಆದುದರಿಂದ ಎಲ್ಲಿಯವರೆಗೆ ಹಳ್ಳಿಯಿಂದ ಹಳ್ಳಿಗೆ ರಸ್ತೆ ಆಗುವುದಿಲ್ಲವೋ ಅಲ್ಲಿಯವರೆಗೆ ಹಳ್ಳಿಯವರಿಗೆ ಅನುಕೂಲತೆ ಕಡಮೆಯಾಗುತ್ತದೆ. ಆದುದರಿಂದ ಹಳ್ಳಿಯಿಂದ ಹಳ್ಳಿಗೆ ಸಂಬಂಧಪಟ್ಟ ಲಿಂಕ್ ರೋಡ್ಸ್ ಏನಿವೆ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಸಂಬಂಧಪಟ್ಟ ಅಧಿಕಾರಿಗಳು ಕೆಲಸ ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕೆಲವು ಪ್ರದೇಶಗಳಲ್ಲಿ ಎಂದರೆ, ಮುಖ್ಯವಾಗಿ ಕಂಪ್ಲಿ ಸಕ್ಕರೆ ಕಾರ್ಖಾನೆಯ ಪ್ರದೇಶದಲ್ಲಿ ಆಯಕಟ್ಟಿನ ರಸ್ತೆಗಳು ಇಲ್ಲವೇ ಇಲ್ಲ. ಈ ಪ್ರದೇಶದಲ್ಲಿ ಸ್ಪೆಷಲ್ ಗ್ರ್ಯಾಂಟ್ಸ್ ಅಥವಾ ಡೆವಲಪ್‌ಮೆಂಟ್ ಗ್ರ್ಯಾಂಟ್ಸ್‌ನಿಂದ ಆಯಕಟ್ಟು ರಸ್ತೆಗಳು ಸುಮಾರು ಎಂಟು ಹತ್ತು ರಸ್ತೆಗಳು ಆಗಬೇಕಾಗಿವೆ. ಇನ್ನು ಒಂದೆರಡು ವರ್ಷದಲ್ಲಿ ಅವನ್ನು ತೆಗೆದುಕೊಂಡು ಪೂರೈಸಬೇಕು. ಇಲ್ಲವಾದರೆ ಅಲ್ಲಿಯ ರೈತರಿಗೆ ಸಕ್ಕರೆ ಕಾರ್ಖಾನೆಗೆ ಕಬ್ಬು ಹೊಡೆಯುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಹೆಚ್ಚಿನ ಕಳಕಳಿಯಿಂದ ಈ ವಿಚಾರವನ್ನು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಬಳ್ಳಾರಿ ಜಿಲ್ಲೆ ಎಲ್ಲರಿಗೂ ತಿಳಿದಹಾಗೆ ಬಹಳ ಹಿಂದುಳಿದ ಜಿಲ್ಲೆ. ಆದುದರಿಂದ ಅದನ್ನು ಗಮನದಲ್ಲಿಟ್ಟು ನಾಲ್ಕೈದು ವರ್ಷಗಳಲ್ಲಿ ಅಲ್ಲಿ ರಸ್ತೆ ವಗೈರೆ ಮಾಡಿ ಅನುಕೂಲಮಾಡುತ್ತಾರೆಂದು ನಂಬುತ್ತೇನೆ.

ಇನ್ನೊಂದು ಬಳ್ಳಾರಿ ಜಿಲ್ಲೆ ಮೈನಿಂಗ್ ಇಂಡಸ್ಟ್ರಿ ಇದೆ, ಹೊಸಪೇಟೆ ಮತ್ತು ಬಳ್ಳಾರಿಯಲ್ಲಿ ಕಬ್ಬಿಣದ ಅದುರನ್ನು ತೆಗೆಯುತ್ತಿದ್ದಾರೆ. ಅಲ್ಲಿಂದ ಸುಮಾರು 30 ಲಕ್ಷ ಟನ್ ರಫ್ತಾಗುತ್ತಿದೆ. ಅಲ್ಲಿ ಟನ್ನಿಗೆ ಒಂದು ರೂಪಾಯಿನ ಪ್ರಕಾರ ಸರಕಾರ ರಾಯಲ್ಟಿ ತೆಗೆದುಕೊಳ್ಳುತ್ತಾರೆ, ಈ ಬಾಬತು 25-30 ಲಕ್ಷ ರೂಪಾಯಿಗಳು ವಸೂಲಾದರೂ ಕೂಡ ಒಂದು ಪೈಸೆ ಸಹ ಆ ಪ್ರದೇಶದ ರಸ್ತೆಗಳ ದುರಸ್ತಿಗಾಗಿ ಖರ್ಚುಮಾಡುತ್ತಿಲ್ಲ. ರಾಯಲ್ಟಿ ಪ್ರತಿ ವರ್ಷ ಎಷ್ಟು ಕಟ್ಟುವರೆಂಬುದು ಜಿಯಲಾಜಿಕಲ್ ಇಲಾಖೆಯಲ್ಲಿ ಇರುವ ಲೆಕ್ಕ ನೋಡಿದರೆ ಗೊತ್ತಾಗುತ್ತದೆ. ಯಾರು ಎಷ್ಟು ಕಟ್ಟಿದ್ದಾರೆ ಎಂದು ನೋಡಿ ಬಳ್ಳಾರಿಯಲ್ಲಿ ಅದರ ದಾಮಾಷ ಪ್ರಕಾರ ಸಂಬಂಧಪಟ್ಟ ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಿಸಿ ದುರಸ್ತುಮಾಡುವುದಕ್ಕೆ ಖರ್ಚುಮಾಡಬೇಕೆಂದು ವಿನಂತಿಮಾಡುತ್ತೇನೆ.

ಇನ್ನೊಂದು ಒಳ್ಳೆಯ ಸಂತೋಷದ ವಿಷಯ. ಈ ವರ್ಷ ಮೈನಿಂಗ್ ಅಂಡ್ ಮಿನರಲ್ ಟ್ರೇಡಿಂಗ್ ಕಾರ್ಪೊರೇಷನ್‌ನವರು ಹೊಸಪೇಟೆ ಮತ್ತು ಬಳ್ಳಾರಿ ಪ್ರದೇಶದ ರಸ್ತೆ ಸೌಕರ್ಯಕ್ಕಾಗಿ 50 ಮೈಲಿಗೆ, ಮೈಲಿಗೆ 50 ಸಾವಿರ ರೂಪಾಯಿಗಳ ಪ್ರಕಾರ 25 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದಾರೆ. ಅಲ್ಲಿನ ರಸ್ತೆ ಕೆಲಸವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ವಹಿಸಿ ಆ ಕೆಲಸವನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಅವರು ರೋಡು ಲಿಸ್ಟ್ ಪ್ರಕಾರ ತೆಗೆದುಕೊಳ್ಳಬೇಕು. ಇದಕ್ಕಾಗಿ ಸಂಬಂಧಪಟ್ಟ ಡೈರೆಕ್ಟರು ಮತ್ತು ಆಫೀಸರುಗಳು ಬಂದು ಮಂತ್ರಿಗಳ ಬಳಿ ಮಾತನಾಡಿದ್ದಾರೆ. ಜಾಗ್ರತೆಯಾಗಿ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇರಿಗೇಷನ್ ವಿಚಾರ ತೆಗೆದುಕೊಂಡರೆ ಮೇಜರ್, ಮೀಡಿಯಂ ಮತ್ತು ಮೈನರ್ ಇರಿಗೇಷನ್ ಕೆಲಸಗಳೆಲ್ಲಾ ಚೆನ್ನಾಗಿ ನಡೆಯುತ್ತಿವೆ. ಆದರೂ ಸಹ ನಮ್ಮ ಜಿಲ್ಲೆಯಲ್ಲಿ ಇನ್ನೂ ಹೆಚ್ಚು ಮೈನರ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟ ಇಲಾಖೆಯವರಲ್ಲಿ ವಿನಂತಿ ಮಾಡುತ್ತೇನೆ. ಅದರಲ್ಲೂ ಮುಖ್ಯವಾಗಿ ತುಂಗಭದ್ರಾ ಪ್ರದೇಶದಲ್ಲಿ ನಮ್ಮ ಜಿಲ್ಲೆಯಲ್ಲಿ ಇರುವುದರಿಂದ ಅಲ್ಲಿಗೆ ಹೆಚ್ಚು ಅನುಕೂಲವಾಗಬೇಕು ಆ ವಿಚಾರದಲ್ಲಿ ಎರಡುಮೂರು ಸಲಹೆಗಳನ್ನು ಕೊಡುತ್ತೇನೆ. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ತುಂಗಭದ್ರಾ ಪ್ರಾಜೆಕ್ಟಿಗೆ ಸಂಬಂಧಪಟ್ಟ ಹೈ ಲೆವಲ್ ಮತ್ತು ಲೋ ಲೆವಲ್ ಕನಾಲುಗಳು ಬಲ ದಂಡೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 3 ಲಕ್ಷ ಎಕರೆ, ರಾಯಚೂರು ಜಿಲ್ಲೆಯಲ್ಲಿ ಸುಮಾರು ನಾಲ್ಕೂವರೆ ಲಕ್ಷ ಎಕರೆ, ಒಟ್ಟು ಸುಮಾರು ಏಳೂವರೆ ಲಕ್ಷ ಎಕರೆ ನೀರಾವರಿಯಾಗಬೇಕು. ಇದರಲ್ಲಿ ಸುಮಾರು ಆರೂವರೆ ಲಕ್ಷ ಎಕರೆ ಇನ್ನೂ ಡೆವಲಪ್ ಆಗಿಲ್ಲ, ಹೈ ಲೆವಲ್ ಕಾಲುವೆ ಕೆಳಗಿನ ಅಚ್ಚುಕಟ್ಟು ಡೆವಲಪ್ ಆಗಿಲ್ಲ, ಬಳ್ಳಾರಿ ಜಿಲ್ಲೆಯಲ್ಲಿ ಇದುವರೆಗೆ ಒಂದು ಎಕರೆಗೂ ಅನುಕೂಲವಾಗಿಲ್ಲ. ಇದು ಬಹಳ ವಿಷಾದದ ವಿಚಾರ. ಈ ಪ್ರದೇಶ ಡೆವಲಪ್ ಆಗದಿರುವುದಕ್ಕೆ ಕಾರಣ ಯಾವುದು ಲೋಕಲೈಜ್ ಆಗಿದೆ ಎಂಬುದನ್ನು ರೈತರಿಗೆ ತಿಳಿಸಿಲ್ಲ. ಆದುದರಿಂದ ಇಲ್ಲಿ ವಿಚಿತ್ರವಾದ ಪರಿಸ್ಥಿತಿ ಇದೆ. ಯಾವಾಗ ಯಾವ ಪ್ರದೇಶಕ್ಕೆ ನೀರು ಬರುವುದು ಎಂಬುದನ್ನು ತಿಳಿದು ಸಂಬಂಧಪಟ್ಟ ಆಫೀಸರು 8 ತಿಂಗಳ ಮುಂಚೆಯೇ ತಿಳಿಸಿದ್ದರೆ ರೈತರು ನೀರನ್ನು ಉಪಯೋಗಮಾಡಿಕೊಳ್ಳಲು ಅವಕಾಶವಾಗುತ್ತಿತ್ತು. ಈಗ ಆ ಅವಕಾಶ ಸಿಕ್ಕಿಲ್ಲ. ಅಲ್ಲದೆ

(ಶ್ರೀ ಅಲ್ಲಂ ಕರಿಬಸಪ್ಪ)

ಇನ್ನೊಂದು ಆ ಪ್ರದೇಶವನ್ನು ಅಭಿವೃದ್ಧಿ ಮಾಡಲು ಅಲ್ಲಿನ ರೈತರಲ್ಲಿ ಹಣವಿಲ್ಲ. ಆದುದರಿಂದ ಇದರಲ್ಲಿ ಸರಕಾರದ ತಪ್ಪೂ ಇದೆ. ಈಗ ತಿಳಿದಿರುವ ಪ್ರಕಾರ ಸರಕಾರಕ್ಕೆ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನಿಂದ 9 ಕೋಟಿ ರೂಪಾಯಿ ಮಂಜೂರಾಗಿದೆ; ಇದು ಸಾಲದು, ಬಳ್ಳಾರಿ ಮತ್ತು ರಾಯಚೂರಿಗೆ 15 ಕೋಟಿ ರೂಪಾಯಿ ಬೇಕಾಗಬಹುದೆಂಬ ಅಂದಾಜಿದೆ. ಆದುದರಿಂದ 9 ಕೋಟಿ ಬಂದರೆ 6 ಕೋಟಿ ಕಡಮೆಯಾಗುತ್ತದೆ, ಅದನ್ನು ಪ್ರತಿಯೊಬ್ಬ ರೈತರಿಂದ ಎಕರೆಗೆ 50 ರಿಂದ 100 ರೂಪಾಯಿ ಪ್ರಕಾರ ವಸೂಲುಮಾಡಿ ಎರಡು ಮೂರು ವರ್ಷಗಳಲ್ಲಿ ಕೆಲಸವನ್ನು ಪೂರ್ಣಮಾಡಿದರೆ ಪೂರ್ತಿಯಾದ ಪ್ರದೇಶ ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಯೋಚನೆಮಾಡಿ ಎಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವೋ ಅಷ್ಟು ಶೀಘ್ರವಾಗಿ ತರಬೇಕು ಮಾನ್ಯ ಮುಖ್ಯ ಮಂತ್ರಿಗಳು ಎಷ್ಟೋ ಸಲ ಸರಕಾರದಲ್ಲಿ ಹಣವಿಲ್ಲ, ರೈತರು ಮುಂದೆ ಬಂದು ಎಕರೆಗೆ 300 ರೂಪಾಯಿನಂತೆ ಸಾಲ ಕೊಟ್ಟರೆ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಬಹಳ ರೈತರು ಇದನ್ನು ಕೇಳಿ ಕೊಡಲು ಮುಂದೆ ಬಂದಿದ್ದಾರೆ, ಕೊಡುವವರಿದ್ದಾರೆ, ಕೆಲಸವನ್ನು ಕಾರ್ಯಗತಮಾಡಬೇಕು ಎಂದು ಸೂಚಿಸುತ್ತೇನೆ. ಲಿಫ್ಟ್ ಇರಿಗೇಷನ್ನಿಗೆ ಬಳ್ಳಾರಿ ಜಿಲ್ಲೆಯಲ್ಲಿ ಬಹಳ ಕಡೆ ಅವಕಾಶವಿದೆ, ಸರ್ವೆಮಾಡಿ ಸಾಧ್ಯವಿರುವ ಕಡೆ ಹೆಚ್ಚಿನ ನೀರಾವರಿಗೆ ಅವಕಾಶಮಾಡಬೇಕೆಂದು ವಿನಂತಿಮಾಡುತ್ತೇನೆ.

ನೂರಾರು ವರ್ಷಗಳಿಂದ ಹಗರಿ ನೀರಿನಿಂದ ಸುಮಾರು ಎರಡು ಸಾವಿರ ಎಕರೆಗೆ ನೀರೊದಗಿ ರೂಪನಗುಡಿ ಮತ್ತು ಮೋಕ ಪ್ರದೇಶಗಳಿಗೆ ಅನುಕೂಲವಾಗಲು ಅವಕಾಶವಿತ್ತು. ಈಗ ಆಂಧ್ರದವರು ರಾಜೋಲಿಬಂಡ ಮುಂತಾದ ಮೂರು ಪ್ರಾಜೆಕ್ಟುಗಳನ್ನು ಮಾಡಿರುವುದರಿಂದ ಈ ಎರಡು ಸಾವಿರ ಎಕರೆಗೆ ನೀರಿಲ್ಲದಂತಾಗಿದೆ. ರೈಪೇರಿಯನ್ ರೈಟ್ಸ್ ವಿಚಾರದಲ್ಲಿ ಬಹಳ ಅನಾನುಕೂಲವಾಗಿದೆ. ನಮಗೆ ನ್ಯಾಯವಾಗಿ ಬರಬೇಕಾದ ನೀರಿನ ಭಾಗವನ್ನು ಸರಿಯಾಗಿ ಕ್ಲೈಂ ಮಾಡದೆ ನಮ್ಮ ನೀರಿನ ಭಾಗದಲ್ಲಿ ಆಂಧ್ರದವರಿಗೆ ಹೆಚ್ಚು ಅನುಕೂಲವಾಗುತ್ತಿದೆ. ಇದನ್ನು 5-6 ವರ್ಷಗಳಿಂದ ಹೇಳಿದ್ದೇವೆ. ಮೋಕದಿಂದ ರೂಪನಗುಡಿಯವರೆಗೆ ಅನುಕೂಲವಾಗುವಂತೆ ಹೈಲೆವಲ್ ನಾಲೆಯಿಂದ ಕನೆಕ್ಷನ್ ಕೊಟ್ಟು ಹಗರಿಯಿಂದ ಅನುಕೂಲವಾಗುವುದು. ಅದನ್ನು ಮಾಡಿಲ್ಲ ಇದಕ್ಕೆ ಗಮನಕೊಟ್ಟರೆ ರೂಪನಗುಡಿ, ಕಾರಕಲ್ ಮುಂತಾದ ಗ್ರಾಮಗಳವರಿಗೆ ಅನುಕೂಲವಾಗುವುದೆಂದು ಒಂದು ಪಟ್ಟಿ ಸಹ ಕೊಟ್ಟಿದ್ದೆವು. ಲೋಕಲೈಜೇಷನ್‌ನಲ್ಲಿ ಈ ಅನುಕೂಲಮಾಡಿಕೊಡಬೇಕು. ಭದ್ರ ಪ್ರಾಜೆಕ್ಟಿನಿಂದ ಬಳ್ಳಾರಿ ಜಿಲ್ಲೆಯಲ್ಲಿ ಮೊದಲನೆಯ ಯೋಜನೆ ಪ್ರಕಾರ ಹರಪನಹಳ್ಳಿ ಮತ್ತು ಹಡಗಲಿ ಈ ಎರಡು ತಾಲ್ಲೂಕುಗಳಿಗೆ ಅನುಕೂಲವಾಗುವುದು, 40 ಸಾವಿರ ಎಕರೆ ನೀರಾವರಿಯಾಗುವುದು ಎಂದು ಹೇಳಿದರು. ಆದರೆ ಈಗಿನ ಯೋಜನೆ ಪ್ರಕಾರ ಹರಪನಹಳ್ಳಿಯಲ್ಲಿ 10 ಸಾವಿರ ಎಕರೆ ನೀರಾವರಿಯಾಗುವುದು. ಮೊದಲಿದ್ದ ಯೋಜನೆ ಏನಾದರೂ ಬದಲಾವಣೆಯಾಯಿತೋ ಏನೋ ಗೊತ್ತಿಲ್ಲ. ಇದನ್ನು ಮತ್ತೆ ಆಲೋಚನೆಮಾಡಿ ರಿವೈಜಮಾಡಿ ಈ ಎರಡು ತಾಲ್ಲೂಕುಗಳಿಗೂ ಅನುಕೂಲಮಾಡಿಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ಕೆಲಸವಿದೆ. ಇದಕ್ಕೆ ಹಡಗಲಿ ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ ಅವಕಾಶವಿದೆ. ಹೆಚ್ಚಿನ ಪ್ರಮಾಣದಲ್ಲಿ ಈ ಕೆಲಸವನ್ನು ಅಲ್ಲಿ ಮಾಡಬೇಕು.

ಇನ್ನೊಂದು ಮೈಲಾರದ ಬಳಿ ತುಂಗಭದ್ರಾ ನದಿಗೆ ಒಂದು ಸೇತುವೆಯನ್ನು 4-5 ವರ್ಷಗಳಿಂದ ಕಟ್ಟುತ್ತಿದ್ದಾರೆ. ಇದಾದರೆ ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಿಗೆ ಬಹಳ ಅನುಕೂಲ. ಇನ್ನು ಎರಡು ಸ್ಪ್ಯಾನುಗಳಾದರೆ ಸೇತುವೆ ಕೆಲಸ ಪೂರ್ಣವಾಗುತ್ತದೆ. ಇದನ್ನು ಜಾಗ್ರತೆ ಪೂರೈಸಿ ಕೊಡಬೇಕು ಎಂದು ವಿನಂತಿಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಸಭೆಯ ಮುಂದೆ ಸರ್ಕಾರದ ಪರವಾಗಿ ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳಿಟ್ಟಿರುವ ಸುಮಾರು 12 ಡಿಮ್ಯಾಂಡುಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲು ಇಚ್ಛಿಸುತ್ತೇನೆ. 1956ನೆಯ ಇಸವಿಯಲ್ಲಿ ಕನ್ನಡ ನಾಡಿನ ಭಾಗಗಳು ಒಟ್ಟಿಗೆ ಸೇರಿ ಹೊಸ ಮೈಸೂರು ರಾಜ್ಯವಾದಾಗ ನಮ್ಮ ದೇಶದಲ್ಲಿರುವ ಕೃಷ್ಣ, ಗೋದಾವರಿ ಮತ್ತು ಕಾವೇರಿ ಬೇಸಿನ್‌ಗಳ ನೀರನ್ನೆಲ್ಲಾ ಉಪಯೋಗಿಸಿಕೊಂಡು ನಮ್ಮ ಕನ್ನಡ ರಾಜ್ಯದ ಮುಂದಿರುವ ಆಹಾರ ಸಮಸ್ಯೆಯನ್ನು ಬಗೆಹರಿಸಲು ಮತ್ತು ಹೆಚ್ಚು ಆಹಾರ ಉತ್ಪತ್ತಿ ಮಾಡಲು ಸರ್ಕಾರ ಮನಸ್ಸುಮಾಡಿ ಪ್ರಯತ್ನ ಮಾಡಿತು.

4-00 P. M.

ಜೊತೆಗೆ ಈ ಕನ್ನಡ ರಾಜ್ಯದ ಸಂಪತ್ತನ್ನು ಹೆಚ್ಚುಮಾಡತಕ್ಕಂತಹ ಅಭಿಪ್ರಾಯ ಕೂಡ ಸರ್ಕಾರದ ಮನಸ್ಸಿನಲ್ಲಿತ್ತು. ಈ ದೆಸೆಯಲ್ಲಿ ಕಳೆದ 10 ವರ್ಷಗಳಿಂದ ನೀರಾವರಿ ಬಗ್ಗೆ ದೊಡ್ಡ ನೀರಾವರಿ ಯೋಜನೆ, ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಮತ್ತು ಬಾವಿಗಳನ್ನು ತೋಡಿಸಿ, ನೀರನ್ನು ಒದಗಿಸುವಂತಹ ಮೂರು ವಿಭಾಗಗಳನ್ನಾಗಿ ಮಾಡಿಕೊಂಡು, ಸರ್ಕಾರದವರು, ಲೋಕೋಪಯೋಗಿ ಇಲಾಖೆಯ ಮೂಲಕ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಬಹುಶಃ ನಮ್ಮ ರಾಜ್ಯ ಪ್ರಾರಂಭವಾದಾಗ, ಅಂದರೆ 1956 ರಲ್ಲಿ ರಾಜ್ಯ ಸರ್ಕಾರದವರು ಈ ನೀರನ್ನು ಉಪಯೋಗಿಸಿ, ಸಂಪತ್ತನ್ನು, ಉತ್ಪನ್ನವನ್ನು ಜಾಸ್ತಿಮಾಡತಕ್ಕಂಥ ಒಂದು ಆಶೆ, ಆಕಾಂಕ್ಷೆ ಇತ್ತು. ಅದು ಬಹುಶಃ ಇಂದು ರಾಜ್ಯದಲ್ಲಿ, ರಾಜ್ಯದ ಜನತೆಯಲ್ಲಿ ಕಾಣುತ್ತಾ ಇಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇನ್ನು ಕೃಷ್ಣಾ ಬೇಸೀನ್‌ನಲ್ಲಿ ನೀರನ್ನು ಉಪಯೋಗಮಾಡಿಕೊಂಡು ಪ್ರೊಜೆಕ್ಟುಗಳನ್ನು ತಯಾರುಮಾಡುವ ವಿಚಾರದಲ್ಲಾಗಲಿ ಮತ್ತು ಕಾವೇರಿ ಬೇಸೀನ್‌ನಲ್ಲಿ ನೀರನ್ನು ಉಪಯೋಗಿಸಿಕೊಂಡು ಅಣೆಕಟ್ಟುಗಳನ್ನು ಕಟ್ಟತಕ್ಕ ವಿಚಾರದಲ್ಲಾಗಲಿ ಮತ್ತು ಕೇಂದ್ರ ಸರ್ಕಾರದವರಿಂದ ಇದಕ್ಕೆ ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಮಾಡುವ ಕೆಲಸದಲ್ಲಾಗಲಿ, ನಮ್ಮ ಸರ್ಕಾರದವರು ಜಯಶೀಲರಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈ 10 ವರ್ಷಗಳಲ್ಲಿ ಕಾವೇರಿ ನೀರಿನ ವಿಚಾರದಲ್ಲಿ ಒಂದು ರೀತಿಯ ಮನೋಭಾವನೆ ತಾಳತಕ್ಕದ್ದು, ಕೃಷ್ಣಾ ಗೋದಾವರಿಯ ವಿಚಾರದಲ್ಲಿ ಮತ್ತೊಂದು ಮನೋಭಾವನೆ ತಾಳತಕ್ಕದ್ದು, ಇದು ಎಲ್ಲಾ, ಯಾರೂ ಮುಚ್ಚಿಟ್ಟರೂ ಕೂಡ, ಇಂದು ಅದು ಜನರಲ್ಲಿ ಒಂದು ಮನೆ ಮಾತಾಗಿದೆ. ನಮ್ಮಲ್ಲಿ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಯವರು, ಹಣದ ಕೊರತೆಯಿಂದ ಕಾವೇರಿ, ಕೃಷ್ಣಾ, ಗೋದಾವರಿ ನೀರನ್ನು ಉಪಯೋಗಮಾಡಿಕೊಳ್ಳಲಾಗಲಿಲ್ಲವೆಂದು ಹೇಳುತ್ತಾರೆ. ನಾನಾದರೂ ಹೇಳುತ್ತೇನೆ, ಈ 10 ವರ್ಷಗಳಲ್ಲಿ ಪ್ರತಿವರ್ಷ ಖರ್ಚುಮಾಡತಕ್ಕ ಹಣದಲ್ಲಿ ಸ್ವಲ್ಪ ಮನಸ್ಸುಮಾಡಿ, ದೊಡ್ಡ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಬೇಕೆಂದು ಮನಸ್ಸು ಮಾಡಿದ್ದ ಪಕ್ಷದಲ್ಲಿ ಕೃಷ್ಣಾ ಮತ್ತು ಕಾವೇರಿ ಕೈಗೊಂಡಿರತಕ್ಕ ಅಣೆಕಟ್ಟುಗಳಲ್ಲಿ ಅರ್ಧ, ಮುಕ್ಕಾಲು ಭಾಗ ಮುಗಿಸಬಹುದಾಗಿತ್ತು ಎಂದು ನಾನಾದರೂ ಭಾವಿಸಿದ್ದೇನೆ, ಅದರೆ, ನಮ್ಮ ದೇಶದ ದುರ್ದೈವವೋ ಎಂಬಂತೆ, ನಮ್ಮ ದೇಶದಲ್ಲಿರುವ ರಾಜಕೀಯದಿಂದ, ಮತ್ತು ಹಣದ ಕೊರತೆಯಿಂದ, ನಮ್ಮ ಕನ್ನಡ ನಾಡಿನ ನೀರಿನ ಸಂಪತ್ತಿಗೆ, ರಾಹು ಕೇತು ತಗುಲಿದೆಯೋ ಎಂದು ಕಾಣುತ್ತದೆ. 10 ವರ್ಷಗಳಿಂದ ಈ ಒಂದು ನೀರಿನ ಉಪಯೋಗಕ್ಕಾಗಿ ನಮ್ಮ ಸರ್ಕಾರದವರು ಎಷ್ಟು ಕೆಲಸ ಮಾಡಬೇಕಾಗಿತ್ತೋ ಅಷ್ಟು ಮಾಡಲಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ; ಮತ್ತು ಈ ದೊಡ್ಡ ನೀರಾವರಿಯ ಬಗ್ಗೆ ರಾಜಕೀಯ ಮತ್ತು ಹಣದ ಕೊರತೆ ಸರ್ಕಾರದ ಗಮನಕ್ಕೆ ಬಂದಾಗ, ಕಳೆದ 5 ವರ್ಷಗಳಿಂದ, ಈ ಸಣ್ಣ ಸಣ್ಣ ನೀರಾವರಿ ಯೋಜನೆಯನ್ನು ಹೆಚ್ಚು ಹೆಚ್ಚು ತೀವ್ರತೆಯಿಂದ ಮಾಡಬೇಕೆಂದು ಮಾಡಿದರು. ಕಳೆದ ಮೂರು ವರ್ಷಗಳಿಂದಲೂ ಈ ಸಣ್ಣ ನೀರಾವರಿ ಯೋಜನೆಯ ಕೆಲಸಗಳು ಬಹಳ ತೀವ್ರತೆಯಿಂದ ನಡೆಯಿತು. ಈಗ ಕಳೆದ 6—7 ವರ್ಷಗಳಿಂದ ಈ ದೊಡ್ಡ ನೀರಾವರಿ ಯೋಜನೆಯ ಬಗ್ಗೆ ಇದ್ದಂತಹ ನೀತಿ, ನಿಲುವು ಏನಿದೆ, ಅದು ಈ ಸಣ್ಣ ನೀರಾವರಿ ಯೋಜನೆಗೆ ಹಿಡಿಯಿತು ಎಂದು ನನಗಾದರೂ ಭಾಸವಾಗುತ್ತದೆ. ಪ್ರತಿಯೊಂದು ಜಿಲ್ಲೆ ಪ್ರತಿಯೊಂದು ತಾಲ್ಲೂಕಿಗೂ ಮಾಸ್ಟರ್ ಪ್ಲಾನ್ ಸರ್ಕಾರದವರು ತಯಾರುಮಾಡಿದ್ದಾರೆ. ಆದರೆ ಕೆಲಸಗಳನ್ನು ತೆಗೆದುಕೊಂಡಿಲ್ಲ. ಅದೇನೇ ಆಗಲೀ, ನಮ್ಮ ದೊಡ್ಡ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ನಮ್ಮ ಮೈಸೂರು ಜಿಲ್ಲೆಯಲ್ಲಿ ಕಬಿನಿ ಪ್ರೊಜೆಕ್ಟ್ ಕಟ್ಟಬೇಕೆಂದು ಸುಮಾರು ಪರಿಶೀಲನೆ ನಡೆದು ಕಾರ್ಯವು ಪ್ರಾರಂಭವಾಗಿ, ಆ ಪ್ರೊಜೆಕ್ಟನ್ನು ಕಟ್ಟತಕ್ಕ, ಸೈಟು ಬಹುಶಃ ರಾಜಕೀಯ ಒತ್ತಡದಿಂದ ಬದಲಾವಣೆಯಾಯಿತೋ, ಅಥವಾ ತಜ್ಞರ ಅಭಿಪ್ರಾಯದ ಮೇಲೆ ಬದಲಾವಣೆಯಾಯಿತೋ, ತಿಳಿದಿಯದು ಸುಮಾರು ಎರಡು ಕೋಟಿ ರೂಪಾಯಿ ಖರ್ಚುಮಾಡಿರತಕ್ಕ ಕಬಿನಿ ಸೈಟನ್ನು ನೋಡಿದ ಪಕ್ಷದಲ್ಲಿ, ಇಂದು 100 ಅಡಿ ಆಳದವರೆಗೆ ಫೌಂಡೇಶನ್ ಸಿಗಲಿಲ್ಲವೆಂದು ಹೇಳತಕ್ಕ ಪರಿಸ್ಥಿತಿ ಬಂದಿದೆ. ಇದು ಯಾವ ಕಾರಣದಿಂದ ಲಾಯ್ತು ಎಂದು ನನಗೆ ಗೊತ್ತಿಲ್ಲ. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಈ ಸಭೆಗೆ ತಿಳಿಸಲಿ ಎಂದು ನಾನು ಹೇಳುತ್ತೇನೆ. ಆದರೆ ಈಗ ಎರಡು ಕೋಟಿ ಹಣವನ್ನು ಈ ಕೆಲಸಕ್ಕೆ ಖರ್ಚು ಮಾಡಿ ಇದನ್ನು ಏಕೆ ಕೈಬಿಡಬಾರದು ಎಂಬ ಸುದ್ದಿ ಕೂಡ ತಿಳಿದುಬಂತು. ಇದೇನಾದರೂ ಆದಪಕ್ಷದಲ್ಲಿ ಮಳೆಯ ಅಭಾವದಿಂದ ಪದೇ ಪದೇ ಕ್ಷಾಮಕ್ಕೆ ತುತ್ತಾಗತಕ್ಕ ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ಟಿ. ನರಸೀಪುರ ಮೊದಲಾದ ಪ್ರದೇಶಗಳಿಗೆ ಬಹಳ ತೊಂದರೆಯುಂಟಾಗುತ್ತದೆ. ಬಹುಶಃ ಈ ಯೋಜನೆಯನ್ನು ಕೈಬಿಡತಕ್ಕ ಪ್ರಯತ್ನವನ್ನು ಮಾಡತಕ್ಕ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಒಗೊಟ್ಟರೆ,

(ಶ್ರೀ ಎಸ್. ಪುಟ್ಟಸ್ವಾಮಿ)

ಅದರಿಂದ ಮೈಸೂರು ಜಿಲ್ಲೆಯನ್ನು ಕಡೆಗಣಿಸಿದ ಹಾಗೆ ಆಗುತ್ತದೆ; ಮತ್ತು ಈಗ ಖರ್ಚು ಮಾಡಿರತಕ್ಕ ಹಣ ವ್ಯರ್ಥವಾಗುತ್ತದೆಂದು ಹೇಳುತ್ತೇನೆ. ಇನ್ನು ಈ ಕಾವೇರಿ ಬೇಸಿನ್‌ನಲ್ಲಿ ನಾನ್ ಷೆಡ್ಯೂಲ್ಡ್ ರಿವರ್‌ಗಳಿವೆ. ಸುವರ್ಣಾವತಿಯಲ್ಲಿ ಒಂದು ಅಣೆಕಟ್ಟು ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದು ಬಹಳ ಒಳ್ಳೆಯದು, ಅದಕ್ಕೆ ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಕೆಲಸವನ್ನು ಬೇಗನೆ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ, ಜೊತೆಗೆ ಕೊಳ್ಳೆಗಾಲಕ್ಕೆ ಸೇರಿದ ಗುಂಡ್ಲು ಮತ್ತು ಉಡುದರೆಹಳ್ಳ ಎಂಬ ಎರಡು ನದಿಗಳಿವೆ. ಅಲ್ಲಿ ಕೂಡ ಒಂದೊಂದು ಯೋಜನೆ ಮಾಡಬೇಕೆಂದಿದ್ದಾರೆ. ಅಲ್ಲಿ 20—22 ಸಹಸ್ರ ಎಕರೆ ಇದರಿಂದಾಗಿ ಸಾಗುವಳಿಯಾಗುವುದು. ಅದು ಸರ್ಕಾರಿ ಮಟ್ಟಕ್ಕೆ ಬಂದಿದೆ. ಅದನ್ನು ಕೂಡ ಮಂಜೂರುಮಾಡಿ ಆದಷ್ಟು ಬೇಗ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಸ್ತೆ ಮತ್ತು ಸೇತುವೆಗಳನ್ನು ಕಟ್ಟತಕ್ಕ ಕಾಮಗಾರಿಗಳನ್ನು ಸರ್ಕಾರದವರು ಬೇಗನೆ ಮಾಡಬೇಕು. ಬಜೆಟೆಡ್ ವರ್ಕ್ಸ್ ಎಂದು ಬಜೆಟಿನಲ್ಲಿ ಸೇರಿಸಿ, ಅನೇಕ ರಸ್ತೆಗಳನ್ನು ದುರಸ್ತಿ ಮಾಡತಕ್ಕ ಮತ್ತು ಸೇತುವೆ ಕಟ್ಟತಕ್ಕ ಪದ್ಧತಿ ನಮ್ಮ ಸರ್ಕಾರದಲ್ಲಿ ನಡೆದು ಬಂದಿದೆ. ಹಾಗೆ ಬಜೆಟಿನಲ್ಲಿ ಸೇರಿಸತಕ್ಕ ಕಾಲದಲ್ಲಿ ಬಂದಿರತಕ್ಕ ಎಲ್ಲಾ ಮಾನ್ಯ ಸದಸ್ಯರುಗಳ ಕ್ಷೇತ್ರಗಳನ್ನೂ ಗಮನದಲ್ಲಿ ಇಟ್ಟುಕೊಂಡು ಬಜೆಟಿನಲ್ಲಿ ಕೆಲಸಗಳನ್ನು ಸೇರಿಸುವುದನ್ನು ಬಿಟ್ಟು ಬೇರೆ ತರದ ನೀತಿಯನ್ನು ಪಾಲಿಸಬಾರದು, ಮತ್ತು ಅದರಿಂದ ಅನೇಕ ಸದಸ್ಯರಿಗೆ ಮನಸ್ಸಿಗೆ ಬಹಳ ನೋವಾಗಬಹುದು ಎಂದು ನಾನು ಹೇಳುತ್ತೇನೆ. ಮುಂದಿನ ವರ್ಷದಲ್ಲಾದರೂ ಅವರು ಹಾಗೆ ಮಾಡದೆ, ಎಲ್ಲಾ ಕ್ಷೇತ್ರದ ಸದಸ್ಯರ ಕೆಲಸಗಳನ್ನು ಗಮನದಲ್ಲಿಟ್ಟುಕೊಂಡು, ಬಜೆಟ್ ತಯಾರುಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ವಿದ್ಯುತ್ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೆ ನೀರಾವರಿ ಬಾವಿಗಳಿಗೆ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಡಲು ಸರ್ಕಾರದವರು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಮತ್ತು ನೀರಾವರಿ ಬಾವಿಗಳಿಗೆ ವಿದ್ಯುತ್ ಲೈನ್ ಹಾಕಿಕೊಡುವ ಒಂದು ನೀತಿಯನ್ನು ಒಪ್ಪಿಕೊಂಡಿದ್ದಾರೆ, ಈ ನೀರಾವರಿ ಬಾವಿಗಳಿಗೆ ಬೇಕಾಗುವ ಮೋಟಾರುಗಳನ್ನು ಆಯಾ ತಾಲ್ಲೂಕಿನ ತಹಶೀಲ್‌ದಾರರು ಮಂಜೂರುಮಾಡಿ ನಂತರ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಕಳುಹಿಸಿಕೊಡುತ್ತಾರೆ. ನಂತರ ನೀರಾವರಿ ಪಂಪ್‌ಸೆಟ್ಟುಗಳಿಗೆ ಅರ್ಜಿ ಹಾಕಿಕೊಂಡಿರುವವರು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಂದ ಪಡೆಯಬೇಕೆಂದು ಒಂದು ನೀತಿ ಇದೆ. ನನ್ನ ಅನುಭವಕ್ಕೆ ಬಂದಂತೆ ನನ್ನ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಿಂದ ನೂರಾರು ಅರ್ಜಿಗಳು ತಹಶೀಲ್‌ದಾರರ ಆಫೀಸಿನಲ್ಲಿ ಮಂಜೂರಾಗದೆ ನಿಂತಿವೆ. ಈ ಕಾರಣದಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್‌ನವರು ಸಂಬಂಧಪಟ್ಟವರಿಗೆ ನೀರಾವರಿ ಪಂಪ್‌ಸೆಟ್ಟು ಕೊಡುವುದು ನಿಧಾನವಾಗುತ್ತದೆ ಆದ್ದರಿಂದ ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ವಿದ್ಯುಚ್ಛಕ್ತಿ ಬೋರ್ಡಿನವರೊಡನೆ ಮಾನ್ಯ ಮಂತ್ರಿಗಳು ಸಮಾಲೋಚನೆ ನಡೆಸಿ ಬೇಗನೆ ಮಂಜೂರುಮಾಡಿ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ನೀರಾವರಿ ಪಂಪ್ ಸೆಟ್‌ಗಳಿಂದ ಹೆಚ್ಚು ನೀರು ಪಡೆದು ಹೆಚ್ಚು ಆಹಾರ ಬೆಳೆಯುವುದಕ್ಕೆ ಸಹಾಯಕವಾಗುತ್ತದೆಂದು ಮನವಿಮಾಡಿಕೊಂಡು ನನಗೆ ಮಾತನಾಡಲು ಇಷ್ಟು ಕಾಲವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಚಿತ್ತಾಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಲೋಕೋಪಯೋಗಿ ಶಾಖೆಯ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಮೊದಲನೆಯದಾಗಿ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮ್ ಏನಿದೆ ಅದು ಯಾವ ರೀತಿ ಆಗಬೇಕಾಗಿತ್ತೋ ಆ ರೀತಿ ಆಗಲಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಸುಮಾರು 20—25 ರಷ್ಟು ಯೋಜನೆಗಳು ಮಂಜೂರಾಗಿ ಎರಡು ವರ್ಷಗಳಾದರೂ ಇನ್ನು ಕೆಲಸ ಪೂರ್ತಿಯಾಗಿ ಆಗಿಲ್ಲ. ಈ ಕೆಲಸಗಳು ಯಾವ ವೇಗದಿಂದ ಆಗಬೇಕಾಗಿತ್ತೋ ಆ ವೇಗದಿಂದ ಆಗಿಲ್ಲವೆಂದು ಹೇಳಬಯಸುತ್ತೇನೆ. ಒಳ್ಳೆಯ ನೀರಿನ ಪೂರೈಕೆಯಿಂದ ಜನರಿಗೆ ಅನುಕೂಲವಾಗಬೇಕೆಂದು ಸರ್ಕಾರದವರು ತಿಳಿದುಕೊಂಡು 2 ಸರ್ಕಲ್‌ಗಳನ್ನು ಮಾಡಿದ್ದಾರೆ. ಒಂದು ನಾರ್ತ್ ಸರ್ಕಲ್, ಮತ್ತೊಂದು ಸೌತ್ ಸರ್ಕಲ್ ಎಂಬುದಾಗಿ ನಿರ್ಮಾಣ ಮಾಡಿದ್ದಾರೆ. ಆ ಭಾಗಗಳಿಗೆ ಸೂಪರಿಂಟೆಂಡಿಂಗ್ ಇಂಜನಿಯರನ್ನು ನೇಮಕ ಮಾಡಿದ್ದಾರೆ. ಆದರೂ ಸಹ ಯಾವ ರೀತಿಯಿಂದ ಕೆಲಸವಾಗಬೇಕಾಗಿತ್ತೋ ಆ ರೀತಿ ಆಗಿಲ್ಲ

ಎರೆಡು ಜಿಲ್ಲೆಗಳಿಗೆ ಒಬ್ಬರಂತೆ ಎಕ್ಸಿಕ್ಯೂಟಿವ್ ಇಂಜಿನಿಯರನ್ನು ಮತ್ತು ಒಬ್ಬ ಸಬ್ ಡಿವಿಜನ್ ಆಫೀಸರನ್ನು ನೇಮಕ ಮಾಡಿದ್ದಾರೆ. ಆ ಭಾಗಕ್ಕೆ ಸರಿಯಾದಂತಹ ಸೂಪರ್‌ವೈಸರ್‌ಗಳನ್ನು ಹಾಕಿಲ್ಲವೆಂದು ಕಾಣುತ್ತದೆ. ಅಲ್ಲಿಯ ಸಬ್‌ಡಿವಿಜನ್‌ಗೆ ಹಾಕಿರುವ ಸೂಪರ್‌ವೈಸರ್‌ಗಳೆಂದರೆ ಚಾರ್ಜ್ ಷೀಟ್ ಆದವರು ರಿಟೈರ್ ಆಗತಕ್ಕಂಥವರು ಮತ್ತು ಇನ್‌ಎಫಿಷಿಯಂಟ್ ಸೂಪರ್‌ವೈಸರ್‌ಗಳನ್ನು ಸಹ ಹಾಕಿದ್ದಾರೆ. ಈ ಕಾರಣಗಳಿಂದ ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಆದ್ದರಿಂದ ಕಮ್ಯೂನಿಕೇಷನ್ ಬಿಲ್ಡಿಂಗ್ಸ್ ಇಲಾಖೆಯಲ್ಲಿರುವ ಮೇಜರ್ ಇನ್‌ವೆಸ್ಟಿಗೇಷನ್ ಇಲಾಖೆಯಲ್ಲಿರುವ ಮತ್ತು ಇನ್ನಿತರ ಇಲಾಖೆಗಳಲ್ಲಿರುವ ದಕ್ಷರಾದ ಸೂಪರ್‌ವೈಸರ್‌ಗಳನ್ನು ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಕಳುಹಿಸಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಈ ವಿಚಾರದಲ್ಲಿ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಚಿತ್ತಾಪುರದಲ್ಲಿ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮನ್ನು ತೆಗೆದು ಕೊಂಡಿದ್ದಾರೆ. ನಾಲವಾಡದಲ್ಲಿ ಸುಮಾರು 15 ಸಾವಿರ ಗ್ಯಾಲನ್ ಕೆಪ್ಯಾಸಿಟಿಯುಳ್ಳ ಒಂದು ರಿಜರ್‌ವಾಯರ್ ಕಟ್ಟಬೇಕಾಗಿತ್ತು. ಅಲ್ಲಿಯ ಸೂಪರ್‌ವೈಜರ್ ತಿಳಿದೋ ಅಥವಾ ತಿಳಿಯದೆಯೋ 10 ಸಾವಿರ ಕೆಪ್ಯಾಸಿಟಿಯುಳ್ಳ ರಿಜರ್‌ವಾಯರ್ ಕಟ್ಟುವುದಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ಅದರಂತೆ ಕೆಲಸ ನಡೆಯಿತು. ಎರಡು ಮೂರು ತಿಂಗಳಾದ ಮೇಲೆ ಅಸಿಸ್ಟೆಂಟ್ ಇಂಜಿನಿಯರ್ ಅಲ್ಲಿಗೆ ಇನ್ಸ್‌ಪೆಕ್ಷನ್‌ಗೆ ಬಂದಾಗ ಈ ತಪ್ಪು ಕಂಡುಬಂತು. ಈ ನಿದರ್ಶನವನ್ನು ಕೊಟ್ಟಿದ್ದು ಏತಕ್ಕೆಂದರೆ ಯಾವ ರೀತಿಯಲ್ಲಿ ಲೋಕೋಪಯೋಗಿ ಶಾಖೆಯವರು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸುವುದಕ್ಕೆ ಇನ್ನು ಮುಂದೆ ಹೊಸ ಹೊಸ ಸಬ್‌ಡಿವಿಜನ್‌ಗಳನ್ನು ಸ್ಥಾಪನೆ ಮಾಡುವಾಗ ಅಲ್ಲಿಗೆ ದಕ್ಷರಾದ ಸೂಪರ್‌ವೈಸರ್‌ಗಳನ್ನು ಡಿವಿಜನ್ ಆಫೀಸ್‌ಗಳನ್ನು ಸ್ಥಾಪನೆ ಮಾಡುವಾಗ ದಕ್ಷರಾದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ನೇಮಕಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವುದು ಮತ್ತು ಸೇತುವೆಗಳನ್ನು ಕಟ್ಟುವುದು ಈ ಕೆಲಸಗಳು ಸಾಕಷ್ಟು ಆಗಿವೆ. ಈ ಬಾಬಿಗೆ ಸುಮಾರು 900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕಾಗಿ ಸರ್ಕಾರದವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಎಷ್ಟು ರಸ್ತೆಗಳು ಎಷ್ಟು ಸೇತುವೆಗಳು ಆಗಬೇಕಾಗಿತ್ತೋ ಅಷ್ಟು ಆಗಿಲ್ಲವೆಂದು ಹೇಳಬಯಸುತ್ತೇನೆ. ಸ್ಟೇಟ್ ಆವರೇಜ್ ಪರ್ ಸ್ಕ್ವೈರ್ ಮೈಲ್ ತೆಗೆದು ಕೊಂಡರೆ .46 ಇದೆ. ಬಿದರೆ .21 ಇದೆ. ಗುಲ್ಬರ್ಗ .18 ಇದೆ. ರಾಯಚೂರು .24 ಇದೆ ಬಳ್ಳಾರಿ .26 ಇದೆ. ಆದ್ದರಿಂದ ಈ ನಾಲ್ಕು ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ರಸ್ತೆಗಳನ್ನು, ಸೇತುವೆಗಳನ್ನು ಮಾಡುವುದು ಅಗತ್ಯವಿದೆ. ಸ್ಟೇಟ್ ಆವರೇಜ್ .46 ಇರುವುದರಿಂದ ಅದರ ಮಟ್ಟಕ್ಕೆ ಈ ನಾಲ್ಕು ಜಿಲ್ಲೆಗಳಲ್ಲಿ ರಸ್ತೆಗಳ ನಿರ್ಮಾಣ ಸೇತುವೆಗಳ ನಿರ್ಮಾಣವಾಗಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಅಸಿಸ್ಟೆಂಟ್ ಇಂಜನಿಯರ್‌ಗಳಿಗೆ ಪ್ರಮೋಷನ್ ಕೊಡುತ್ತೀರಿ. ಒಂದು ಇಲಾಖೆಯಲ್ಲಿ ಅಂದರೆ ಕಮ್ಯುನಿಕೇಷನ್ಸ್ ಬಿಲ್ಡಿಂಗ್ಸ್ ಇಲಾಖೆಯಲ್ಲಾಗಲೀ ಮೇಜರ್ ಇರಿಗೇಷನ್ ಇಲಾಖೆಯಲ್ಲಾಗಲೀ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇನ್‌ಎಫಿಷಿಯೆಂಟಾಗಿ ಕೆಲಸ ಮಾಡುತ್ತಿದ್ದರೆ ಆತನನ್ನು ಇನ್‌ವೆಸ್ಟಿಗೇಷನ್ ಇಲಾಖೆಗೆ ವರ್ಗಮಾಡಿ ಒಂದು ರೀತಿ ಶಿಕ್ಷೆ ಕೊಟ್ಟಂತೆ ಮಾಡಿ ಒಂದೆರಡು ವರ್ಷ ಅಲ್ಲಿ ಕೆಲಸ ಮಾಡಿದ ಮೇಲೆ ಆತನಿಗೆ ಪ್ರಮೋಷನ್ ಕೊಡುತ್ತೀರಿ. ನನಗನ್ನಿಸುತ್ತದೆ ಇಂತಹ ಇನ್‌ಎಫಿಷಿಯಂಟ್ ಅಸಿಸ್ಟೆಂಟ್ ಇಂಜನಿಯರ್‌ಗಳನ್ನು ಅವರಿಗೆ ದಕ್ಷತೆಯ ಅಭಾವವಿದ್ದರೆ ಇನ್‌ವೆಸ್ಟಿಗೇಷನ್ ಇಲಾಖೆಗೆ ವರ್ಗಮಾಡದೆ ಕಮ್ಯುನಿಕೇಷನ್ ಬಿಲ್ಡಿಂಗ್ಸ್ ಇಲಾಖೆಯ ಸಬ್‌ಡಿವಿಜನ್‌ಗಳಿಗೆ ವರ್ಗಮಾಡಿ ಎರಡು ಮೂರು ವರ್ಷಗಳಾದ ಮೇಲೆ ಮೇಲಿನ ಅಧಿಕಾರಿಗಳಿಂದ ರಿಪೋರ್ಟ್ ತರಿಸಿಕೊಂಡು ಪುನಃ ಇನ್‌ಎಫಿಯೆಂಟ್ ಆಗಿದ್ದರೆ ಆತನ ಮೇಲೆ ಕ್ರಮ ತೆಗೆದು ಕೊಳ್ಳಬೇಕು. ಇನ್‌ವೆಸ್ಟಿಗೇಷನ್ ಇಲಾಖೆಗೆ ಇಂತಹವರನ್ನು ಒಂದೆರಡು ವರ್ಷ ವರ್ಗಮಾಡಿ ನಂತರ ಪ್ರಮೋಷನ್ ಕೊಡುವುದು ಸಮಂಜಸವಾಗಿ ಕಾಣುವುದಿಲ್ಲ ಈ ದಿಶೆಯಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಈ ಕೆಲಸ ಸಾಕಷ್ಟು ವೇಗದಿಂದ ನಡೆದಿಲ್ಲ. ಎಷ್ಟು ತೃಪ್ತಿಕರವಾಗಿ ಕೆಲಸವಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಸಾಕಷ್ಟು ಕೆಲಸ ಆಗಬೇಕಾಗಿದೆ. ಅಪ್ಪರ್ ಕೃಷ್ಣಾ ಯೋಜನೆ ಪೂರ್ತಿಯಾದರೆ ಅದರಿಂದ ಗುಲ್ಬರ್ಗ, ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಈ ಯೋಜನೆಯಿಂದ ಆರು ಲಕ್ಷ ಎಕರೆಗೆ ನೀರು ಸಿಗುತ್ತದೆ. ಇದು 120 ಕೋಟಿ ರೂಪಾಯಿಗಳ ಖರ್ಚಿನ ಒಂದು ದೊಡ್ಡ ಯೋಜನೆಯಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಮಲಪ್ರಭಾ, ಘಟಪ್ರಭಾ ಮತ್ತು ಅಪ್ಪರ್‌ಕೃಷ್ಣಾ ಯೋಜನೆ

(ಶ್ರೀ ಎಸ್. ರುದ್ರಪ್ಪ)

ಗಳಿವೆ. ಗುಲ್ಬರ್ಗಾದಲ್ಲಿ ಇನ್ನಿತರ ಮೀಡಿಯಂ ಸೈಜಿನ ಪ್ರಾಜೆಕ್ಟ್‌ಗಳಿವೆ. ಈ ಎಲ್ಲಾ ಯೋಜನೆಗಳ ಕೆಲಸವನ್ನು ನೋಡಿಕೊಳ್ಳಲು ಒಬ್ಬ ಚೀಫ್ ಇಂಜನಿಯರ್ ಅವರನ್ನು ಇನ್‌ಚಾರ್ಜ್ ಮಾಡಿ ಆ ಭಾಗಕ್ಕೆ ಕೊಡುವುದಾದರೆ, ಕೆಲಸ ವೇಗದಿಂದ ನಡೆಯುತ್ತದೆಂದು ನನಗನ್ನಿಸುತ್ತದೆ. ಮುಂದೆ ನಾವು ಹೆಚ್ಚು ನೀರನ್ನು ಉಪಯೋಗಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಸರಕಾರದವರು ಇಲ್ಲಿಗೆ ಪ್ರತ್ಯೇಕವಾದ ಒಬ್ಬ ಚೀಫ್ ಇಂಜಿನೀಯರು ಇರುವಂತೆ ಮಾಡಿ ಒಂದು ಹೊಸ ಸರ್ಕಲನ್ನು ತೆರೆಯಬೇಕು ಮತ್ತು ಅಪ್ಪರ್ ಕೃಷ್ಣಾ ಯೋಜನೆಯಂತಹ ದೊಡ್ಡ ಪ್ರಾಜೆಕ್ಟುಗಳ ಕೆಲಸ ಮಾಡುವಾಗ ಇಲ್ಲಿಗೆ ಪ್ರತ್ಯೇಕವಾದ ಒಬ್ಬರು ಚೀಫ್ ಇಂಜನೀಯರವರು ಅಗತ್ಯವಾಗಿ ಇರಬೇಕಾಗಿದೆ. ಇದರ ಬಗ್ಗೆ ಸರಕಾರ ಸೂಕ್ತ ಗಮನ ಕೊಡಬೇಕು ಎಂದು ನನ್ನ ಸಲಹೆ.

ಮೂರನೆದಾಗಿ ರೂರಲ್ ಕಮ್ಯೂನಿಕೇಷನ್ಸ್ ಪ್ರೋಗ್ರಾಂ ಎಂದು ಸುಮಾರು 1959-60 ರಲ್ಲಿ ಆರಂಭವಾಯಿತು. ಇದರಂತೆ ಪ್ರತಿ ತಾಲ್ಲೂಕಿನಲ್ಲೂ ಸುಮಾರು 50 ಮೈಲಿಗಳಷ್ಟು ರಸ್ತೆಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ನಿರ್ಣಯ ಕೂಡ ಆಗಿತ್ತು. ಇದುವರೆಗೆ ಎಷ್ಟೋ ತಾಲ್ಲೂಕುಗಳಲ್ಲಿ ಸುಮಾರು 50 ಮೈಲಿಗಳಷ್ಟು ರೋಡುಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಸುಮಾರು 48 ತಾಲ್ಲೂಕುಗಳಲ್ಲಿ ಇನ್ನೂ 50 ಮೈಲಿಗಳಷ್ಟು ರಸ್ತೆಗಳನ್ನು ತೆಗೆದುಕೊಂಡಿಲ್ಲ. ಆದುದರಿಂದ ನಾನು ಸರಕಾರದಲ್ಲಿ ಸೂಚನೆ ಮಾಡುವುದು ಯಾವ ತಾಲ್ಲೂಕಿನಲ್ಲಿ 50 ಮೈಲಿಗಳಷ್ಟು ರಸ್ತೆಗಳನ್ನು ತೆಗೆದುಕೊಂಡಿಲ್ಲವೋ ಅಂತಹ ತಾಲ್ಲೂಕುಗಳಲ್ಲಿ 50 ಮೈಲಿಗಳಷ್ಟು ರಸ್ತೆ ತೆಗೆದುಕೊಳ್ಳುವ ಕಾರ್ಯವನ್ನು ಪೂರ್ತಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡುತ್ತೇನೆ

ಇಷ್ಟು ವಿಷಯಗಳನ್ನು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Speaker, Sir, I rise to oppose the Demands on today's agenda with certain observations.

Really it is strange and unbecoming on the part of the Government to congratulate themselves and expect compliments from the people without doing anything good to the people and without achieving better progress. Though I am hailing from the border area and though I have been longing sincerely for the merger of my area with Maharashtra State, I have never wished ill of this State. I want to condemn the nasty, faulty and the discriminating policy of this Government.

As regards irrigation, Demands Nos. 29 and 30, during the regime of six years as President of the Taluka Development Board, I had the bitter experience of the policy of this Government. The Government official used to say that Government have got ample money and that they can spend any amount for extending the irrigation facilities; but actually they did nothing; they tried to postpone irrigation works on one pretext or the other. Our Taluka Board has submitted a long list of works to be carried out but out of them hardly two or three have been taken up in my area. Out of 265 second class irrigation tanks in my taluk, hardly 40 tanks have been repaired and the rest have been left in an unrepaired condition. This shows clearly to what extent the Government are extending irrigation facilities in the border area. Old tanks are not being repaired and new tanks and bandharas are not being constructed. As per the information supplied by the Government we come to know that there are 38,000 irrigation tanks and out of them 14,000 need restoration. The area under the command of those 14,000

tanks is about 4·4 lakhs and the area under the commend of 265 tanks in my taluka which remain unsilted comes to 12,000 acres of land and the area actually brought under irrigation is only 4,000 acres. This shows the discriminating policy of this Government. As per the statement given by this Government, the percentage of irrigated land to that of cultivable land is only 6.7 as against 35 to 40 per cent in Madras and Andhra. Though there is ample scope for extending the irrigation facilities, this Government has failed to extend them throughout the State. Does it not reflect upon the incompetence and slackness and irresponsibility of this Government? So many applications for the supply of irrigation pump sets are pending in my taluka; they have not been attended to by this Government. Our Taluk Board has submitted a proposal for six lift irrigation schemes. A farce of inspecting all those schemes was made but no action has been taken so far since the last 2 1/2 years. That shows to what extent this Government is keen upon extending irrigation facilities in the border area.

As regards development of roads, Demand No. 31 for Rs. 26,7,04,000, everybody knows that roads bring about social and economic change in the rural areas and that they are essential for the efficient marketing of agricultural produce and to carry raw materials to the manufacturing centres and for effective distribution of the industrial output. But the Government have neglected roads so much that in an area of 675·9 squar miles hardly there is a road mileage of 180 in my taluka. Out of a teotal road mileage of 34,412 as mentioned by this Government in his State, the effective road mileage is 17,880 and the P. W. D. has a oad mileage of 25,046 as on 31-3-66 and the conversion of roads into State Fund roads is 11,000 miles. Out of this hardly 40 miles of road length has been taken up in my taluka last year and that too on the representation from the Taluk Board stating that a road from Kanapur to Kankumbe would be the shortest possible road to Goa. There is another road from Kanapur to Hemmadge which if taken up, would cut down the distance to Goa or Anmod by 18 miles but in spite of representations from the Taluka Board this Government is not taking up that road.

Our taluk has a heavy rainfall which ranges from 75 inches to 300 inches. All roads get muddy and as there are no culverts they become insurmountable obstacles. Even social amenities are not available for the people there for want of these culverts and good roads and I request the Government to construct these culverts and roads in a backward area like Kanapur and other malnad areas.

As regards drinking wells, out of 266 villages hardly 200 villages have wells.

As regards electrification, there is very slow progress in Khanapur Taluk. The Power Supply Undertaking which has been taken over by MSEB is not making any headway in electrification of the villages of my Taluk. All the staff working in that undertaking are working on the

(SRI B. N. SIRDESAI)

old pay scale and the MSEB pay scale has not been made applicable to them. May I say that because that staff is Marathi-speaking staff the Government is not paying attention to that staff ?

4-30 P.M.

As regards ports, there are 3 ports in North Kanara and 2 ports in South Kanara which can be developed. The Government must attend to the construction of roads leading to the ports.

They must also extend marketing facilities for the sale of fish. This would only increase the revenue to the State Exchequer and not any taxes which are sought to be levied.

Lastly, about upgrading the hospitals and S.M.P. Centres, in the malnad area of my constituency, the medical help available is very poor. Even the S.M.P. Centres are not functioning well. They do not have injections against dog biting, snake biting, etc., which are very essential. Even oxygen cylinders are not available there.

Lastly, I would request the Government to follow the teachings of Gautham Buddha and Basaveshwara for fraternity and social equality. I would also request them to follow the high ideals of Shivaji the Great because he was the founder of democracy in our country. We are looking to foreign countries for lessons in democracy forgetting that democracy originated in our own country at the hands of Chhatrapathy Shivaji. If you follow his ideals then only you will succeed in your administration, otherwise not.

With these words, I thank the Chair and take my seat.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಈ ಪಬ್ಲಿಕ್ ವರ್ಕ್ಸ್‌ಗೆ ಸಂಬಂಧಪಟ್ಟಂಥ ಎಲ್ಲಾ ಬೇಡಿಕೆಗಳನ್ನೂ ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಸರ್ಕಾರದವರಿಗೆ ಹೇಳಬೇಕೆಂದು ಅಪೇಕ್ಷೆ ಪಟ್ಟಿದ್ದೇನೆ. ಮೇಜರ್ ಇರಿಗೇಷನ್ ವಿಚಾರದಲ್ಲಿ ಎರಡು ಸಲಹೆಗಳನ್ನು ಮಾತ್ರ ಕೊಡಬೇಕೆಂದು ಇದ್ದೇನೆ. ಈಗಾಗಲೇ ತುಂಗಭದ್ರಾ ಜಲಾಶಯದಿಂದ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಲೆಫ್ಟ್ ಬ್ಯಾಂಕ್ ಕೆನಾಲ್‌ದಿಂದ ಬೇಕಾದಷ್ಟು ಜಮೀನುಗಳಿಗೆ ನೀರಾವರಿಯಾಗಿದೆ ಮತ್ತು ಅದು ಡೆವಲಪ್ ಆಗಲಾರದೆ ಇದ್ದ ಪ್ರಸಂಗದಲ್ಲಿ ನಮ್ಮ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೊನೆ ಸರ್ವೆ ನಂಬರ್‌ವರೆಗೂ ಫೀಲ್ಡ್ ಕೆನಾಲ್ ಕನ್‌ಸ್ಟ್ರಕ್ಟ್ ಮಾಡಿದ್ದರಿಂದ ಆ ಏರಿಯಾ ಬಹು ಭಾಗ ಡೆವಲಪ್ ಆಗುವುದಕ್ಕೆ ಅನುಕೂಲವಾಗಿದೆ, ಅದಕ್ಕಾಗಿ ನಾನು ಸರ್ಕಾರದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಇದ್ದೇನೆ. ಈಗ ಬಹಳ ಹಿಂದೆ ಲೋಕಲೈಸೇಷನ್ ಪದ್ಧತಿ ಮಾಡಿದ್ದು ತಮಗೆಲ್ಲಾ ಗೊತ್ತಿದೆ. ಈಗಿನ ಕಾಲಕ್ಕೆ ಅನುಸಾರವಾಗಿ ಮತ್ತು ಈಗ ಬೆಳೆಸತಕ್ಕ ಪದ್ಧತಿಗೆ ಅನುಸಾರವಾಗಿ ಆ ಪದ್ಧತಿ ಅಲ್ಲಿನ ಜನರಿಗೆ ಅಷ್ಟು ಹಿತಕರವಾಗಿಲ್ಲ ಎಂದು ಅಷ್ಟು ಮಾತ್ರ ಹೇಳುತ್ತಾ ಇದ್ದೇನೆ. ಅದಕ್ಕೆ ಕಾರಣವಾದರೂ ಇಷ್ಟೆ. ಹೊಸ ಲೋಕಲೈಸೇಷನ್ ಪದ್ಧತಿಯನ್ನು ಆ ಏರಿಯಾದಲ್ಲಿ ತರುವುದು ಅತ್ಯುತ್ತಮ ಉದಾಹರಣಾರ್ಥವಾಗಿ ಹೇಳಬೇಕಾದರೆ ಒಂದು ಡಿಸ್ಟ್ರಿಬ್ಯೂಟರಿ ಕೆಳಗೆ ಕೆಲವು ಜಮೀನುಗಳಲ್ಲಿ ಖರೀಫ್ ಲೋಕಲೈಸೇಷನ್ ಮಾಡಿರುವುದು, ಇನ್ನು ಕೆಲವು ಜಮೀನುಗಳನ್ನು ರಬೀ ಲೋಕಲೈಸೇಷನ್ ಮಾಡಿರುವುದು ಇನ್ನು ಕೆಲವು ಜಮೀನುಗಳನ್ನು ಗಾರ್ಡನ್ ಲೋಕಲೈಸೇಷನ್ ಮಾಡಿರುವುದು ಮತ್ತು ಕೆಲವು ಜಮೀನುಗಳನ್ನು ಹೆವಿ ಇರಿಗೇಷನ್ ಲೋಕಲೈಸೇಷನ್ ಎಂದು ಮಾಡಿರುವುದರಿಂದ ಅಲ್ಲಿ ಪ್ರತಿದಿವಸ ನೀರನ್ನು ತೆಗೆದುಕೊಳ್ಳತಕ್ಕ ರೈತರಿಗೆ ಸ್ವಲ್ಪ ಅನಾನುಕೂಲವಾಗುತ್ತಾ ಇದೆ. ಇದನ್ನು ತೀವ್ರ ಆಲೋಚನೆ

ಮಾಡಿ ಈ ಪದ್ಧತಿಯನ್ನು ಸುಧಾರಿಸುವ ರೀತಿಯಲ್ಲಿ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಾ ಇದ್ದೇನೆ.

ಅಯಕಟ್ಟು ರೋಡ್ಡಿನ ವಿಚಾರದಲ್ಲಿ ಹೇಳಬೇಕೆಂದರೆ ಸಿಂಧನೂರು ಮತ್ತು ಮಾನ್ವಿ ಒಳಗೆ ಬಹಳ ಪ್ರದೇಶ ಕಪ್ಪು ಜಮೀನು ಇದೆ. ಅಲ್ಲಿ ನೀರು ಹರಿವಾಗ ಯಾವ ಪರಿಸ್ಥಿತಿಯಾಗುತ್ತದೆ ಎಂಬುದು ಮಾನ್ಯ ಸದಸ್ಯರಿಗೆ ಅನೇಕರಿಗೆ ಗೊತ್ತಿದೆ, ಅದರ ಅನುಭವ ಕೂಡ ಇದೆ. ನೀರು ಹರಿದು ಹೋಗುವುದಕ್ಕೆ ಶುರುವಾದರೆ 5-6 ತಿಂಗಳು ಭೂಮಿ ಒಣಗುವವರೆಗೂ ಒಂದು ಬಂಡಿ ಆಗಲಿ ಹೋಗುವುದಕ್ಕೆ ಸಾಧ್ಯವಿಲ್ಲ, ಮನುಷ್ಯರು ಓಡಾಡಲಿಕ್ಕೆ ಸಾಧ್ಯವಿಲ್ಲ. ಈ ಅಯಕಟ್ಟಿನ ರಸ್ತೆ ವಿಚಾರದಲ್ಲಿ ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಇದರ ವಿಚಾರದಲ್ಲಿ ಲಕ್ಷ್ಯ ಕೊಡಬೇಕೆಂದು ಮತ್ತೊಮ್ಮೆ ಈ ಸಂದರ್ಭ ದಲ್ಲಿ ಹೇಳುತ್ತಾ ಇದ್ದೇನೆ. ಇದನ್ನು ಮಾಡದೇ ಹೋದರೆ ಆ ಪ್ರದೇಶದಲ್ಲಿ ಬೆಳೆಯತಕ್ಕ ಕಾಳನ್ನು ಹೇಗೆ ಸಾಗಿಸಬೇಕು, ಊರಿಂದ ಊರಿಗೆ ಹೇಗೆ ತಿರುಗಾಡಬೇಕು ಎಂಬುದು ಒಂದು ದೊಡ್ಡ ಪ್ರಶ್ನೆ ಯಾಗಿದೆ. ರೈತರು ತಾವು ಬೆಳೆದ ಮಾಲನ್ನು ಬೇರೆ ಕಡೆಗಳಿಗೆ ಕಳುಹಿಸುವುದಕ್ಕೆ ತುಂಬಾ ತೊಂದರೆ ಯಾಗುತ್ತಾ ಇದೆ. ಈಗಾಗಲೇ ದುಡ್ಡು ಕೊಟ್ಟಿದ್ದೀರಿ ಇನ್ನೂ ಹೆಚ್ಚು ಹೆಚ್ಚಾಗಿ ಕೊಟ್ಟು ಇದಕ್ಕೆ ಗಮನ ಕೊಡಬೇಕು. ನಾವು ಈಗಾಗಲೇ ಪ್ರಪೋಸಲ್ಸ್ ಕಳುಹಿಸಿದ್ದೇವೆ, ಯಾವ ಪ್ರಾಮುಖ್ಯತೆ ಉಳ್ಳ ರಸ್ತೆ ಇದೆ ಎಂಬುದನ್ನು ತಾಲ್ಲೂಕು ಬೋರ್ಡಿನಲ್ಲಿ ತಿಳಿಸಿದ್ದೇವೆ. ಅದಕ್ಕೆ ಹೆಚ್ಚು ಗಮನ ಕೊಟ್ಟು ಅಯಕಟ್ಟು ರಸ್ತೆಗಳಿಗೆ ಹೆಚ್ಚು ಹೆಚ್ಚು ಹಣ ಕೊಡಬೇಕೆಂದು ಮಾನ್ಯ ಮಂತ್ರಿವರ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಈಗ ನೀರಾವರಿಗೆ ನೀರನ್ನು ಕೊಟ್ಟಿದ್ದೀರಿ, ಬಹಳ ಜನರು ತಮ್ಮ ಜಮೀನನ್ನು ಅಭಿವೃದ್ಧಿ ಮಾಡಿದ್ದಾರೆ, ನೀರನ್ನು ತೆಗೆದುಕೊಳ್ಳುತ್ತ ಇದ್ದಾರೆ, ಸಾಧಾರಣವಾಗಿ ಆ ಏರಿಯಾ ಡೆವಲಪ್ ಆಗಿ ಎಲ್ಲರೂ ನೀರನ್ನು ತೆಗೆದುಕೊಳ್ಳುವುದಕ್ಕೆ ತಯಾರಾದಾಗ ಅಲ್ಲಿ ಯಾವ ಡಿಸ್ಟ್ರಿಬ್ಯೂಟರೀಸ್ ಬರುತ್ತವೆ ಅದರಿಂದ ನನಗೆ ನೀರು ಬರಲಿಲ್ಲ, ಅವರಿಗೆ ಬರಲಿಲ್ಲ ಅಂತ ಹೇಳಿ ತಕರಾರು ಗಳು ಬರುವುದು ಸಹಜ. ಈ ವಿಚಾರದಲ್ಲಿ ಅದನ್ನು ಈಗಲೇ ಗಮನದಲ್ಲಿಟ್ಟುಕೊಂಡು ಆಯಾಯ ಡಿಸ್ಟ್ರಿಬ್ಯೂಟರಿಗೆ ಸಂಬಂಧಪಟ್ಟಂತೆ ಆಯಾಯ ಊರುಗಳಲ್ಲಿ ಲೋಕಲ್ ಆಗಿ ರೈತರ ಒಂದು ಇರಿಗೇಷನ್ ಕಮಿಟಿ ಅಂತ ಮಾಡಿಕೊಂಡು ಅದರ ಮೂಲಕ ಅಲ್ಲಿ ಸೂಪರ್‌ವೈಸರ್ ಮತ್ತು ಅಲ್ಲಿರತಕ್ಕ ನೀರುಗಂಟಿ ಅಂತ ಯಾರು ಇರುತ್ತಾರೆ ಅವರನ್ನು ಇಟ್ಟುಕೊಂಡು ತಿಂಗಳಿಗೆ ಒಂದು ಮೀಟಿಂಗ್ ಮಾಡಿ ನಮ್ಮ ನಮ್ಮೊಳಗೆ ಸರಿಪಡಿಸಿಕೊಳ್ಳುವಂತಹ ಒಂದು ಏರ್ಪಾಡನ್ನು ಮಾಡಬೇಕು. ಮತ್ತು ಅದನ್ನು ಅಲ್ಲಿರತಕ್ಕ ಎಕ್ಸಿಕ್ಯೂಟೀವ್ ಇಂಜನಿಯರು ಮತ್ತು ಅಸಿಸ್ಟೆಂಟ್ ಇಂಜನಿಯರುಗಳು ತಿಳಿಸು ವಂತಹ ಒಂದು ವ್ಯವಸ್ಥೆಯನ್ನು ಮಾಡುವುದು ಅತ್ಯುತ್ತಮ. ಈ ತರಹ ಇರಿಗೇಷನ್ ಕಮಿಟಿಯನ್ನು ಯಾವ ಪ್ರದೇಶದಲ್ಲಿ ನೀರು ಸರಬರಾಯಿ ಆಗುತ್ತದೆ ಆ ಪ್ರದೇಶದ ಪಂಚಾಯ್ತಿಗಳಲ್ಲಿ ಮಾಡುವುದಕ್ಕೆ ಏರ್ಪಾಡು ಮಾಡಿದರೆ ಮುಂದೆ ತೊಂದರೆ ಅಷ್ಟಾಗಿ ಆಗುವುದಿಲ್ಲ ಮತ್ತು ಇರತಕ್ಕ ತೊಂದರೆಗಳನ್ನೂ ಕೂಡ ಪರಿಹರಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಮೇನ್ ಕೆನಾಲ್‌ನಲ್ಲಿ ಕೆಲವು ಕಡೆ ತೆಗೆದಿರುವ ಕಡೆಯಲ್ಲಿ ನೀರಿನ ತೇವ ಬಹಳ ಜಾಸ್ತಿಯಾಗಿ, ಕೆಲವು ಪ್ರಸಂಗಗಳಲ್ಲಂತೂ ಬಹಳ ತೊಂದರೆಯಾಗುತ್ತದೆ. ಅಲ್ಲಿ ಮನೆಗಳೂ ಕೂಡ ಕೆಲವು ಬಿದ್ದಂಥ ನಿದರ್ಶನ ಇದೆ, ಅಂತಹ ಜನರಿಗೆ ಇವತ್ತಿನ ದಿವಸ ಯಾವ ಪರಿಹಾರವನ್ನೂ ಕೂಡ ಕೊಡದೇ ಇರು ವುದು ಬಹಳ ಚಿಂತಾಜನಕವಾದ ವಿಷಯ. ಏಕೆಂದರೆ ಮೇನ್ ಕೆನಾಲ್ ಹೋಗತಕ್ಕ ಕಾಲದಲ್ಲಿ ಕೆಳಗಡೆ ಇರತಕ್ಕ ಗ್ರಾಮಗಳಿಗೆ ತುಂಬಾ ಅನಾನುಕೂಲ ಎಂಬುದನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ಸರಿಯಾದ ಪರಿಹಾರವನ್ನು ಕೊಟ್ಟು ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮತ್ತು ಗ್ರಾಮಗಳನ್ನು ಬೇರೆ ಕಡೆಗಳಿಗೆ ಬದಲಾಯಿಸಿಕೊಳ್ಳುವುದಕ್ಕೆ ಮೊದಲನೆಯ ಪ್ರಾಶಸ್ತ್ಯವನ್ನು ಕೊಡಬೇಕು. ರೀಹ್ಯಾಬಿಲಿಟೇಷನ್ ಪ್ರೋಗ್ರಾಂ ಪ್ರಕಾರ ಅದನ್ನು ಟ್ರೀಟ್ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತಾ ಇದ್ದೇನೆ. ಇನ್ನು ಲೋಕಲೈಸೇಷನ್ ಮಾಡುವ ಕಾಲಕ್ಕೆ ಕೆಲವು ಸರ್ವೆ ನಂಬರ್‌ಗೆ ನೀರು ಬಂದಾಗ್ಯೂ ಕೂಡ ಇನ್ನು ಕೆಲವು ಸರ್ವೆ ನಂಬರ್‌ಗಳಿಗೆ ಬಿಟ್ಟು ಹೋಗತಕ್ಕ ಪರಿಸ್ಥಿತಿ ಇದೆ, ಅದನ್ನು ತಮ್ಮ ಗಮನಕ್ಕೆ ತಂದರೆ ಅದಕ್ಕೆ ನೀರು ಕೊಡುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ನೀರು ಹೋಗಲಾರದ ಸರ್ವೇ ನಂಬರ್‌ಗೂ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಾ ಇದ್ದೇನೆ.

ಇನ್ನು ಎಲೆಕ್ಟ್ರಿಸಿಟಿ ವಿಚಾರದಲ್ಲಿ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾ ಗಿದೆ. ಏಕೆಂದರೆ ಈಗ ಬೇಕಾದಷ್ಟು ಜನ ಪಂಪ್‌ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ; ಮತ್ತು ನೀರು ಕೊಡುತ್ತಾ ಇದ್ದೀರಿ. ಆದರೆ ಅಲ್ಲಿ ತಾವು ಯಾವ ಲೈನ್‌ಮನ್‌ಗಳನ್ನು ಹಾಕಿದ್ದೀರಿ ಅವರು ಎಫಿಷೆಂಟ್ ಇಲ್ಲ, ಫ್ಯೂಸ್ ಹೋದರೂ ಕೂಡ ಅವರು ಹಾಕುವಂತಹ ಸ್ಥಿತಿಯಲ್ಲಿ ಇಲ್ಲ ಎಂದು ಹೇಳ ಬೇಕಾಗಿದೆ. ಅಲ್ಲಿಗೆ ಬಂದಂತಹ ಸೂಪರ್‌ವೈಸರುಗಳಾಗಲಿ, ಅಸಿಸ್ಟೆಂಟ್ ಇಂಜನಿಯರುಗಳಾಗಲಿ ಕೇವಲ ಮೀಟರ್ ರೀಡಿಂಗ್ ತೆಗೆದುಕೊಳ್ಳುತ್ತಾರೆಯೇ ಹೊರತು ಟ್ರಾನ್ಸ್‌ಫಾರ್ಮರ್ಸನ್ನು ಒಬ್ಬರು

(ಶ್ರೀಮತಿ ಬಸವರಾಜೇಶ್ವರಿ)

ಚೆಕ್ ಮಾಡುವುದಿಲ್ಲ. ಇದು ಅತಿ ಮುಖ್ಯವಾದ ವಿಚಾರ. ಪಂಪ್‌ಸೆಟ್ ಇಟ್ಟುಕೊಂಡು ನೀರು ಕಟ್ಟಬೇಕು ಅಂತ ಹೇಳಿ ಅನೇಕ ಏರ್ಪಾಡುಗಳನ್ನು ಮಾಡಿಕೊಂಡಿರುತ್ತಾನೆ. ಅಂತಹ ದಿವಸ ಹತ್ತು ಬಾರಿ ಬ್ರೇಕ್‌ಡೌನ್ ಆದರೆ ಅವನ ಕೂಲಿ ಏನಾಗಬೇಕು ? ಯಾವ ರೀತಿ ನೀರನ್ನು ಹಾಯಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡಬೇಕು. ಅಲ್ಲಿಗೆ ಹೋಗತಕ್ಕ ಸೂಪರ್‌ವೈಸರ್‌ಗಳ ಕೆಲಸ ಮೀಟರ್ ರೀಡಿಂಗ್ ಒಂದೆ ಅಲ್ಲ, ಟ್ರಾನ್ಸ್‌ಫಾರ್ಮರ್‌ಸನ್ನು ಚೆಕ್ ಮಾಡಬೇಕಾದ್ದು ಬಹಳ ಮುಖ್ಯವಾದ ವಿಷಯ ಎಂದು ಹೇಳಿ ಅವರಿಗೆ ಆದೇಶ ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ವಿಚಾರದಲ್ಲಿ ಹೇಳಬೇಕಾದರೆ ನಮ್ಮ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಎರಡು ಪಂಪ್‌ಸೆಟ್ ಲೈನ್‌ಗಳಿಗಾಗಿ ಎಂ. ಎಸ್. ಇ. ಬಿ.ಯವರನ್ನು ಕೇಳಿಕೊಂಡಿದ್ದೇವೆ. ಲಿಂಗಸೂಗೂರು ತಾಲ್ಲೂಕಿನಲ್ಲಿ ಗುಡಿಹಾಳು ಮಟ್ಟಿಮನಿ ಇಂದ ಮಸ್ಕಿವರೆಗೂ ಪಂಪ್‌ಸೆಟ್ ಲೈನ್ ಅತಿ ಅಗತ್ಯವಾಗಿ ಆಗಬೇಕಾಗಿದೆ. ಹತ್ತಾರು ಬಾವಿಗಳನ್ನು ತೋಡಿಸಿದ್ದಾರೆ. ಪಂಪ್‌ಸೆಟ್ ಇಟ್ಟುಕೊಳ್ಳಲು ಏನು ಕೆಲಸ ಮಾಡಬೇಕೋ ಆ ಕೆಲಸವನ್ನೆಲ್ಲಾ ಮಾಡಿದ್ದಾರೆ. ಡೆಪಾಸಿಟ್ ಕೂಡ ಕಟ್ಟಿದ್ದಾರೆ ಅದನ್ನು ಪ್ರಯಾರಿಟಿ ಅಂತ ತಿಳಿದುಕೊಂಡು ಅಲ್ಲಿಗೆ ಅನುಕೂಲ ಮಾಡಿಕೊಡಬೇಕು, ಆ ಜನರಿಗೆ ಬೇರೆ ಯಾವ ತರಹದ ನೀರಿನ ಅನುಕೂಲವೂ ಇಲ್ಲ, ಕೇವಲ ಕೆಂಪು ಜಮೀನು ಇರತಕ್ಕ ಬಡ ಜನರು ಅವರು. ಪಂಪ್ ಸೆಟ್ಟನ್ನು ಹಾಕಿಕೊಳ್ಳಲು ಲೈನ್ ಎಳೆದರೆ ಅವರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ.

ಇನ್ನು ಈ ಕಾರ್ಡುಗಳನ್ನು ಕೊಡತಕ್ಕ ವಿಚಾರಕ್ಕೆ ಬಂದರೆ ಕೆಲವು ಕಡೆ ತಿಂಗಳುಗಳ ಗಟ್ಟಲೆ ಕಾರ್ಡನ್ನೇ ಕೊಡುವುದಿಲ್ಲ. ಇನ್ನು ಕೆಲವು ಕಡೆ ತಿಂಗಳಿಗೆ ಸರಿಯಾಗಿ ಕಾರ್ಡುಗಳನ್ನು ಕಳುಹಿಸುತ್ತಾರೆ. ಬೆಂಗಳೂರಿನಲ್ಲಿ 3–4 ತಿಂಗಳಾದರೂ ಅವರು ಕಾರ್ಡನ್ನೇ ಕಳುಹಿಸುವುದಿಲ್ಲ. ನಮ್ಮ ಕಡೆ 2ನೇ ತಾರೀಖಿನೊಳಗಾಗಿ ದುಡ್ಡನ್ನು ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇಲ್ಲಿ ಬೆಂಗಳೂರಿನಲ್ಲಿ 2–3 ತಿಂಗಳಿಗೊಂದಾವರ್ತಿ ಕಾರ್ಡನ್ನು ಕಳುಹಿಸಿ, ಅದರ ಜೊತೆಯಲ್ಲೇ ಸಕಾಲಕ್ಕೆ ಕಟ್ಟದಿದ್ದುದರಿಂದ ಪೆನಾಲ್ಟಿಯನ್ನೂ ಸಹ ಸೇರಿಸಿ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಹೀಗೆ ಇದು ಒಂದೊಂದು ಕಡೆ ಒಂದೊಂದು ರೀತಿಯಾಗಿ ನಡೆಯುತ್ತಿದೆ. ಇದು ಸರಿಯಾದುದಲ್ಲ. ಎಲ್ಲಾ ಕಡೆಯಲ್ಲೂ ಒಂದು ಸಿಸ್ಟಂನ್ನು ಜಾರಿಗೆ ತರುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ರೂರಲ್ ಕಮ್ಯೂನಿಕೇಷನ್ ವಿಚಾರಕ್ಕೆ ಬಂದರೆ—ನಮ್ಮಲ್ಲಿ 30–40 ಮೈಲಿಗಳ ರಸ್ತೆಯನ್ನು ಸ್ಟೇಟ್‌ಫಂಡ್ ರೋಡನ್ನಾಗಿ ಮಾಡುವುದಕ್ಕೆ ಹಣವನ್ನು ತಾವು ಕೊಟ್ಟಿರುವುದು ಸಾಲದು. ಈ ಹಣ ಒಂದು ಮರಂ ಹಾಕಿಸುವುದಕ್ಕಾಗಲೀ ಅಥವಾ ಕಲ್ವರ್ಟುಗಳನ್ನು ಕಟ್ಟಿಸುವುದಕ್ಕಾಗಲಿ ಸಾಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಇದರ ಕಡೆಗೆ ಹೆಚ್ಚಿನ ನಿಗಾ ಕೊಟ್ಟು, ಹೆಚ್ಚು ಹಣವನ್ನು ಒದಗಿಸಿ ಆ ರಸ್ತೆಗಳನ್ನು ಜನೋಪಯುಕ್ತ ರಸ್ತೆಗಳನ್ನಾಗಿ ಮಾಡಲು ಅದಕ್ಕೆ ಬೇಕಾಗುವ ಹಣವನ್ನು ಲಂಪ್‌ಸಂ ಗ್ರ್ಯಾಂಟಿನಲ್ಲಿ ಉಪಯೋಗಿಸುವುದಕ್ಕೆ ಎಗ್ಜಿಕ್ಯೂಟೀವ್ ಇಂಜಿನಿಯರ ಅವರಿಗೆ ಸೂಕ್ತ ತಿಳುವಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಗೆಸ್ಟ್ ಹೌಸುಗಳ ವಿಚಾರಕ್ಕೆ ಬಂದರೆ—ಮಾನ್ವಿಯಲ್ಲಿ ಒಂದು ಗೆಸ್ಟ್ ಹೌಸ್ ಇದೆ ಅಲ್ಲಿಗೆ ಪರದೇಶಗಳಿಂದ ಸಹಿತ ನೂರಾರು ಜನರು ಬಂದು ಹೋಗುತ್ತಿದ್ದಾರೆ. ಅಲ್ಲದೆ ಸರ್ಕಾರಿ ಅಧಿಕಾರಿಗಳೂ ಪದೇ ಪದೇ ಅಲ್ಲಿಗೆ ಬರುತ್ತಿದ್ದಾರೆ. ನಾವು ವರ್ಷದಲ್ಲಿ ಅನೇಕಾವರ್ತಿ ಅಲ್ಲಿ ಮೀಟಿಂಗ್‌ಗಳನ್ನು ಬೇರೆ ಕರೆಯುತ್ತಿರುತ್ತೇವೆ. ಅಲ್ಲಿ ಕೇವಲ 2 ರೂಮುಗಳು ಮಾತ್ರ ಇರುತ್ತವೆ. ಅವು ಸಾಲದು. ಹೀಗೆ ಧಡೆಸೂಗೂರಿನಲ್ಲಿ ಒಂದು ಗೆಸ್ಟ್ ಹೌಸ್ ಇದೆ. ಅಲ್ಲಿ ಒಂದು ಅಗ್ರಿಕಲ್ಚರಲ್ ಸ್ಕೂಲ್ ಮತ್ತು ಫಾರಂ ಸಹಿತ ಇದೆ. ಆ ರಸ್ತೆಯಲ್ಲಿ ಮಧ್ಯೆ ಇನ್ನಾವ ಗೆಸ್ಟ್ ಹೌಸುಗಳೂ ಇರುವುದಿಲ್ಲ. ಆದುದರಿಂದ ಈ ಎರಡು ಗೆಸ್ಟ್ ಹೌಸುಗಳನ್ನೂ ಉತ್ತಮಗೊಳಿಸಿ ಇವನ್ನು ಇನ್ನೂ ದೊಡ್ಡದಾಗಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಫ್ಲಡ್ ಅಡಚಣೆಯನ್ನು ತಪ್ಪಿಸತಕ್ಕ ವಿಚಾರಕ್ಕೆ ಬಂದರೆ—ನಮ್ಮಲ್ಲಿ ಅನೇಕ ಹಳ್ಳಗಳಿರುತ್ತವೆ. ಅವು ವಿಶೇಷವಾಗಿ ಕೊರೆದು ಅನೇಕ ಹಳ್ಳಿಗಳು ಜೀರ್ಣವಾಗತಕ್ಕ ಸ್ಥಿತಿಗೆ ಬಂದಿವೆ. ನಮ್ಮಲ್ಲಿ ಮಸ್ಕಿ ಎಂಬುದು ದೊಡ್ಡ ಗ್ರಾಮ. ಅದು ಹಳ್ಳದ ಕೊರೆತಕ್ಕೆ ಸಿಕ್ಕಿ ಬಹಳ ತೊಂದರೆಗೊಳಗಾಗಿದೆ. ಇದಕ್ಕೆಲ್ಲಾ ಫ್ಲಡ್ ಪ್ರೊಟೆಕ್ಷನ್ ಬೋರ್ಡಿನವರು ಹಣವನ್ನು ಒದಗಿಸಬೇಕಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಎಲ್ಲೆಲ್ಲಿ ಇಂಥಾ ಪ್ರಾಬ್ಲೆಮ್‌ಗಳು ಬಂದಿವೆಯೋ ಅಲ್ಲಿಗೆಲ್ಲಾ ಈ ಬೋರ್ಡಿನಿಂದ ಅನುಕೂಲವನ್ನು ಒದಗಿಸಿ ಕೊಡಬೇಕು. ಆದರೆ ಒಟ್ಟಿನಲ್ಲಿ ಗುಡಿಹಾಳು ಮತ್ತು ಮಸ್ಕಿ ಗ್ರಾಮಗಳಿಗೆ ಮೊದಲು ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೈನರ್ ಟ್ಯಾಂಕುಗಳ ವಿಚಾರಕ್ಕೆ ಬಂದರೆ—ಮಲಚ ಮತ್ತು ಹೂವಿನಬಾವಿ ಈ ಎರಡು ಕಡೆಗಳಲ್ಲಿ ಎರಡು ಪ್ರಾಜೆಕ್ಟುಗಳು ಆಗಬೇಕಾಗಿದೆ. ಅಲ್ಲಿಯ ಜನರಿಗೆ ಯಾವ ನೀರಾವರಿ ಸೌಕರ್ಯಗಳೂ ಇರುವುದಿಲ್ಲ. ಆದುದರಿಂದ ಇಲ್ಲಿಗೆ ಎರಡು ನೀರಾವರಿ ಯೋಜನೆಗಳನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಅಲ್ಲಿ ಮಸ್ಕಿನಾಲ ಎಂಬ ಒಂದು ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿ ಇಲ್ಲಿಗೆ 30-40 ವರ್ಷಗಳ ಮೇಲಾಯಿತು. ಆದರೆ ಹಿಂದಿದ್ದ ಸರ್ಕಾರ ಅರ್ಧಮರ್ಧ ಕೆಲಸವನ್ನು ಮಾಡಿ ಅದು ಅಲ್ಲಿಗೇ ನಿಂತುಹೋಗಿದೆ. ಆ ಪ್ರಾಜೆಕ್ಟಿನ ಕೆಳಗೆ ಸುಮಾರು 6500 ಎಕರೆ ತರಿಸಾಗುವಳಿಗೆ ಬರುತ್ತದೆ. ಇಷ್ಟು ಭೂಮಿ ಅಲ್ಲಿ ನೀರಾವರಿ ಆಗುತ್ತದೆ ಎಂಬ ಒಂದು ವರದಿ ಈ ದಿವಸ ಸರ್ಕಾರದವರ ಮುಂದಿದೆ. ಆ ಪ್ರಾಜೆಕ್ಟನ್ನು ಕೂಡಲೆ ಕೈಗೊಂಡು ಆ ಪ್ರದೇಶದ ಜನರಿಗೆ ಅನುಕೂಲಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಪ್ರಾಜೆಕ್ಟಿಗೆ ಬಹಳ ಕಡಮೆ ಹಣ ಖರ್ಚಾಗುತ್ತದೆ. ಅದು ಮೀಡಿಯಂ ಪ್ರಾಜೆಕ್ಟ್. ಲಿಂಗಸೂಗೂರು ತಾಲ್ಲೂಕ್ ಯಾವಾಗಲೂ ಬರಗಾಲಪೀಡಿತ ಪ್ರದೇಶ. ಅವರಿಗೆ ಸರ್ಕಾರದವರು ಈ ಒಂದು ಪ್ರಾಜೆಕ್ಟನ್ನು ಮಾಡಿಸಿಕೊಟ್ಟರೆ ಅವರೂ ಕೂಡ ಬತ್ತ ಬೆಳೆಯುವ ಪ್ರದೇಶದ ಜನರಂತೆ ಸಂತೋಷದಿಂದ ಇರುವುದಕ್ಕೆ ಅವಕಾಶ ವಾಗುತ್ತದೆ. ಈಗಾಗಲೇ ಈ ಪ್ರಾಜೆಕ್ಟನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕೂಡಿಸಿ ಇದಕ್ಕೆ ಒಂದು ಲಕ್ಷ ರೂಪಾಯಿಗಳ ಒಂದು ಟೋಕನ್ನು ಗ್ರ್ಯಾಂಟನ್ನು ಒದಗಿಸಿದ್ದಾರೆ. ಆದುದರಿಂದ ಈ ಪ್ರಾಜೆಕ್ಟನ್ನು ಸರ್ಕಾರದವರು ಕಡ್ಡಾಯವಾಗಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಗಳೇ, ನಾನು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಅಧ್ಯಕ್ಷರ ಮೂಲಕ ಸರ್ಕಾರದವರಿಗೆ ಮನವಿ ಮಾಡಿಕೊಳ್ಳಬೇಕೆಂದಿದ್ದೇನೆ.

ನಮ್ಮ ಸರ್ಕಾರದವರು ಕಳೆದ 15 ವರ್ಷಗಳಲ್ಲಿ ಲಕ್ಷೋಪಲಕ್ಷ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯ ನೆಪದಲ್ಲಿ ಖರ್ಚುಮಾಡಿದ್ದಾರೆ. ಇಷ್ಟೆಲ್ಲಾ ಹಣವನ್ನು ಇವರು ಖರ್ಚು ಮಾಡಿದ್ದರೂ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಲಕ್ಷ ರೂಪಾಯಿನ ನೀರಾವರಿ ಪ್ರಾಜೆಕ್ಟುಗಳನ್ನೇನಾದರೂ ಮಾಡಿದ್ದಾರೆಯೋ ಎಂದರೆ ಅದೂ ಇಲ್ಲ. ಇಷ್ಟು ಹಣವನ್ನು ಖರ್ಚುಮಾಡಿದ್ದರೂ ರಾಜ್ಯದಲ್ಲಿ ಮುಕ್ಕಾಲು ಮೂರುವೀಸೆ ಪಾಲು ಜನರಿಗೆ ಯಾವ ಒಂದು ನೀರಾವರಿ ಸೌಕರ್ಯಗಳೂ ಇರುವುದಿಲ್ಲ. ನಮ್ಮ ರಾಜ್ಯದಲ್ಲಿ ಹಾಗೂ ನಮ್ಮ ದೇಶದಲ್ಲಿ ಮುಕ್ಕಾಲುಮೂರುವೀಸೆ ಪಾಲು ಜನರೆಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕವರಾಗಿದ್ದಾರೆ. ಹಾಗೂ ಅವರ ಮುಖ್ಯವಾಗಿ ಅವಲಂಬಿಸಿರುವ ಕಸುಬು ವ್ಯವಸಾಯ. ಈ ವ್ಯವಸಾಯ ಒಂದರಿಂದಲೇ ನಮ್ಮ ದೇಶದ ಅಭ್ಯುದಯವಾಗಬೇಕು. ಇಂಥಾ ಒಂದು ಪ್ರಾಮುಖ್ಯವಾದ ವಿಚಾರದಲ್ಲಿ ಸರ್ಕಾರದವರು ಅಲಕ್ಷ್ಯ ಮಾಡಿದ್ದಾರೆ; ಅಶ್ರದ್ಧೆ ಮಾಡಿದ್ದಾರೆ. ಆಡಳಿತ ಪಕ್ಷದವರು ತಮ್ಮ ತಮ್ಮಲ್ಲೇ ಪಾರ್ಟಿ ಪಂಗಡಗಳನ್ನು ಮಾಡಿಕೊಂಡು ಆಡಳಿತವನ್ನು ಹದಗಡಿಸಿ ಲಕ್ಷೋಪಲಕ್ಷ ರೂಪಾಯಿಗಳನ್ನು ದುರ್ವ್ಯಯ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ರಾಜ್ಯವನ್ನು ಉನ್ನತ ಸ್ಥಾನಕ್ಕೇರಿಸಬೇಕು, ಪ್ರಜೆಗಳ ಅಭ್ಯುದಯವನ್ನು ಸಾಧಿಸಬೇಕು, ರಾಜ್ಯದಲ್ಲಿ ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕು ಎಂದು ಹೀಗೆಲ್ಲಾ ಹೇಳಿಕೊಳ್ಳುತ್ತಾ ಕಳೆದ 10-15 ವರ್ಷಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಮಾಡಿ ಇವರು ಈಗಲೂ ಭಿಕ್ಷಾಪಾತ್ರೆಯನ್ನು ಹಿಡಿದು ಆಹಾರ ಧಾನ್ಯಗಳಿಗಾಗಿ ದೇಶ ದೇಶಗಳನ್ನು ಅಲೆಯುತ್ತಿರುವುದು ತೀರಾ ನಾಚಿಗೆಗೇಡಾದ ಬದುಕು; ಹಾಗೂ ಬಹಳ ಅವಹೇಳನಕರವಾದದ್ದು. ನಮ್ಮ ಮೈಸೂರು ರಾಜ್ಯವಾದರೋ ಫಲವತ್ತಾದ ಭೂಮಿ ಹಾಗೂ ವಿಶೇಷವಾದ ನೀರಿರತಕ್ಕ ಅನೇಕ ನದಿಗಳು ಹರಿಯುತ್ತಿರುವಂಥ ದೇಶ. ಆದರೆ ಇಲ್ಲಿರತಕ್ಕ ವ್ಯವಸಾಯಗಾರರಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಲ್ಲ. ಇದರಿಂದ ರೈತರು ಕಂಗೆಟ್ಟು ಹೋಗಿದ್ದಾರೆ. ಆಮರಣಾಂತರ ಉಪವಾಸ ಮಾಡತಕ್ಕ ಕಾಲ ಸನ್ನಿಹಿತವಾಗುತ್ತಿದೆ. ಸರ್ಕಾರದವರು ಇದಕ್ಕೆ ಅವಕಾಶ ಕೊಡ ಬಾರದು, ಎಚ್ಚರವಾಗಬೇಕು ಎಂದು ಹೇಳುತ್ತೇನೆ. ದೇಶದ ಅಭ್ಯುದಯಕ್ಕಾಗಿ ಒಂದು ರಚನಾತ್ಮಕ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡದೆ ತಮ್ಮ ತಮ್ಮಲ್ಲೇ ಪಾರ್ಟಿ ಪಂಗಡಗಳನ್ನು ಮಾಡಿಕೊಂಡು ಒಬ್ಬರಮೇಲೊಬ್ಬರು ವೈಷಮ್ಯಗಳನ್ನು ಸಾಧಿಸುತ್ತಾ ದೇಶದ ಹಿತವನ್ನು ಬದಿಗೊತ್ತಿದ್ದಾರೆ, ಇದು ಖಂಡನೀಯವಾದದ್ದು. ಈಗಲಾದರೂ ಇವರು ತಮ್ಮ ತಮ್ಮ ಪಾರ್ಟಿ ಪಂಗಡಗಳ ವೈಷಮ್ಯವನ್ನು ಬದಿಗೊತ್ತಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತರಿಗೆ ಅತ್ಯಗತ್ಯ ವಾಗಿ ಬೇಕಾಗಿರತಕ್ಕ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡ ಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ದೊಡ್ಡಬೋರೇಗೌಡ)

ಈ ದಿವಸ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗೂ ಬಂಡಾಟ ಬಂದಿದೆ. ಅಲ್ಲಿ ಕುಡಿಯುವ ನೀರಿನ ಬಾವಿಗಳು ಇರುವುದಿಲ್ಲ, ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಹೀಗೆ ರಾಜ್ಯದಲ್ಲಿ ಅನೇಕ ಕಡೆ ಜನರಿಗೆ ಕುಡಿಯುವ ನೀರೂ ಸಹಾ ಇಲ್ಲದಿರುವಾಗ ಸರ್ಕಾರದವರು ಈ ಪಂಚವಾರ್ಷಿಕ ಯೋಜನೆಗಳನ್ನಾದರೂ ಏತಕ್ಕೆ ಕೈಗೊಂಡರೋ ನನಗೆ ತಿಳಿಯುತ್ತಿಲ್ಲ. ಸರ್ಕಾರದವರು ಈಗಲಾದರೂ ಎಚ್ಚೆತ್ತುಕೊಂಡು ಜನರ ಆಶೆ ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ವರ್ಷಂ ಪ್ರತಿ ಬಡ್ಜೆಟ್ಟಿನಲ್ಲಿ ಒದಗಿಸತಕ್ಕ ಹಣವನ್ನು ಆಡಳಿತವರ್ಗ ಯಾವ ರೀತಿ ಖರ್ಚುಮಾಡಬೇಕು ಎಂಬುದನ್ನು ನಿಗದಿ ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಕಮಾಡ ಲಾಗಿದೆ. ಆದರೆ ಅವರು ಕೊಡತಕ್ಕ ಸಲಹೆಗಳನ್ನು ಸರ್ಕಾರದವರು ಮನ್ನಣೆಮಾಡುತ್ತಿಲ್ಲ. ಇವರು ತಮ್ಮ ಮನಸ್ಸೋ ಇಚ್ಛೆ ಹಣವನ್ನು ವೆಚ್ಚಮಾಡುತ್ತಿದ್ದಾರೆ. ಈಗಾಗಲೇ ಮಾತನಾಡಿದ ಮಾನ್ಯ ಶಿವಪ್ಪನವರು ರಾಜ್ಯ ಭವನದ ವಿಚಾರವನ್ನು ಪ್ರಸ್ತಾಪಿಸುತ್ತಾ ಅದರ ರಿಪೇರಿ ವಗೈರೆಗಳಿಗೆ 19 ಲಕ್ಷ ರೂಪಾಯಿಗಳನ್ನು ಸರ್ಕಾರದವರು ವೆಚ್ಚಮಾಡುವುದಕ್ಕೆ ಹೊರಟಿದ್ದಾರೆಂದು ಹೇಳಿದರು. ಕೇವಲ ಒಬ್ಬ ವ್ಯಕ್ತಿಯ ಅನುಕೂಲಕ್ಕಾಗಿ 19 ಲಕ್ಷ ರೂಪಾಯಿಗಳನ್ನು ಏಕೆ ಖರ್ಚುಮಾಡಬೇಕು ! ಅನೇಕ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರಿಲ್ಲ. ಈ ಹಣವನ್ನು ಅಲ್ಲಿ ಆ ಜನರಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಖರ್ಚುಮಾಡಿದ್ದರೆ 100-150 ಗ್ರಾಮಗಳ ಜನರಿಗೆ ಅನುಕೂಲವಾಗು ತ್ತಿತ್ತು. ಆದರೆ ಅತ್ತ ಕಡೆಗೆ ಸರ್ಕಾರದವರ ಗಮನ ಬೀಳುವುದಿಲ್ಲ. ಹೀಗೆ ಮಾಡತಕ್ಕದ್ದು ಸಾಧುವಾದುದಲ್ಲ. ಇನ್ನು ಆಡಳಿತ ನಡೆಸತಕ್ಕ ಜನರು ತಮ್ಮಲ್ಲಿ ಜಾತಿಯ ವಾದವಿಲ್ಲ ಎಂದು ಹೇಳಿಕೊಳ್ಳುತ್ತಾ ತಮ್ಮವರಿಗೆ ಫಸ್ಟ್ ಕ್ಲಾಸ್ ಮತ್ತು ಸೆಕೆಂಡ್ ಕ್ಲಾಸಿನ ಸ್ಥಾನಗಳನ್ನು ಒದಗಿಸಿ ಅವರಿಗೆ ಮುಂದುವರಿಯಲು ಅವಕಾಶವಿತ್ತಿರುವುದು ಅವರ ಅವಿವೇಕತನವನ್ನು ತೋರಿಸುತ್ತಿದೆ. ಇದನ್ನೆಲ್ಲಾ ನೋಡಿ ಸಾಮಾನ್ಯ ಜನರು ಕಂಗಾಲಾಗಿದ್ದಾರೆ. ನಾವಿಲ್ಲಿ ಮಾಡತಕ್ಕದ್ದೆಲ್ಲಾ ಬರಿ ಒಂದು ಅರಣ್ಯರೋದನವಾಗಿದೆ ಎಂಬುದನ್ನು ಜನತೆ ತಿಳಿಯದೆ ಇಲ್ಲ. ಕುಡಿಯುವ ನೀರನ್ನೂ ಕೂಡ ಒದಗಿಸುವುದಕ್ಕೆ ಸಾಧ್ಯವಿಲ್ಲದ ಸರ್ಕಾರ ಆಡಳಿತವನ್ನು ನಡೆಸುವುದಕ್ಕೆ ಹೊರಟಿರುವುದರಿಂದಲೇ ದೇಶದಲ್ಲಿ ಇಷ್ಟೆಲ್ಲಾ ಅನಾನುಕೂಲಗಳಾಗಿವೆ. ಈ ದಿವಸ ದೇಶದಲ್ಲಿರತಕ್ಕ ಜನಸಾಮಾನ್ಯರಿಗೆ ಕುಡಿಯುವುದಕ್ಕೆ ಇಷ್ಟು ನೀರು, ತಿನ್ನುವುದಕ್ಕಿಷ್ಟು ಅನ್ನ, ಮತ್ತು ಉಡುವುದಕ್ಕಿಷ್ಟು ಬಟ್ಟೆ ಇಷ್ಟನ್ನಾದರೂ ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅಂದಮೇಲೆ ನಾವು ದೇಶದಲ್ಲಿ ಯಾವ ಬಾಬಿನಲ್ಲಿ ಸ್ವಾವಲಂಬನೆಯನ್ನು ಸಾಧಿಸಿದ್ದೇವೋ ನನಗೆ ಅರ್ಥವಾಗುತ್ತಿಲ್ಲ. ನಾವು ಹೀಗಾದರೆ ದೇಶದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಬೇಕೆಂದರೆ ಎಲ್ಲಿ ಸಾಧ್ಯವಿದೆ ? ಇಲ್ಲಿಯವರೆಗೂ ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ದೇಶದಲ್ಲಿ ನೀರಾವರಿ ಸೌಲಭ್ಯ ಗಳು ಏನೇನೂ ಸಾಲವು. ಖರ್ಚುಮಾಡಿರತಕ್ಕ ಹಣಕ್ಕೆ ನಾವು ನಿರೀಕ್ಷಿಸಿದಷ್ಟು ಪ್ರತಿಫಲ ಬರುತ್ತಿಲ್ಲ. ಇದಕ್ಕೆಲ್ಲಾ ಸರ್ಕಾರದಲ್ಲಿರತಕ್ಕ ಅದಕ್ಷತೆಯೇ ಕಾರಣ. ಮಂತ್ರಿಗಳು ಯಾವ ಜಿಲ್ಲೆಯ ಪ್ರವಾಸ ಕಾರ್ಯವನ್ನೇ ಕೈಗೊಳ್ಳಲಿ ಮೊದಲು ಅಲ್ಲಿಗೆ ತಮ್ಮ ಪ್ರೋಗ್ರಾಂ ತಿಳಿಸದೆ ಹೋಗುವುದಿಲ್ಲ. ಏಕೆಂದರೆ ಹಾಗೆ ತಿಳಿಸದೇ ಹೋದರೆ ಇವರಿಗೆ ಭವ್ಯಸ್ವಾಗತ ದೊರೆಯುವುದಿಲ್ಲ. ಇವರು ವಿವಿಧ ಇಲಾಖೆಯ ಕಚೇರಿಗಳಿಗೆ ಭೇಟಿ ಕೊಡುವಾಗ ಇವರನ್ನು ಅಲ್ಲಿನ ಉನ್ನತ ಅಧಿಕಾರಿಗಳು ಸ್ವಾಗತಿಸಿ, ಒಳ್ಳೆಯ ಭಕ್ಷ್ಯ ಭೋಜನಗಳನ್ನು ಏರ್ಪಾಡು ಮಾಡುತ್ತಾರೆ. ಇದರಿಂದಾಗಿ ಅಲ್ಲಿ ನಡೆಯುತ್ತಿರುವ ಅವಿವೇಕ, ಅನ್ಯಾಯಗಳನ್ನು ಇವರಿಂದ ಪತ್ತೆಹಚ್ಚುವುದಕ್ಕಾಗುವುದಿಲ್ಲ. ಅದು ಇವರಿಗೆ ಮನದಟ್ಟಾಗುವುದಿಲ್ಲ. ಆದ್ದರಿಂದ ಇವರು ಪ್ರೋಗ್ರಾಂ ಇಲ್ಲದೆಯೇ ಸರ್‌ಪ್ರೈಜ್ ವಿಜಿಟ್ ಕೊಟ್ಟಹಾಗೆ ಪ್ರತಿಯೊಂದು ತಾಲ್ಲೂಕಿಗೂ ಹೋಗಿ ನೋಡಿದರೆ ಅನೇಕ ಇಲಾಖೆಗಳಲ್ಲಿ ಎಷ್ಟೆಷ್ಟು ದಿವಸಗಳಿಂದ ಕಾಗದ ಪತ್ರಗಳು ಇನ್ನೂ ನ್ಯಾಯವಾಗಿ ತೀರ್ಮಾನವಾಗದೆ ಉಳಿದಿವೆ ಎಂಬುದನ್ನು ತಿಳಿಯಬಹುದು. ಹೀಗಿದ್ದರೆ ಏನು ಆಡಳಿತ ಉತ್ತಮವಾದೀತು ! ಎಷ್ಟರ ಮಟ್ಟಿಗೆ ಕಾಗದ ಪತ್ರಗಳು ತೀರ್ಮಾನವಾಗಿವೆ, ಕಾರ್ಯಗತವಾಗುತ್ತಿವೆ ಎನ್ನುವುದನ್ನು ಕಾಣಬಹುದು. ನಮ್ಮ ರಾಜ್ಯ ರಾಮರಾಜ್ಯವಾಗಿದೆಯೋ ಅಥವಾ ರಾವಣ ರಾಜ್ಯವಾಗಿದೆಯೋ ಎಂಬುದನ್ನು ನಾವು ನೋಡಬಹುದು. ವಿಶ್ವೇಶ್ವರಯ್ಯ ನಾಲಾ ಪ್ರಾಂತದಲ್ಲಿ ಹಿಂದೆ ಒಂದು ಲಕ್ಷದ 10 ಸಾವಿರ ಎಕರೆ ಗಳಿಗೆ ನೀರು ಕೊಡುತ್ತೇವೆ ಎಂಬುದಾಗಿ ಹೇಳಿದರು. ಈಗ ಒಂದು ಲಕ್ಷ 40 ಸಾವಿರ ಎಕರೆಗಳಿಗೆ ನೀರನ್ನು ಒದಗಿಸುತ್ತೇವೆಂದು ಹೇಳುತ್ತಿದ್ದಾರೆ. ಟೈಲ್ ಎಂಡ್‌ನಲ್ಲಿ ಸುಮಾರು 50-60 ಗ್ರಾಮ ಗಳಲ್ಲಿ ಫಸಲು ಮಾಡುತ್ತೇವೆಂದು ಹೇಳುತ್ತಿದ್ದರು. ಆದರೆ ಈ ಪ್ರಾಂತದಲ್ಲಿ ಫಸಲನ್ನು ನಿಜವಾಗಿ ಪಡೆದಿಲ್ಲ. ಈಗ ಆ ಜಮೀನುಗಳಿಗೆ ನೀರೇ ಇಲ್ಲ. ಅಲ್ಲಿ ಅನೇಕರು ಬರಕ್ಕೆ ತುತ್ತಾಗುತ್ತಿದ್ದಾರೆ

ಇವರು ಪರಿಹಾರ ಅದಕ್ಕೇನೂ ಮಾಡಲಿಲ್ಲ. ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಉನ್ನತ ಅಧಿಕಾರಿಗಳಿಗೆ ಟೆಲಿಗ್ರಾಂ ರೂಪದಲ್ಲಿಯೂ ಕೇಳಿದ್ದೇವೆ. ಖುದ್ದು ಪ್ರತ್ಯೇಕವಾಗಿ ಬಂದು ಬೇಕಾದಷ್ಟು ಸಾರಿ ನೋಡಿದ್ದೇವೆ. ಆದರೆ ಇವರು ಅಲ್ಲಿನ ಜನತೆಯ ಕಷ್ಟನಷ್ಟಗಳನ್ನು ನೋಡಿಯೇ ಇಲ್ಲ. ಅಲ್ಲಿನ ರೈತರ ಪರಿಸ್ಥಿತಿ ಅರಣ್ಯ ರೋದನವಾಗಿದೆ. ವಿಶ್ವೇಶ್ವರಯ್ಯ ನಾಲಾ ಪ್ರಾಂತದಲ್ಲಿ 12 ತಿಂಗಳುಗಳಿಂದ ನೀರನ್ನು ದುರ್ವ್ಯಯ ಮಾಡುತ್ತಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 33 ವರ್ಷಗಳಿಂದ ಕೆ. ಆರ್. ಸಾಗರದಲ್ಲಿ ನೀರನ್ನು ಸಪ್ಲೈ ಮಾಡಿರುವ ಪಟ್ಟಿಯನ್ನು ನೋಡಿದರೆ ಚೆನ್ನಾಗಿ ಎಲ್ಲವೂ ಗೊತ್ತಾಗುತ್ತದೆ. ಆ ರೀತಿ ಯಾರೋ ಅವರ ಆತ್ಮೀಯರು ಹೇಳಿರಬೇಕು. ಅದನ್ನೇ ಅವರು ಪುಷ್ಟೀಕರಿಸಿ ಮಾತನಾಡಿದರು; ನೀರಿನ ಹಂಚಿಕೆ ಜನವರಿ 15ನೇ ತಾರೀಖಿನಿಂದ ಜೂನ್ 15 ರವರೆಗೆ ಕೇವಲ 40 ಸಾವಿರ ಎಕರೆ ಕಬ್ಬು ಬೆಳೆಗೆ 10 ದಿವಸಗಳು ನೀರು ಕೊಡುತ್ತಾರೆ ಇನ್ನು 10 ದಿವಸಗಳು ನೀರನ್ನು ನಿಲ್ಲಿಸುತ್ತಿದ್ದಾರೆ. ಆದರೆ ಜೂನ್ 15 ರಿಂದ ಜುಲೈ 31 ರವರೆಗೆ ಎಲ್ಲಾ ನಾಲೆಗಳಿಗೂ ನೀರು ಬಿಡುತ್ತಾರೆ. ಆಗಸ್ಟ್ 1 ರಿಂದ ಜನವರಿ 15 ರವರೆಗೆ ಸುಮಾರು ನಾಲ್ಕು ದಿವಸಗಳು ನೀರು ಬಿಡುತ್ತಾರೆ. 3 ದಿವಸ ನಿಲ್ಲಿಸುತ್ತಾರೆ. ಹೀಗಿರುವಾಗ್ಗೆ ವರ್ಷಂಪ್ರತಿ ನೀರನ್ನು ಒದಗಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತೆ. ಅದರಿಂದಾಗಿ 40 ಸಾವಿರ ಎಕರೆಗೆ ಅಲ್ಲಿ ನೀರು ಒದಗಿಸಲು ಸಾಧ್ಯವಿದ್ದರೂ ಕೇವಲ 20 ಸಾವಿರ ಎಕರೆಗಳಿಗೆ ಮಾತ್ರ ನೀರು ಒದಗಿಸಿದ್ದಾರೆ. ರೈತರು ಈಗಾಗಲೇ ವಾಟರ್ ರೇಟ್ ಸಹ ಕೊಟ್ಟಿದ್ದಾರೆ. ವರುಣಾ ನಾಲೆ ತೆಗೆಯಲು ಪ್ರಯತ್ನ ಮಾಡಿ 25 ಸಾವಿರ ಎಕರೆಗೆ ನೀರು ಕೊಡುತ್ತೇವೆಂದು ಹೇಳಿ ಈ ಯೋಜನೆಗೆ ಅತ್ಯಧಿಕವಾಗಿ ದುಡ್ಡು ಖರ್ಚು ಮಾಡುವುದು ಸರಿಯಲ್ಲ. ಇದಕ್ಕಾಗಿ 2¼ ಅಥವಾ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಯೋಜನೆಯನ್ನು ರೂಪಿಸಿರುವುದು ಸರ್ಕಾರದ ನಿಲುವು ಸರಿಯಾದ ಮಾರ್ಗವಲ್ಲವೆಂದು ನಾನು ಹೇಳುತ್ತೇನೆ. ಕೆ. ಆರ್. ಸಾಗರದ ಅಚ್ಚುಕಟ್ಟಿನಲ್ಲಿರತಕ್ಕ 40 ಸಾವಿರದಿಂದ 50 ಸಾವಿರ ಎಕರೆ ಈಗಾಗಲೇ ಒಣಗಿ ಹೋಗಿದೆ. ಇದರಿಂದಲೇ ಮಂಡ್ಯಾ ಸಕ್ಕರೆ ಕಾರ್ಖಾನೆಯಲ್ಲಿ ರಾಜ್ಯ ಸರ್ಕಾರಕ್ಕೆ 50 ಲಕ್ಷ ರೂಪಾಯಿಗಳು ಇನ್ನೂ ಸಂದಾಯವಾಗಿಲ್ಲ. ಈಗ ನೀರು ಒದಗಿಸದೆ ಒಣಗಿರುವ 40 ಅಥವಾ 50 ಸಾವಿರ ಎಕರೆಗೆ ನೀರನ್ನು ಒದಗಿಸದೆ ವರುಣ ನಾಲೆಗೆ 2¼ ರಿಂದ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುವ ಈ ಒಂದು ಯೋಜನೆ ಈಗ ಸಾಧುವಾದುದಲ್ಲ. ಈಗಲಾದರೂ ವರುಣಾ ನಾಲೆಯ ಯೋಜನೆ ಏನಿದೆಯೋ ಅದನ್ನು ಕಾರ್ಯಗತಗೊಳಿಸದೆ ಜಾಗ್ರತೆಯಾಗಿ ಎಲ್ಲಾ ಸೌಲಭ್ಯಗಳು ಇರತಕ್ಕ 40 ಸಾವಿರ ಎಕರೆ ಜಮೀನುಗಳಿಗೆ ನೀರನ್ನು ಸಪ್ಲೈ ಮಾಡಬೇಕೆಂದು ಮನವಿ ಮಾಡುತ್ತೇನೆ. ಮೇಲ್ಗಡೆ ಹಾರಂಗಿ, ಕಂಬಧಕಡ, ಹೇಮಾವತಿ, ಲಕ್ಷ್ಮಣತೀರ್ಥ ಮುಂತಾದ ಪ್ರಾಜೆಕ್ಟುಗಳನ್ನು ಬೇರೆ ನಿರ್ಮಾಣ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈಗಲೇ ಕೆ. ಆರ್. ಸಾಗರದಲ್ಲಿ ನೀರು ಇಲ್ಲದೇ ಇರುವಾಗ ಆ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡಿದಾಗ ಸಾಕಷ್ಟು ನೀರು ಸಪ್ಲೈ ಆಗುತ್ತದೆಯೋ ಎಂದು ಪ್ರಶ್ನೆ ಮಾಡುತ್ತೇನೆ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಈಗಾಗಲೇ 10 ಸಾವಿರ ಜನರು ನಿರ್ಗತಿಕರಾಗಿದ್ದಾರೆ. 1924ನೇ ಇಸವಿಯ ಕರಾರಿನ ಪ್ರಕಾರ ಇವರು ಯೋಜನೆಯನ್ನು ತಯಾರು ಮಾಡಿ ಇಷ್ಟು ಟಿ. ಎಂ. ಸಿ. ಫೀಟ್ ನೀರು ಹೆಚ್ಚುವರಿಯಾಗುತ್ತದೆ ಎಂದು ಇತ್ತು. ಈಗ ಎಷ್ಟು ನೀರು ಬರುತ್ತದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡದೆಯೇ ಯೋಜನೆಗಳನ್ನು ರೂಪಿಸುವುದು ಸಾಧುವಾದುದಲ್ಲ.

ಇನ್ನು ಪ್ರತಿ ವರ್ಷವೂ 10 ಇಂಚು, 12 ಇಂಚು ಮಳೆಯಾಗಿರತಕ್ಕ ತಾಲ್ಲೂಕುಗಳು ಹಾಗೂ ಜಿಲ್ಲೆಗಳು ಬೇಕಾದಷ್ಟಿವೆ. ಹೀಗಿದ್ದರೂ ಕೂಡ ಅಕ್ಕ ಪಕ್ಕದಲ್ಲಿರುವ ಹಳ್ಳಿಗಳಲ್ಲಿ ಲಿಫ್ಟ್ ಇರಿಗೇಷನ್ ಹಾಕಿ ನೀರಾವರಿ ಯೋಜನೆಗಳನ್ನು ಈ 15 ವರ್ಷಗಳಲ್ಲಿ ಮಾಡಲೇ ಇಲ್ಲ. ಜನತೆಗೆ ನೀರಾವರಿ ಗೋಸ್ಕರ ಯಾವ ತಾಲ್ಲೂಕಿನಲ್ಲಿಯೂ ಏನೊಂದು ಸೌಕರ್ಯವನ್ನು ಇದುವರೆಗೂ ಮಾಡಲಿಲ್ಲ. ಕೋಟ್ಯಾಂತರ ರೂಪಾಯಿಗಳನ್ನೇನೋ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಅದರಿಂದೇನೂ ಪ್ರಯೋಜನವಾಗಿಲ್ಲ.

ಇನ್ನು ಕಂಟ್ರಾಕ್ಟುದಾರರುಗಳಲ್ಲಿ 1, 2, 3, 4ನೇ ತರಗತಿಗಳು ಬೇಡ. ನಮ್ಮಲ್ಲಿ ಆ ತರಹ ಕ್ಲಾಸ್ ಎಂಬುದಾಗಿ ವಿಂಗಡಿಸುವುದು ಬೇಡ. ಸರ್ಕಾರದವರು ಈ ರೀತಿ ಕಂಟ್ರಾಕ್ಟರುಗಳ ಬಗ್ಗೆ ತರಗತಿಗಳನ್ನು ವಿಂಗಡಿಸುವುದರಲ್ಲಿ ಕೇವಲ ಕೆಲವರ ಅಭ್ಯುದಯಕ್ಕಾಗಿ ಹಾಗೂ ಕೆಲವರ ಶ್ರೇಯಸ್ಸಿಗಾಗಿ ಮಾಡುತ್ತಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಆ ರೀತಿ ಮಾಡುತ್ತಿರುವುದರಿಂದ ಈ 10 ವರ್ಷಗಳ ಅವಧಿಯಲ್ಲಿ 15 ವರ್ಷಗಳ ಹಿಂದೆ ಕಂಟ್ರಾಕ್ಟ್ ಮಾಡುತ್ತಿದ್ದವರು ಈಗ ಒಂದು, ಎರಡನೆಯ ತರಗತಿ ಕಂಟ್ರಾಕ್ಟರ್ಸ್ ಲೆವಲ್ಲಿನಲ್ಲಿ ಹೋಗುತ್ತಿದ್ದಾರೆ. ಒಬ್ಬ ನ್ಯಾಯವಾದಿ ಎರಡು ನಾಯಿಗಳ ವಿವಾಹಕ್ಕೆ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದನೆಂದು ಮೊನ್ನೆ ವರ್ತಮಾನ ಪತ್ರಿಕೆಯಲ್ಲಿ ಬಂದಿದೆ. ಹಾಗೆ ನಮ್ಮ ಕಂಟ್ರಾಕ್ಟರ್ಸ್ ಇತ್ತೀಚೆಗೆ ಒಂದು ಟೀ ಪಾರ್ಟಿಗೆ

(ಶ್ರೀ ಬಿ. ದೊಡ್ಡಬೋರೇಗೌಡ)

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಎಷ್ಟೋ ದೊಡ್ಡ ದೊಡ್ಡ ಭವನಗಳನ್ನು ಕಟ್ಟಿದ್ದಾರೆ. ಬಡ ಜನಗಳ ಬೊಕ್ಕಸದ ದುಡ್ಡನ್ನು ಹಾಳುಮಾಡಿ ಸಾಮಾನ್ಯ ಜನತೆಗೆ ದಿನ ಬೆಳಿಗ್ಗೆಯಾದರೆ ಯಾವುದಾದರೂ ಒಂದು ರೀತಿಯಲ್ಲಿ ತೆರಿಗೆ ಹಾಕತಕ್ಕ ಮನೋಭಾವ ಸಾಧು ವಾದುದಲ್ಲ. ಕಂಟ್ರಾಕ್ಟರ್ಸ್ ಒಂದನೇ ಅಥವಾ ಎರಡನೇ ತರಗತಿಯವರಾಗಿದ್ದರೂ 10 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಆಗತಕ್ಕ ಕೆಲಸಗಳನ್ನು ಇಲಾಖೆಯವರಿಂದಲೇ ಮಾಡಿಸಬೇಕು. ಒಳ್ಳೆಯ ದಕ್ಷರೂ, ಯೋಗ್ಯರೂ, ನಿಷ್ಕಾಮವಂತರೂ ಈ ಇಲಾಖೆಯಲ್ಲಿದ್ದಾರೆ. ಅವರಿಗೆ ಸುಮಾರು 3-4 ಸಾವಿರ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೀರಿ. ಅವರು ಇವನ್ನೆಲ್ಲಾ ಬೇಕಾದರೆ ನೋಡಿಕೊಳ್ಳುತ್ತಾರೆ. ಕಂಟ್ರಾಕ್ಟರ್‌ಗೆ ಕೊಡತಕ್ಕ ಕೆಲಸಗಳು ಐದು ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಇರಬಾರದು. ಅದಕ್ಕೆ ಮೇಲೆ ಯಾವ ಕಂಟ್ರಾಕ್ಟರಿಗೂ ಕೊಡಬಾರದು. ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಮತ್ತು ಜನತೆಯ ದುಡ್ಡು ಸುಮ್ಮನೆ ನೀರಿನಂತೆ ಹರಿದುಹೋಗುತ್ತದೆ ನೀವು ಏನೋ ಒಂದು ಹಠ ಸಾಧನೆ ಮಾಡಿ ಕೆಲಸ ಮಾಡುವುದಾದರೆ ದೇಶ ವಿನಾಶವಾಗುತ್ತದೆ. ಇಲ್ಲಿ ನಾವು ಹೇಳತಕ್ಕದ್ದು, ಹೊರಗಡೆ ಜನ ಹೇಳತಕ್ಕದ್ದು ಅರಣ್ಯರೋದನವೆಂಬುದಾಗಿ ಸರ್ಕಾರ ಭಾವಿಸಬಾರದು. ಆದ್ದರಿಂದ ಇನ್ನು ಮುಂದೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ. ಪ್ರತಿಯೊಬ್ಬ ಮಂತ್ರಿಯೇ ಆಗಲೀ ಅಥವಾ ಅಧಿಕಾರಿಯೇ ಆಗಲೀ ಪ್ರತಿ ಗ್ರಾಮಕ್ಕೂ ಹೋಗಿ ಅಲ್ಲಿ ನೀರಾವರಿ ಸೌಲಭ್ಯ ಹೇಗಿದೆ, ಜನತೆಯ ಕಷ್ಟನಷ್ಟಗಳು ಏನು, ಎಂಬುದನ್ನೆಲ್ಲಾ ಅರಿತು ಅವರಿಗಾಗಿ ಕೆಲವು ಕಾಲ ಹಳ್ಳಿಗಳಲ್ಲಿಯೇ ನೆಲಸಿ ಸರ್ಕಾರದವರನ್ನೇ ಆಶ್ರಯಿಸಿರತಕ್ಕ ಜನತೆಗೆ ಪೂರ್ಣ ಸಹಾಯ, ಸಹಕಾರ ಹಾಗೂ ಸಹಾಯ ಧನವನ್ನು ನೀಡುತ್ತಾರೆಂದು ನಾನು ನಂಬಿದ್ದೇನೆ. ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ಯಾವ ಸಬ್ ಡಿವಿಜನ್ನಿಗೇ ಆಗಲೀ ಪ್ರವಾಸ ಹೋದಾಗ ಪ್ರೋಗ್ರಾಂ ಕೊಡದೆ ಹೋಗಿ ಕೆಲಸ ಕಾರ್ಯಗಳು ಯಾವ ರೂಪದಲ್ಲಿರುತ್ತವೆಂಬುದನ್ನು ಗಮನಿಸಬೇಕು. ಅಲ್ಲದೆ ಅಲ್ಲಿಗೆ ಹೋದಾಗ ಪ್ರತಿಯೊಂದು ವಿಷಯ ವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡುತ್ತಾರೆಂದು ನಂಬಿ ನನಗೆ ಈ ದಿನ ಒಂದೆರಡು ಮಾತು ಗಳನ್ನು ಆಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಪುಗೌಡ (ಷಹಪೂರ್).—ಮಾನ್ಯ ಸಭಾಪತಿಗಳೇ, ಈ ದಿವಸ ಲೋಕೋಪಯೋಗಿ ಖಾತೆಯ ಸಚಿವರು ಮಂಡಿಸಿದಂಥ ಬೇಡಿಕೆಯನ್ನು ನಾನು ಸಮರ್ಥಿಸುತ್ತಾ ಕೆಲವು ವಿಚಾರ ಗಳನ್ನು ಹೇಳಬಯಸುತ್ತೇನೆ. ಈ ಖಾತೆಯು ಈ ರಾಜ್ಯದ ಜನಾಂಗಕ್ಕೇ ಜೀವಾಳವಾಗಿರತಕ್ಕ ಖಾತೆ. ಅದು ಜನರ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣವಾದ ಖಾತೆಯಾಗಿದೆ. ಮಹತ್ತರವಾದಂಥ ಖಾತೆಯೂ ಆಗಿದೆ. ಈಗಾಗಲೇ ಈ ಖಾತೆಯ ಮುಖಾಂತರ ರಾಜ್ಯದಲ್ಲಿ ಮಹತ್ತರವಾದ ಸಮಸ್ಯೆಗಳು ಅಂದರೆ ರಸ್ತೆ ಕಾಮಗಾರಿಗಳು, ಎಲೆಕ್ಟ್ರಿಸಿಟಿ ಮತ್ತು ನೀರಿನ ಸರಬರಾಜು ಬಗ್ಗೆ ಹಲವಾರು ಕಾರ್ಯಗಳನ್ನು ಸರ್ಕಾರದವರು ಮಾಡಿದ್ದಾರೆ. ಆದರೆ ಏನೊಂದು ಪರಿಸ್ಥಿತಿಯಲ್ಲಿಯೂ ದೇಶಕ್ಕೆ ಅತ್ಯಂತ ಮುಖ್ಯವಾದ ಹಾಗೂ ಅವಶ್ಯಕವಾಗಿ ಬೇಕಾದಂಥ ಆಹಾರದ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ, ಪೂರ್ಣ ಮಾಡುವುದರಲ್ಲಿ ಈ ಸರ್ಕಾರ ಅದಷ್ಟು ಮಟ್ಟಿಗೆ ದುರ್ಬಲವಾಗಿದೆ, ಸಮರ್ಥವಾಗಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

5-00 P.M.

ಗುಲ್ಬರ್ಗಾ ಜಿಲ್ಲೆ, ಬೀದರ್ ಜಿಲ್ಲೆ ಮತ್ತು ರಾಯಚೂರು ಜಿಲ್ಲೆ ಈ ಜಿಲ್ಲೆಗಳ ಕೆಲವು ಭಾಗಗಳ ವಿಷಯವನ್ನು ಮಾತನಾಡುವುದಾದರೆ ಈ ಭಾಗಗಳಲ್ಲಿ ಸುಮಾರು ಹೆಚ್ಚು ಪ್ರಮಾಣದಲ್ಲಿ ಕಲ್ಬುರ್ಗಿ ಜಿಲ್ಲೆ ಯಲ್ಲಿ 30-35 ಲಕ್ಷ ಎಕರೆ ಭೂಮಿ, ಬಿಜಾಪುರದಲ್ಲಿ 70-75 ಲಕ್ಷ ಎಕರೆ ಭೂಮಿ ಮತ್ತು ಇದೇ ರೀತಿ ಯಾಗಿ ಲಕ್ಷಾವಧಿ ಎಕರೆ ಭೂಮಿ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಕ್ಕಲುತನಕ್ಕೆ ಉಪ ಯೋಗವಾಗತಕ್ಕಂಥ ಭೂಮಿಗಳಾಗಿವೆ. ಈ ಭೂಮಿಯನ್ನು ನೋಡಿದರೆ ಅತ್ಯಂತ ಉತ್ತಮವಾದ ಭೂಮಿ; ಕೆಂಪು ಭೂಮಿಗಳು ಹೆಚ್ಚು ಫಲವತ್ತಾದ ಭೂಮಿಗಳು ಮತ್ತು ಹೆಚ್ಚಿನ ಉತ್ಪತ್ತಿಯನ್ನು ಕೊಡ ತಕ್ಕ ಭೂಮಿಗಳಾಗಿವೆ. ಆದರೆ ಅಲ್ಲಿನ ಜನಗಳು, ರೈತರು ಕೇವಲ ಆಕಾಶದ ಕಡೆಗೆ ನೋಡಿ ಒಕ್ಕಲುತನ ವನ್ನು ಕಾಪಾಡಿಕೊಳ್ಳಬೇಕು. ಅಲ್ಲಿ ಮಳೆಯಾಗುವುದು ಕೇವಲ 18 ಇಂಚು. ಇಂಥಾ ಪರಿಸ್ಥಿತಿ ಯಲ್ಲಿ 5-10 ವರ್ಷಗಳಲ್ಲಿ ಸರ್ಕಾರದ ವತಿಯಿಂದ ಮೇಜರ್ ಆಗಲೀ, ಮೈನರಾಗಲೀ, ದೊಡ್ಡ ಪ್ರಮಾಣದ ಅಥವಾ ಸಣ್ಣ ಪ್ರಮಾಣದ ಯೋಜನೆಯಾಗಲೀ ಯಾವುದನ್ನೂ ಕೈಗೊಳ್ಳಲಿಲ್ಲ. ಸಾಕಷ್ಟು

ಯೋಜನೆಗಳನ್ನು ವಿಚಾರಮಾಡಲಾಯಿತು. ಮಲ್ಲಪ್ರಾ ಯೋಜನೆ, ಭೀಮಾ ಯೋಜನೆ ಮತ್ತು ಇನ್ನೂ ಇತರ ಸಣ್ಣ ಪ್ರಮಾಣದ ಯೋಜನೆಗಳು ಅದೇ ರೀತಿಯಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ವಿಚಾರ ಮಾಡಲಾಗಿದೆ. ಅದನ್ನು ಕಾರ್ಯರೂಪಕ್ಕೆ ತರತಕ್ಕಂಥ ಪರಿಸ್ಥಿತಿ ಕಾರ್ಯರೂಪಕ್ಕೆ ತರತಕ್ಕಂಥ ಸಾಮರ್ಥ್ಯ ಸರಕಾರಕ್ಕೆ ಬರಲಿಲ್ಲ. ಈ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಜನರು 100 ಕ್ಕೆ 80 ರಷ್ಟು ಜನರು ಕೇವಲ ಒಕ್ಕಲುತನವನ್ನೇ ಅವಲಂಬಿಸಿಕೊಂಡಿರತಕ್ಕವರಾಗಿದ್ದಾರೆ. ಈ ಜನಗಳಿಗೆ ಹೆಚ್ಚು ಪ್ರಮಾಣದಲ್ಲಿ ನೀರನ್ನು ಕೊಟ್ಟು ಜನರ ಜೀವಾಳವಾಗಿರತಕ್ಕ ನೀರನ್ನು ಹೆಚ್ಚು ಪ್ರಮಾಣದಲ್ಲಿ ಮುಂದುವರಿಸಲು ಈಗ 5-6 ವರ್ಷಗಳಿಂದ ಪ್ರಯತ್ನ ಮಾಡಿದರೂ ಫಲಕಾರಿಯಾಗಲಿಲ್ಲ ಎಂದು ಹೇಳಬೇಕಾಗಿದೆ. ಸರ್ಕಾರದವರು 1960ನೇ ಇಸವಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸಿದ್ಧ ಮಾಡಿದರು. ಆದರೆ ಈ ಯೋಜನೆಯನ್ನು ಹೈದರಾಬಾದ್ ಸರ್ಕಾರದಲ್ಲಿ ನಿರ್ಮಾಣವಾದಂತಹ ಯೋಜನೆಯನ್ನೇ ವಿಚಾರಮಾಡಲಾಗಿತ್ತು. ಆ ಕಾಲಕ್ಕೆ ಎಸ್ಟಿಮೇಟ್ ಮಾಡಲಾಗಿ ಕೇವಲ 30 ಕೋಟಿ ರೂಪಾಯಿಗಳಲ್ಲಿ ಕೃಷ್ಣಾ ಮೇಲ್ದಂಡೆಯ ಮೊದಲನೆಯ ಮತ್ತು ಎರಡನೆಯ ಹಂತದ ಯೋಜನೆಯನ್ನು ಮುಗಿಸುವ ವಿಚಾರ ಇತ್ತು. ಅದೇ ಯೋಜನೆಯ ಅಂಕಿ ಅಂಶಗಳನ್ನು ತೆಗೆದುಕೊಂಡು, ಅದೇ ವಿಚಾರವನ್ನು ಪಡೆದುಕೊಂಡು ಈ ಸರಕಾರ 1960 ನೇ ಇಸವಿಯಲ್ಲಿ ಯೋಜನೆಯನ್ನು ಸಿದ್ಧಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಅದನ್ನು ಕೊಟ್ಟನಂತರ ಈ ಯೋಜನೆಗೆ ಮಂಜೂರಾತಿ 1963 ರಲ್ಲಿ ಬಂತು. ಈ ಯೋಜನೆಯು ಮಂಜೂರಾಗಿ ಬಂದನಂತರ ಅಲ್ಲಿ ಆ ಪ್ರದೇಶದ ಜನರಿಗೆ ಒಂದು ರೀತಿಯ ಹುರುಪು ಹುಟ್ಟಿತು. ಕೇವಲ ಕೆಲವು ವರ್ಷಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯರೂಪಕ್ಕೆ ಬಂತು. ಲಕ್ಷಾಂತರ ಎಕರೆ ಭೂಮಿಗೆ ನೀರನ್ನು ಕೊಟ್ಟು ರೈತನಿಗೆ ಆಹಾರವನ್ನು ಕೊಡತಕ್ಕ ಮಹತ್ ಕಾರ್ಯದ ಹೆಜ್ಜೆಯನ್ನು ಸರಕಾರ ಇಟ್ಟಿತ್ತು. ಆ ಕೆಲಸ ತೀವ್ರವಾಗಿ ಆಗತಕ್ಕಂಥ ಭರವಸೆ ಅಲ್ಲಿನ ಜನರಿಗೆ ಇತ್ತು. ಅದೇ ರೀತಿಯಲ್ಲಿ 1964ನೇ ಇಸವಿಯಲ್ಲಿ ದಿವಂಗತ ಪ್ರಧಾನ ಮಂತ್ರಿಗಳಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ಆ ಯೋಜನೆಗೆ ಅಸ್ತಿಭಾರವನ್ನು ಕೂಡ ಹಾಕಿದರು. ಆ ಸನ್ನಿವೇಶದಲ್ಲಿ ಸಾವಿರಾರು ಜನ ರೈತರು ಗುಲ್ಬರ್ಗ, ರಾಯಚೂರು ಮತ್ತು ಬಿಜಾಪುರದಿಂದ ಗುಂಪು ಗುಂಪಾಗಿ ಜಯಕಾರವನ್ನು ಹಾಡಿದರು. ಆಗ ಆ ಜನರಲ್ಲಿ ಒಂದು ವಿಶ್ವಾಸವಿತ್ತು. ಅದೇನೆಂದರೆ, ಕೃಷ್ಣಾ ಮೇಲ್ದಂಡೆಯ ಯೋಜನೆಗೆ ದಿವಂಗತ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳು ಅಸ್ತಿಭಾರವನ್ನು ಹಾಕಿದ್ದಾರೆ, ಇದು ಸಂಪೂರ್ಣವಾಗಿ ತೀವ್ರವಾಗಿ ಆ ಕೆಲಸ ಸರ್ಕಾರದಿಂದ ಆಗತಕ್ಕಂಥಾದ್ದು, ಇದನ್ನು ಸರ್ಕಾರದವರು ತೀವ್ರವಾಗಿ ಕೈಗೊಂಡು ಅಲ್ಲಿ ನಮಗೆ ಬೇಕಾದ ಆಹಾರವನ್ನು ಸರ್ಕಾರ ಒದಗಿಸಿಕೊಡುವುದಕ್ಕೆ ಅನುಕೂಲಮಾಡಿಕೊಡುತ್ತಾರೆ ಎಂಬ ಭರವಸೆ ಹುರುಪು ಹುಮ್ಮಸ್ಸು ನಮಗೆ ಇತ್ತು. ಅದು ಇವೊತ್ತು ಮಾಯವಾಗಿ ಹೋಗಿದೆ. ಕೇವಲ ರೈತನ ಕಲ್ಪನೆಯಲ್ಲಿ ಕೃಷ್ಣಾ ಮೇಲ್ದಂಡೆಯ ಯೋಜನೆ ಇದೆಯೇ ಹೊರತಾಗಿ ಅದು ಕಾರ್ಯರೂಪಕ್ಕೆ ಬಂದಿಲ್ಲ. ಹಲವಾರು ಯೋಜನೆಗಳು ಆಗಿ ಕೆಲವು ರೋಡುಗಳು ಆದುವು. ಕೆಲವು ಕಟ್ಟಡಗಳನ್ನು ಕಟ್ಟಲಾಯಿತು. ಎಷ್ಟೋ ಜನರು ಬೃಹದಾಕಾರವಾದ ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಸಾವಿರಾರು ಜನರು ಗುಡಿಸಲುಗಳನ್ನು ಹಾಕಿಕೊಂಡು ಮುಂದಿನ ಕಾರ್ಯ ನಡೆದಿದೆ, ಉಪಜೀವನ ಆಯಿತು, ಎಂಬ ಭರವಸೆ ಮತ್ತು ಕಲ್ಪನೆ ಇತ್ತು. ಆದರೆ ಆ ಕಾರ್ಯ ಸಂಪೂರ್ಣವಾಗಿ ಸ್ಥಗಿತವಾಗಿ ಸ್ತಬ್ಧವಾಗಿ ತಿರುಗಿ ಕೃಷ್ಣಾ ಮೇಲ್ದಂಡೆಯ ಯೋಜನೆ ಆ ಭಾಗದಲ್ಲಿ ಆಗುವುದೋ ಇಲ್ಲವೋ ಎನ್ನುವ ಸಂಶಯ ಈಗ ಅವರಿಗೆ ಬಂದಿದೆ. ಇಂಥಾ ಪರಿಸ್ಥಿತಿಯಲ್ಲಿ ಸರ್ಕಾರದವರು ಈ ರಾಜ್ಯದ ಇನ್ನೂ ಕೆಲವಾರು ಮಹತ್ತರ ಸಮಸ್ಯೆಗಳು ಇದ್ದರೂ ಕೂಡ ಹಣವನ್ನು ಬೇರೆ ಬೇರೆ ಖಾತೆಗೆ ಕೊಟ್ಟಿದೆ. ಮುಂದೆ ಇಡೀ ದೇಶಕ್ಕೆ ಹೆಚ್ಚು ಪ್ರಮಾಣದಲ್ಲಿ ಆಹಾರವನ್ನು ಒದಗಿಸತಕ್ಕಂಥ ಈ ಯೋಜನೆಯಿಂದ ಸುಮಾರು 16 ಲಕ್ಷ ಟನ್ ಆಹಾರವನ್ನು ಇವೊತ್ತು ಈ ಅಪ್ಪರ್‌ಕೃಷ್ಣಾ ಯೋಜನೆಯಿಂದ ಪಡೆಯಬಹುದು. ಇಂಥಾ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯಕ್ಕೆಲ್ಲಾ ಆಹಾರವನ್ನು ಕೊಡತಕ್ಕಂಥ ಸಾಮರ್ಥ್ಯ ಇರುವಂತಹ ಈ ಯೋಜನೆಯನ್ನು ಕೈಗೊಳ್ಳದೇ ಹೋದರೆ ಸಂಪೂರ್ಣವಾದ ಅನ್ಯಾಯ, ಸಂಪೂರ್ಣವಾದ ತಪ್ಪನ್ನು ರೈತರ ಮೇಲೆ ಮಾಡಿದಂತಾಗುತ್ತದೆಂದು ನಾನು ಹೇಳಬೇಕಾಗಿದೆ. ಈ ಯೋಜನೆಯ ಭರವಸೆಯ ಮೇಲೆ ಕೈಗೊಳ್ಳತಕ್ಕಂಥ ಎಷ್ಟೋ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಿಲ್ಲ. ಷಹಬಾದ್, ಸುರಪುರ ಮತ್ತು ಜೇವರಿಗಿಗಳಲ್ಲಿ ಕೃಷ್ಣಾ ಮತ್ತು ಭೀಮಾನದಿಗಳು ಹರಿಯುತ್ತಿವೆ. ಈಗ ಸುಮಾರು ಎರಡು ವರ್ಷಗಳಿಂದಲೂ ಕೂಡ ಅಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರ ನೂರಾರು ಎಕರೆಗೆ ನೀರನ್ನು ಪಡೆಯಬಹುದಾಗಿತ್ತು. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆ ಆಗುವುದರಲ್ಲಿ ಒಳಪಡತಕ್ಕ ಪ್ರದೇಶ ಏನು ಇದೆ ಅದು ಸಬ್‌ಮರ್ಜ್ ಆಗುತ್ತದೆ. ಇಂಥಾ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಎಷ್ಟೋ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಂತ್ರಿಗಳು ಮತ್ತು ಸಚಿವರು ಮತ್ತು ಇಂಜನಿಯರು ಹೇಳುತ್ತಾರೆ. ಆದರೆ ಅಂಥಾ ಯಾವ ಯೋಜನೆಯನ್ನು

(ಶ್ರೀ ಬಾಪುಗೌಡ)

ಇವೊತ್ತಿನವರೆಗೂ ತೆಗೆದುಕೊಳ್ಳಲಿಲ್ಲ. ವಿಶೇಷವಾದಂತಹ ಮಹತ್ತರವಾದಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತಿದ್ದಾರೆ. ಇಂಥಾ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡರೆ ಅಲ್ಲಿ ಅಪ್ಪರ್ ಕೃಷ್ಣಾ ಯೋಜನೆ ಬಂದನಂತರ ಅವುಗಳೆಲ್ಲಾ ಸಬ್‌ಮರ್ಜ್ ಆಗುತ್ತವೆ. ಅವು ಉಪಯೋಗವಾಗುವುದಿಲ್ಲ. ಆದ್ದರಿಂದ ಈ ರೀತಿಯ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳನ್ನು ಗುಲ್ಬರ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಷಹಬಾದಿನಲ್ಲಿ ಎಲ್ಲಿ ನದಿಗಳು ಹರಿಯುತ್ತವೆಯೋ ಅಲ್ಲಿ ಅವುಗಳನ್ನು ತೆಗೆದುಕೊಳ್ಳದ ಪರಿಸ್ಥಿತಿ ಉಂಟಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಆದಷ್ಟು ಮಟ್ಟಿಗೆ ಸರ್ಕಾರದವರು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈ ಎಷ್ಟೋ ಹಲವಾರು ಸಮಸ್ಯೆಗಳು, ಹಲವಾರು ಪ್ರಶ್ನೆಗಳು ಈಗ ಉದ್ಭವಿಸಿವೆ. ಈಗಾಗಲೇ ಆಂಧ್ರದವರು ನಾಗಾರ್ಜುನ ಸಾಗರದ 3 ನೇ ಹಂತವನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯದೇ, ಕೇಂದ್ರಸರ್ಕಾರದವರು ಒಪ್ಪಿಗೆಯನ್ನು ಕೊಡದಿದ್ದರೂ ನಾವು ನಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಯುತ್ತೇವೆಂದು ಅವರು ಧೈರ್ಯವಾಗಿ ಆ ಕೆಲಸವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಆಂಧ್ರ ಸರ್ಕಾರದ ವತಿಯಿಂದ ಆರಿಸಿ ಹೋದಂಥ ನೀರಾವರಿ ಮಂತ್ರಿಗಳಾದ ಶ್ರೀಮಾನ್ ಕೆ. ಎಲ್. ರಾಯರು ಕೇಂದ್ರ ಸರ್ಕಾರದಲ್ಲಿ ನೀರಾವರಿ ಮಂತ್ರಿಗಳಾದ ನಿಮಿತ್ತವಾಗಿ ಅವರಿಗೆ ಆ ಧೈರ್ಯ ಉಂಟಾಗಿದೆ ಎಂದು ನನಗೆ ಅನಿಸುತ್ತದೆ. ಅಲ್ಲಿ ಒಂದು ಪಿತೂರಿ ನಡೆದಿದೆ. ಆಂಧ್ರದವರು ಮೊದಲನೆಯ ಹಂತವನ್ನು ಮುಗಿಸಿ ಎರಡನೆಯ ಹಂತವನ್ನು ಮಾಡುತ್ತಿದ್ದಾರೆ. ಈಗಾಗಲೇ ನಾನು ಹೇಳಿದ ರೀತಿಯಲ್ಲಿ ಆದಷ್ಟು ಮಟ್ಟಿಗೆ ಕೃಷ್ಣಾ ನೀರಿನ ಹಂಚಿಕೆಯ ಒಂದು ಗೊಂದಲವನ್ನು ಬಗೆಹರಿಸದೆ ಉಳಿಸಿ ಆದಷ್ಟು ಮಟ್ಟಿಗೆ ಒಂದು ರೀತಿಯ ಮೋಸವನ್ನು ಮಾಡತಕ್ಕ ಪ್ರಯತ್ನವನ್ನು ಕೇಂದ್ರಸರ್ಕಾರದಲ್ಲಿರತಕ್ಕ ನೀರಾವರಿ ಮಂತ್ರಿಗಳು ಮಾಡುತ್ತಾರೇನೋ ಎನ್ನುವ ಶಂಕೆ ಜನರಲ್ಲಿ ಉದ್ಭವಿಸಿದೆ. ಇಂಥಾ ಪರಿಸ್ಥಿತಿಯಲ್ಲಿ ಇವೊತ್ತು ನಾಗಾರ್ಜುನ ಸಾಗರಕ್ಕೆ ಕೇಂದ್ರದಿಂದ ಧನಸಹಾಯ ಪಡೆಯಲಿಕ್ಕೆ ಎಷ್ಟೋ ರೀತಿಯಿಂದ ಈಗಿನ ಸರ್ಕಾರ ಪ್ರಯತ್ನ ಮಾಡಿತು. ಹಲವಾರು ಸಲ ನಮ್ಮ ಮುಖ್ಯ ಮಂತ್ರಿಗಳು ಇಲ್ಲಿ ಇದ್ದಂತಹ ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಡಿಲ್ಲಿಗೆ ಹೋಗಿ ಆದಷ್ಟು ತೀವ್ರವಾಗಿ ಕೃಷ್ಣಾ ಯೋಜನೆಗೆ ಧನಸಹಾಯವನ್ನು ಪಡೆಯಬೇಕೆಂದು ಪ್ರಯತ್ನಪಟ್ಟರೂ ಕೂಡ ಕೇಂದ್ರದಿಂದ ಯಾವ ರೀತಿಯ ಸಹಾಯವೂ ಇಲ್ಲಿಯವರೆಗೂ ಬರಲಿಲ್ಲ. ಆದರೆ ನಾಗಾರ್ಜುನ ಸಾಗರಕ್ಕೆ ಕೇಂದ್ರ ಸರ್ಕಾರದವರು ಸಾಲದ ಮುಖಾಂತರ 110 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಸುಮಾರು 1963 ರಿಂದ 1967ನೇ ಇಸವಿಯವರೆಗೂ ಕೂಡ ಯಾವುದೇ ವಿಧವಾದ ಧನಸಹಾಯ ಬಾರದೆಹೋದದ್ದು ಶೋಚನೀಯವಾದ ಸಂಗತಿಯಾಗಿದೆ. ಇದು ಏನು ತೋರಿಸುತ್ತದೆ ಅಂದರೆ ಕೇಂದ್ರದಲ್ಲಿ ರಾಜಕೀಯ ಒತ್ತಾಯ, ಪೊಲಿಟಿಕಲ್ ಪ್ರೆಶರ್ ಕೆಲಸ ಮಾಡಿದೆ. ನಾಗಾರ್ಜುನ ಸಾಗರದಲ್ಲಿ ಎರಡನೇ ಹಂತ ಪ್ರಾರಂಭವಾಗಿ ಕೃಷ್ಣಾ ಯೋಜನೆ ಬರಿ ಕಾಗದದ ಯೋಜನೆಯಾಗಿ ಉಳಿದಿದೆ. ಇಡೀ ರಾಜ್ಯದ ಜನರಿಗೆ ರೈತರಿಗೆ ಮೋಸ ಮಾಡತಕ್ಕಂಥಾದ್ದು ಎಂದು ಕಾಣುತ್ತದೆ. ಸರಕಾರದ ಪ್ರಯತ್ನ ಎಷ್ಟೇ ಇದ್ದರೂ ಕೂಡ ಕೇಂದ್ರ ಸರಕಾರ ಯಾವ ಧೋರಣೆಯಿಂದ ಯಾವ ಭಾವನೆಯಿಂದ ಇದನ್ನು ನೋಡುತ್ತದೆ ಎಂದರೆ, ಇದರಲ್ಲಿ ಎಷ್ಟೋ ಅಡಚಣೆಗಳನ್ನು ಆತಂಕಗಳನ್ನು ತೋರಿಸಿದ್ದಾರೆ. ಈ ಯೋಜನೆಯಲ್ಲಿ 600 ಟಿ. ಎಂ. ಸಿ. ಎಫ್. ಟಿ. ನೀರು ಮೈಸೂರು ರಾಜ್ಯಕ್ಕೆ ಕೊಡುತ್ತೇವೆ, 800 ಆಂಧ್ರಕ್ಕೆ ಕೊಡುತ್ತೇವೆ, 400 ಮಹಾರಾಷ್ಟ್ರಕ್ಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆಂಧ್ರದವರು 800 ನಲ್ಲಿ ಈಗ 172 ಟಿ.ಎಂ. ಸಿ.ಎಫ್.ಟಿ. ನೀರು ಬಾಕಿ ಉಳಿಸಿದ್ದಾರೆ. ಸಂಪೂರ್ಣವಾಗಿ ನೀರು ಉಪಯೋಗಿಸಿಕೊಂಡಿದ್ದಾರೆ. ಕೃಷ್ಣಾ ಬೇಸಿನ್‌ನಲ್ಲಿ ನಾಗಾರ್ಜುನ ಸಾಗರದ ಎರಡನೇ ಹಂತದ ಕಾರ್ಯ ತೆಗೆದುಕೊಂಡಿದ್ದಾರೆ. ನಮ್ಮ ಶಹಪೂರ ಭಾಗ ಕೃಷ್ಣಾ ಯೋಜನೆ ಭಾಗದಲ್ಲಿ ಬರುತ್ತದೆ. ಈ ಕೃಷ್ಣಾ ಯೋಜನೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಶಹಪೂರ ಭಾಗ, ಸುರಪೂರ ಜವರ್ಗಿ ಮೊದಲಾದ ಬರಗಾಲದ ಹಾವಳಿ ಇರತಕ್ಕಂಥ ಪ್ರದೇಶಕ್ಕೆ ಉಪಯೋಗವಾಗುತ್ತದೆ. ಬರಗಾಲ ಹಾವಳಿ ಇರತಕ್ಕ ಬಿಜಾಪೂರ ಜಿಲ್ಲೆಯ ಪ್ರದೇಶ ಲಿಂಗಸೂಗೂರ ಭಾಗ ಇದರಲ್ಲಿ ಬರುತ್ತದೆ. ಇಲ್ಲಿ ಬೇರೆ ಯಾವ ಯೋಜನೆ ಕೈಕೊಂಡಿಲ್ಲ. ಈ ಪ್ರದೇಶಕ್ಕೆ ಅಪ್ಪರ್ ಕೃಷ್ಣಾ ಯೋಜನೆ ಆಗಬೇಕಾದುದು ಅತ್ಯಂತ ಅವಶ್ಯಕವಾಗಿದೆ. 80 ಕೋಟಿ ರೂಪಾಯಿ ಬೇಡಿಕೆ ಇಟ್ಟಿರುವುದರಲ್ಲಿ ಸ್ವಲ್ಪ ಬೇರೆಕಡೆ ಕಡಿತ ಮಾಡಿ ಈ ಯೋಜನೆಗೆ ನಾಲ್ಕೈದು ಕೋಟಿ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಯೋಜನೆ ಪ್ರಾರಂಭ ಮಾಡಬೇಕು, ಇದರಿಂದ ಒಂದು ರೀತಿಯಲ್ಲಿ ಸಮಾಧಾನ ಧೈರ್ಯ ಜನರಲ್ಲಿ ಉಂಟುಮಾಡಿದಂತಾಗುತ್ತದೆ.

ಇನ್ನೊಂದು ವಿಚಾರ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಕೆಲವು ರಸ್ತೆಗಳು ಆಗಿವೆ. ಯಾವ ಪ್ರಮಾಣದಲ್ಲಿ ರಸ್ತೆಗಳು ಆಗಬೇಕೋ ಆ ಪ್ರಮಾಣದಲ್ಲಿ ಆಗಿಲ್ಲ. ಬೇರೆ ಕಡೆ ಅಂದರೆ ಮೈಸೂರು ಬೆಂಗಳೂರು ಜಿಲ್ಲೆಗಳಲ್ಲಿಯು ಹಳ್ಳಿಗಳನ್ನು ನೋಡಿದರೆ ಪ್ರತಿಯೊಂದು ಹಳ್ಳಿಗೆ ಒಳ್ಳೇ ರಸ್ತೆ ಇದೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿ ಶಾಹಪೂರನಲ್ಲಿ ಭೀಮಾ ಮತ್ತು ಕೃಷ್ಣಾ ನದಿಗಳ ಸಂಗಮ ಇದೆ. ಶಾಹಪೂರಕ್ಕೆ ಬರಲು 40 ಮೈಲಿ ಸುತ್ತಿಕೊಂಡು ಬರಬೇಕಾಗುತ್ತದೆ. ಈ ಭಾಗದಲ್ಲಿ ಕೆಲವು ಹಳ್ಳಿಗಳಿಂದ ತಾಲ್ಲೂಕ ಹೆಡ್ ಕ್ವಾರ್ಟರ್ಸ್‌ಗೆ ಬರುವುದಕ್ಕೆ ರಸ್ತೆ ಇಲ್ಲ. ಈ ಭಾಗ ಹೆಡ್ ಕ್ವಾರ್ಟರ್ಸ್‌ಗೆ ಕಟ್ ಆಫ್ ಆಗಿದೆ, ಅದೊಂದು ದ್ವೀಪದ ತರಹ ಪ್ರತ್ಯೇಕವಾಗಿದೆ. ಇಲ್ಲಿ ಯಾವ ರೋಡ್ ರಚನೆ ಕೆಲಸ ತೆಗೆದುಕೊಂಡಿಲ್ಲ. ರೂರಲ್ ಕಮ್ಯುನಿಕೇಷನ್ ದೃಷ್ಟಿಯಿಂದ ಕೆಲವು ರೋಡ್ಸ್ ತೆಗೆದು ಕೊಂಡಿದ್ದರು. ಆದರೂ ಕೂಡ ಇಲ್ಲಿ ಯಾವದೇ ರೀತಿಯ ಅನುಕೂಲತೆ ಇಲ್ಲ. ಆದುದರಿಂದ ಇದಕ್ಕೆ ಹೆಚ್ಚಿನ ಹಣ ಸಹಾಯ ಒದಗಿಸಬೇಕು, ಹಾಗು ಜನರ ಕಷ್ಟ ನಿವಾರಣೆ ಮಾಡಬೇಕು. ಈ ಪ್ರವೇಶ ದಲ್ಲಿ ಎಷ್ಟು ರಸ್ತೆಗಳ ಕೆಲಸವಾಗಬೇಕೋ ಅಷ್ಟು ಆಗಿಲ್ಲ. ರಸ್ತೆ ಅಂಕಿ ಅಂಶ ನೋಡಿ ಕೆಲವರು ಟೀಕೆ ಮಾಡುತ್ತಾರೆ. ಶ್ರೀ ವೀರೇಂದ್ರ ಪಾಟೀಲರು ಗುಲಬುರ್ಗದವರು ಇರುವುದರಿಂದ ಅಲ್ಲಿಯು ನಿಜಸ್ಥಿತಿ ಅವರಿಗೆ ಗೊತ್ತಿದೆ. ಅದುದರಿಂದ ಇಲ್ಲಿ ಸಾಕಷ್ಟು ಕೆಲಸವಾಗಬೇಕೆಂದು ಹೇಳುತ್ತೇನೆ. ಈಗ ಇರತಕ್ಕಂಥ ರಸ್ತೆಗಳಿಗೆ ರಿಪೇರಿ ಇಲ್ಲದ ಮೂಲಕ ಮಳೆಗಾಲದಲ್ಲಿ ರೋಡ್ ಮೇಲೆ ನಡೆಯು ವುದಕ್ಕೆ ಸಾಧ್ಯವಿಲ್ಲದಾಗಿದೆ. ಇಲ್ಲಿ ಬ್ಲ್ಯಾಕ್ ಸಾಯಿಲ್ ಇರುವುದರಿಂದ ಮಳೆಗಾಲದಲ್ಲಿ ಒಂದು ಬಂಡಿಗೆ ಎರಡು ಎತ್ತುಗಳ ಬದಲು ನಾಲ್ಕು ಎತ್ತುಗಳನ್ನು ಹೂಡಬೇಕಾಗುತ್ತದೆ. ಹಳೇ ಮೈಸೂರು ಪ್ರದೇಶದಲ್ಲಿರುವ ಹಾಗೆ ಇಲ್ಲಿ ರಸ್ತೆಗಳಿಲ್ಲ. ಅಲ್ಲಿ ಹಳ್ಳಿಯಲ್ಲಿ 200–400 ಮನೆಗಳು ಇರುತ್ತವೆ, ಜನಸಂಖ್ಯೆ ಎರಡು ಮೂರು ಸಾವಿರ ಇದ್ದರೂ ಕೂಡ ರಸ್ತೆಗಳು ಇಲ್ಲ. ಇದಕ್ಕೆ ಸರಕಾರ ಗಮನ ಕೊಟ್ಟು ರಸ್ತೆ ಕೆಲಸ ಮಾಡಿಸಿಕೊಡಬೇಕೆಂದು ಒತ್ತಾಯಪೂರ್ವಕ ಹೇಳುತ್ತೇನೆ.

ಇನ್ನು ಶಾಹಪೂರ ಕ್ಷೇತ್ರದಲ್ಲಿ ನೀರು ಸರಬರಾಜು ಕೆಲಸವಾಗಿಲ್ಲ. ಆದುದರಿಂದ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಹಣದ ಸಹಾಯ ಪಡೆದು ನೀರು ಸರಬರಾಜು ಕೆಲಸ ಮಾಡಿಸಿಕೊಡಬೇಕು. ಜನರು ತಮ್ಮ ಭಾಗದ ಹಣ ಕೊಡುವುದಕ್ಕೆ ತಯಾರಾಗಿದ್ದಾರೆ. ಪಂಚಾಯತ ರೆಜಲ್ಯೂಷನ್ ಗ್ರಾಂಟು ಮಾಡಿ ಇದನ್ನು ಕಾರ್ಯಗತ ಮಾಡಿಕೊಡಬೇಕೆಂದು ಹೇಳುತ್ತೇನೆ.

ರೂರಲ್ ಕಮ್ಯುನಿಕೇಷನ್ ರೋಡ್ಸ್ ಈಗಾಗಲೇ ಕೆಲವು ತೆಗೆದುಕೊಂಡಿದ್ದಾರೆ. ಸಾವಿರಾರು ರೂಪಾಯಿ ಖರ್ಚು ಮಾಡಿ ಈ ರೋಡ್ಸ್ ತಯಾರ್ ಮಾಡಿದ್ದಾರೆ. ಆದರೆ ಮಳೆಗಾಲದಲ್ಲಿ ಮಣ್ಣು ಕೊಚ್ಚಿಕೊಂಡು ಹೋಗುವುದರಿಂದ ಜನರಿಗೆ ತೊಂದರೆಯಾಗಿದೆ. ಇಂಥ ಸಡಕನ್ನು ರಿಪೇರ್ಸ್ ಮಾಡಿದರೆ ವಾಹನ ಸಂಚಾರ ಸೌಕರ್ಯವಾಗುತ್ತದೆ. ಈ ರೋಡ್ಸ್‌ಗಳಿಗೆ ರಿಪೇರ್ಸ್ ಇಲ್ಲ. ಆದುದರಿಂದ ಈ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ಯವರು ತಮ್ಮ ವಶಕ್ಕೆ ತೆಗೆದುಕೊಂಡು ಕೆಲಸ ಮಾಡಿಕೊಡಬೇಕಾದುದು ಪ್ರಾಮುಖ್ಯವಾಗಿದೆ ಎಂದು ಹೇಳುತ್ತೇನೆ. ಕೆಲವು ಮಾತುಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

SRI V. N. PATIL (Humnabad).—Sir, about the Demand that is placed before the House in respect of the Public Works Department, there are some of the fundamental things which I want to bring to the notice of the Government.

There are some of the inter-State River disputes and most of our precious riparian rights are being curbed. It seems that virtually we are following the policy of defaulters. No attempt has been made as it has been done by the Government of Andhra Pradesh. They have taken the Opposition into confidence. They do not want to take the entire share of credit to themselves in the victory on the issue of riparian rights and the question of solving the rights of riparian problems. They did not bother themselves much for the false pride or prestige of taking the entire responsibility on this issue upon themselves. So they consolidated their position in all earnestness and we here have to note it for our guidance that the entire Andhra Assembly is one when it comes to the question of interests of Andhra Pradesh. Why is it not so in Mysore

(Sri V. N. Patil)

State ? What prevents the Mysore Government from taking the Opposition into confidence and what prevents them from consulting the Opposition and accepting the constructive suggestions from this side. Why not we stand as a huge solid rock for the best interests of the State and for the defence of our own rights, instead of looking forward for some patronage from Delhi. Definitely we cannot expect from the Central Government that when we sleep, they will come and awaken us. Take for instance the Cauvery water rights. According to the agreement, by 1974, we will lose our right if you do not make use of the balance of water available to us namely 18 TMCFT. That is going to be a waste if you do not use it in time. I feel that there is a sort of sensitiveness in the Government. They out of selfishness want to take the entire lot of credit on themselves. And they naturally want to congratulate themselves in the event of any success in the river water deal. That was what happened when Karnataka was formed under the States Reorganisation Act. No serious attempt was made for securing all Kannada speaking villages from erstwhile Hyderabad State by the Congressmen in power. When we were in Hyderabad State, we Kannadigas there were in a microscopic minority, our grievences were misaddressed and we could not make our voice heard. If that was the case then, what is happening today in Mysore State ? No interest was taken to improve the State and the case of Karnataka was not fought out properly and even today no sincere attempt is done. For instance, number of villages which belonged to us according to S.R.C. principles have gone to other States. Even with respect to the water disputes, the State Government is bungling ; if by 1974 our State does not utilise fully its share of Cauvery water under the 1924 Agreement, it will be assumed that the State has lost its rights over the rest of the quantity of water permanently ; we are making mistakes in vindicating our right over Krishna River Basin waters also. In Hyderabad Karnataka area, Tunga Bhadra, Bhima, Krishna and Manjhra rivers flow but our State is not getting any benefit out of them. We have heard lots and lots from the spokesmen of the Government about Alamatti and Narayanapura dams ; but nobody can definitely say when that vision about these projects will be fulfilled ; not even our P.W.D. Minister can say with certainty. This is all due to the policy of vacillation we are adopting. Let me not be misunderstood as being parochial in outlook and speaking having the interests of our State only at heart. I am urging these things in the national interest. If the people of the Karnatak area fight for their legitimate rights and realise them, it will serve the larger interests of the nations eventually ; otherwise, we will neither be serving the State nor the Nation. I am accusing the Government because they have not asserted themselves at proper quarters and have not fought for them even when they are entitled to them in the usual course. The only reason for this failure in their duty is that our Government here has not taken the Opposition into their confidence and are not working in right earnestness;

they have no clarity of purpose; they have neither national pride nor the interests of the State; their Party is above everything because party and power are above national interest, the interests of their Party is above the interests of the State. That is the reason why we have been suffering like this for the last several years. We have not made any headway. The best is yet to come. I hope the Hon'ble Minister for Public Works will not leave any stone unturned to get our riparian rights in the Krishna Water basin. No purpose will be served in his merely repeating the words, we are considering this question, etc. We have heard a lot of these vague utterances. We want them to be translated into action; we want some activities in that behalf. Assurance is given frequently that the case of Mysore in these water disputes will not be lost by default. There is no use in such assurances. We want more of action and less of talk from the Hon'ble Public Works Minister.

The Public Works Department is rather famous for being called by another name. I come from a backward District *viz.*, Bidar District. I also feel that the P.W.D. should have been named 'C.P.W.D.' ಲೋಕೋಪಯೋಗಿ ಶಾಖೆ ಎನ್ನುವುದಕ್ಕಿಂತ ಕಾಂಗ್ರೆಸ್ಸಿಗರ ಸಲುವಾಗಿ ಇದ್ದ ಕಾಂಗ್ರೆಸ್ ಲೋಕೋಪಯೋಗಿ ಶಾಖೆ ಎಂದು ಹೇಳಬಹುದು. This Department is something like that. I shall illustrate it. We were surprised to hear from the Congress leaders in the months of December 1966 and January 1967 that they will see that electricity is supplied to all the villages within 30 days. Our agriculturists were misled; even some of the Ministers were promising electricity to the villages by February. The moment March was over, there was a wide gap between their promise and performance. I do not know whether it is a sit-down strike or a political strike in order to encourage Congressmen and discourage those who voted against the Congress Party, in the Elections. During the time of the last General Elections, trenches were dug and and poles were lying there. After that, the rainy season started and the dug trenches are all filled with mud. There is no indication of providing electricity to the villages. It appears that there are also separate lists of villages, those that favoured the ruling party and those that did not. When we approach the concerned Assistant Engineer of MSEB at Humnabad and make enquiries for the delay in providing electricity, as to who is responsible for it, etc., the only reply we have received is, that we should go to their superior officers; that is the stock reply of every officer. What is this M.S.E.B. office meant for? Is it a Reception Office or a Post Office? We are in a democratic set up and the people know how to punish the concerned in right time. They will be taught a lesson. Works should be done in a swifter way. When electric poles are there, why is not wiring done and electricity supplied? Without providing electricity, what is the meaning in providing pumpsets? Is it because the peasants committed the sin of voting against the Congress in the Elections? Don't make the P.W.D., "C.P.W.D." Make it a real Public Works Department. Do not make use of it for your political ends. The people have been tolerating the sins of the officers with utmost patience.

(SRI V. N. PATIL)

But that attitude cannot go on for long. The Official class must create healthy traditions and precedents. If their present attitude continues, they will, on the other hand, be creating unhealthy precedents.

The Karanjia Project is pending with the Government for the last ten years. It has not come into the picture at all. So far, no work has been started. If at all there is an intention to start the work it must be started otherwise put an end to this speculation so that the villages likely to submerge may start developing their lands in a better way without suspending them perpetually. We do not know whether it has been shelved for lack for funds. No doubt, we have suffered some set backs due to national calamities. During 1963-65, there was heavy burden on our finance. But in the name of heavy defence expenditure, we cannot curtail our rights; our precious rights should not be hampered indefinitely. If we go by default, we will be facing the situation we are facing with regard to Cauveri waters. It is very necessary that equal attention should be paid to raise food and agricultural products. Defence preparation does not mean equipping the nation with defence weapons and armaments. Sufficient food is also part and parcel of the Defence. Agriculture must be tuned to defence orientedness with irrigation projects on top priority so that nation may reach self sufficiency in food. If we really depend on the United States and other countries for our food, they will dictate terms to us. The more we depend upon foreign countries, the more they will interfere in our foreign policies and defence matters and will actually dictate them. Therefore, to be really independent in our policies and programmes, we must immediately become self-sufficient in food. Even though the P.W. Minister is not directly concerned with food, he holds the portfolio of a department which can play a more important role in stepping up food production; it is a pity that that Department is not playing that vital role.

In Bidar District, road work is not done properly. From the last ten years, there is one road under constructions only 32 miles from Bidar to Chincholi on the map. There were several controversies bout that. But now all of them are set at rest and attempt should be made that road is immediately completed. As is well-known, Bidar is a backward area. In Gulbarga Division, it is very difficult to go from one village to another because there are no roads. It is not at all possible to go in vehicles during rainy season. Therefore, it is very necessary for the Government to put in earnest efforts and provide roads to the villages of this Division. These officers have developed a sort of lethargic mentality and think that they can complete their work at their sweet will and pleasure. This tendency should be condemned by the Government. When instances of slackness and dilatoriness on the part of officers are brought to notice, Government should take stern disciplinary action against them and see that this bad tendency is not allowed to increase

I have in mind a particular Assistant Engineer *viz.*, Assistant Engineer, MSEB., Humnabad, who thinks that he is a king-maker. He feels that he was instrumental for the efforts towards success of the ruling party during elections and that he is helping it, and that nobody can check him. He thinks that there are people in the top to look to his interests; therefore he is not amenable to reason, and not interested in carrying out the rural electrification schemes with sincerity, unless he is made to mend his ways and is brought under strict disciplinary control. Such tendency should not be allowed to develop; it must be deprecated.

Coming back again to the implementation of the Karanjia Project Scheme, I request the hon. Minister to take it up as early as possible, during the course of this year itself. He must take into consideration the fact that no other Major Irrigation projects are there in Bidar District. Minor Irrigation Projects, small tanks at least may be taken up early to help the progress of this district. Coming to Channapandri Project, I learnt that it will take three or four years. There are no wells in villages of Chincholi Taluka. Hardly one or two wells are there and there is no possibility of lift irrigation. Whatever expenditure that is necessary must be provided and that Project must be completed within a year so that the agriculturists there may help to solve the food problem of our State to the extent of their capacity. I request the Hon. Minister to give first and foremost importance to irrigation projects rather than other projects. In order to reduce the cost, he should take care that in future he will not incur any expenditure on inauguration functions and see that such money, which is being spent on the inaugurations by Ministers will be spent in raising one or two feet of the project walls.

5-30 P.M.

MR. SPEAKER.—I have received a letter from the office of the Commissioner of Police, Bangalore which states that Sri Vatal Nagaraj, M.L.A., who was arrested on 19-7-67 at 5 P.M. and was produced before the Additional First Class Magistrate, Bangalore City on 20-7-67 at 11-30 A.M. He was released on bail by the court on executing a self bond for a sum of Rs. 500 at 11-45 A.M. He is prosecuted for defying the prohibitory orders u/s 35 of the Mysore Police Act. The case stands posted to 21-8-67 in CC. No. 5849/67.

APPOINTMENT OF A CHAIRMAN TO THE COMMITTEE ON GOVERNMENT ASSURANCES.

MR. SPEAKER.—I have another announcement to make. Under sub-rule 3 of rule 196 of the Assembly Rules, I have appointed Dr. R. Nagan Goud as the Chairman of the Committee on Government Assurances.

BUDGET ESTIMATES FOR 1967-68—DEMANDS FOR GRANTS

Demand Nos. 6, 29, 30, 30A, 31, 32, 43, 45, 46, 47, 48 and 50.

(*Debate—Cont.*)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಚರ್ಚೆಯಾಗುತ್ತಿರುವಾಗ ನಾನು ಕೆಲವು ವಿಚಾರಗಳನ್ನು ಮತ್ತು ಸೂಚನೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ನಮ್ಮ ತಾಲ್ಲೂಕಿನ ಪರವಾಗಿ ಮತ್ತು ಬರಗಾಲ ಪ್ರದೇಶದಲ್ಲಿ ವಾಸಿಸುತ್ತಿರುವ ನಮ್ಮ ತಾಲ್ಲೂಕಿನವರ ಪರವಾಗಿ ಲೋಕೋಪಯೋಗಿ ಇಲಾಖೆಗೆ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸದಿದ್ದರೆ ಕರ್ತವ್ಯಲೋಪಮಾಡಿದಂತಾಗುತ್ತದೆ. ಏಕೆಂದರೆ ನಾವು 10-12 ವರ್ಷಗಳಿಂದ ಎಷ್ಟೋ ಕಷ್ಟಪಟ್ಟವರು. ಈಗ ಚನ್ನಬಸಪ್ಪನವರಿಲ್ಲ. ಅವರಿದ್ದರೆ ಚೆನ್ನಾಗಿತ್ತು. ಅವರು ಎಷ್ಟೋ ಸಾರಿ ಟೆಕ್ನಿಕಲ್ ಸಾಂಕ್‌ಶನ್ ಆಗಿದೆಯೇ, ಅಪ್ರೂವ್ ಮಾಡಿದರೆ ಏಕೆ ಮಾಡಿಸ್ವಾಗೆ ಎಂಬುದಾಗಿ ಹತ್ತಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ನಮ್ಮ ತಾಲ್ಲೂಕನ್ನು ಏನು ಮಾಡಿದ್ದರು ಏನು ಆಗಿತ್ತು ಹೇಳುತ್ತಿದ್ದೆ. ಅವರು ಮಾಡಿರುವ ಪಾಪವನ್ನು ಅವರ ಕಾಲದಲ್ಲಿ ತಾಲ್ಲೂಕು ಸುಟ್ಟು ಭಸ್ಮವಾಗಿದ್ದನ್ನು ಇನ್ನೊಂದು ದಿವಸ ಅವರಿದ್ದಾಗ ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ನನಗೆ ಗೊತ್ತಿರುವ ವಿಚಾರ ಹೇಳುತ್ತೇನೆ. ನಿನ್ನೆ ನನಗೆ ಒಂದು ಪುಸ್ತಕ ಸಿಕ್ಕಿದೆ ಅದರಲ್ಲಿ ಮೈಸೂರು ಜಿಲ್ಲೆಯ ಕೆಲವು ವಿಚಾರ ತಿಳಿಸಿದ್ದಾರೆ ಅದರಲ್ಲಿ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ವಿಚಾರವೇನಾದರೂ ಇದೆಯೇ ಎಂದು ನೋಡಿದೆ, ಅದರಲ್ಲಿ ಒಂದು ದೊಡ್ಡ ಪಟ್ಟಿಯಿದೆ, ಯಾವ ಕೆಲಸ ತೆಗೆದುಕೊಳ್ಳಬಹುದು, ತೆಗೆದುಕೊಳ್ಳಬೇಕಾದ್ದೆಷ್ಟಿದೆ ಎಂಬ ವಿವರವಿದೆ. ಆದರೆ ಕೆಲವು ಎರಡು ಮೂರು ಸಲ ಪ್ರಿಂಟಾಗಿರುವುದರಿಂದ ದೊಡ್ಡ ಪಟ್ಟಿ ಕಂಡಿತೇ ಹೊರತು ಇರುವ ಕೆಲಸಗಳ ಪಟ್ಟಿ ನಿಜವಾಗಿ ನೋಡಿದರೆ ಚಿಕ್ಕದು. ದಯವಿಟ್ಟು ಹಾಗೆ ಮಾಡಬಾರದು, ಎಷ್ಟು ಕೆಲಸಗಳಿವೆಯೋ ಅಷ್ಟೇ ತೋರಿಸಬೇಕು ಹಾಗೆ ಮಾಡಿ ಮನಸ್ಸು ಶಾಂತವಾಗುವ ಹಾಗೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈ ಪುಸ್ತಕದಲ್ಲಿ ಬಾಡಿಗೆ ಮನೆ ಯೋಜನೆ ಇದೆ, ನಮ್ಮ ತಾಲ್ಲೂಕಿನ ಯಾವ ಯೋಜನೆಯೂ ಇಲ್ಲ. ನಮ್ಮ ತಾಲ್ಲೂಕಿಗೆ ಯಾವ ಮಂತ್ರಿಗಳೂ ಬರುವುದಿಲ್ಲ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳೂ ಬರುವುದಿಲ್ಲ. ಚೀಫ್ ಇಂಜಿನಿಯರ್ ಜನರಲ್ ರವರು ಒಂದು ಸಲ ಬರುತ್ತಿದ್ದಾಗ ಆಕ್ಸಿಡೆಂಟಾಗಿ ಅವರು ಬರುವುದಕ್ಕಾಗಲಿಲ್ಲ. ಮಂತ್ರಿಗಳಂತೂ ಬರುವುದೇ ಇಲ್ಲ. ಯಾರು ಮಂತ್ರಿಸಿ ನೀರು ಹಾಕಿದ್ದಾರೋ ಏನೋ ನಮ್ಮ ತಾಲ್ಲೂಕಿನಲ್ಲಿ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಿಲ್ಲ. ಬಾಡಿಗೆ ಮನೆ ಯೋಜನೆ ನೋಡಿದರೆ ಚಾಮರಾಜನಗರಕ್ಕೆ 4 ಲಕ್ಷ ಕೊಟ್ಟಿದ್ದಾರೆ. ಗುಂಡಲುಪೇಟೆಗೆ ಯಾವುದೂ ಬೇಡವೇ ? ರಾಚಯ್ಯನವರು ನಮಗೆ 10-12 ಮೈಲಿ ದೂರದಲ್ಲಿದ್ದರೂ ಅಭಾವ ಪ್ರದೇಶವಾದ ನಮ್ಮ ತಾಲ್ಲೂಕಿಗೆ ಅಲ್ಲಿಂದ ನೀರನ್ನೊದಗಿಸುವುದಾಗಲೀ ಅಥವಾ ಬೇರೆ ಯಾವ ಸಹಾಯಕ್ಕಾಗಲೀ ಬರುವುದಿಲ್ಲ. ಅವರು ತಮಗೆ ಬೇಕಾದ ಅನುಕೂಲಮಾಡಿಕೊಳ್ಳುತ್ತಿದ್ದಾರೆ. ನೀರಾವರಿಯಿಲ್ಲದಿರುವ ಗುಂಡಲುಪೇಟೆ ತಾಲ್ಲೂಕಿನಲ್ಲಿ ಯಾವುದಾದರೂ ಕೆರೆಯಾದರೂ ಆಗಲಿ ಅಂದರೆ ಅದಕ್ಕೂ ಬ್ರೇಕ್ ಹಾಕುತ್ತಾರೆ. ಹಾಗೆ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನುಗು ರಿಸರ್ವಾಯರ್ 20 ಸಾವಿರ ಎಕರೆಗಳಿಗೆ ನೀರನ್ನೊದಗಿಸುವುದು ಅದರಲ್ಲೂ 2—3 ವರ್ಷದಿಂದ ನೀರಿಲ್ಲದೆ ತೊಂದರೆಯಾಗಿದೆ. ಕಪಿನಿಯೋಜನೆ ಕೈಬಿಡುವ ಪರಿಸ್ಥಿತಿ ಕಾಣುತ್ತಿದೆ. ಅದನ್ನು ಕೈಬಿಡಬಾರದು, ಕಪಿನಿ ಯೋಜನೆಯಿಂದ ಫೀಡರ್‌ಚಾನಲನ್ನು ನುಗು ಜಲಾಶಯಕ್ಕೆ ಒದಗಿಸಲು ಅನುಕೂಲಮಾಡಬೇಕು. 48ನೆಯ ಪುಟದಲ್ಲಿ ಮಂಗಳ ಪ್ರಾಜೆಕ್ಟ್ ಸಮೂದಿಸಲಾಗಿದೆ, ಇದರಿಂದ ಯಾರಿಗೆ ಅನುಕೂಲ ? ರಾಚಯ್ಯನವರಿಗೇ ಅನುಕೂಲವಾಗಬಹುದು, ಅವರ Game Sanctuaryಗೆ ಆನೆ, ಕುರಿ, ಕರಡಿ ಮುಂತಾದವುಗಳಿಗೆ ಅನುಕೂಲವಾಗುವ ಹಾಗೆ ಇದನ್ನು ತೆಗೆದುಕೊಳ್ಳಲು ಸೇರಿಸಿದ್ದಾರೆಯೇ ಹೊರತು ಜನರಿಗೆ ಅನುಕೂಲವಾಗಲೆಂದು ಸೇರಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಆದರೆ ಇಬ್ಬರು ಅಥವಾ ಮೂರು ಜನರಿಗೆ ಅನುಕೂಲವಾಗಬಹುದು, ಅಷ್ಟೆ. ಆದುದರಿಂದ ದಯಮಾಡಿ ಇದನ್ನೇ ದೊಡ್ಡದುಮಾಡಿ ಬಾಕಿ ಕೆಲಸ ಕೈಬಿಡದೆ ಜನರಿಗೆ ಬೇಕಾದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹೆಬ್ಬಳ್ಳ ಪ್ರಾಜೆಕ್ಟ್ ಗುಂಡಲಿಗೆ ಸೇರಿಸುವುದಿವ, ಚೀಫ್ ಇಂಜಿನಿಯರು ಅದನ್ನು ನೋಡಿದ್ದಾರೆ, ನಿಜವಾಗಿಯೂ ಇದರಿಂದ ಜನತೆಗೆ ಅನುಕೂಲ

ವಾಗುತ್ತದೆ, ಅದನ್ನು ಮಾಡಿದರೆ ಗುಂಡಲುಪೇಟೆ ಜನರಿಗೆ ನೀರು ದೊರೆಯುತ್ತದೆ, ಗುಂಡಲು ನೀರು ದೊರೆತು ನೀರಾವರಿಗೆ ಅವಕಾಶವಾಗುವುದು. ಆದುದರಿಂದ ಹೆಬ್ಬಳ್ಳ ಪ್ರಾಜೆಕ್ಟನ್ನು ತೆಗೆದು ಕೊಳ್ಳಬೇಕು. ಕಮರಹಳ್ಳಿ ಪ್ರಾಜೆಕ್ಟ್ ಮಾಡಿದ್ದಾರೆ, ಆದರೆ ಅದನ್ನು ಪೂರೈಸಿದರೆ ನೀರು ಯಾರಿಗೋ ಇತರರಿಗೆ ದೊರೆತು ಗುಂಡಲುಪೇಟೆ ತಾಲ್ಲೂಕಿನವರ ಜಮೀನು ಮುಳುಗಡೆಯಾಗು ವುದು ಕಂಡುಬಂದಿದೆ. ಮುಳುಗಡೆಯಾಗಿರುವ ಪ್ರದೇಶದ ಮಾಲೀಕರಿಗೆ ಪರಿಹಾರ ಸಹ ಕೊಟ್ಟಿಲ್ಲ. ದಯೆಯಿಟ್ಟು ಬೇಗ ಅದನ್ನು ಪಾವತಿಮಾಡಬೇಕು.

ಆಮೇಲೆ ದೊಡ್ಡ ದೊಡ್ಡ ಕಟ್ಟಡಗಳಿಗೆ ವಿಪರೀತ ಹಣವನ್ನು ಪಟ್ಟಣಗಳಲ್ಲಿ ಖರ್ಚುಮಾಡುವುದು ವ್ಯರ್ಥ ಎಂದು ಮಾನ್ಯ ಸದಸ್ಯರು ಈಗತಾನೇ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಶಾಲೆ ಗಳಿಗೆ ಕೇಳಿದರೆ ಹಣವಿಲ್ಲ ಎಂದು ಹೇಳುವುದು, ಹಳ್ಳಿಗಳಲ್ಲಿ ಆಗಬೇಕಾದ ಕಟ್ಟಡಗಳಿಗೆ ಹಣವಿಲ್ಲ ಹೆಣ್ಣುಮಕ್ಕಳ ಶಾಲೆಗಳ ಬಳಿ ಲ್ಯಾವೇಟರೀಸ್ ಕಟ್ಟಿಸುವುದಕ್ಕೆ ಹಣ ಕೊಡುವುದಿಲ್ಲ, ರಾಜ್ಯಪಾಲರ ಬಂಗಲೆ ಕೆಲಸ ಮುಂತಾದುವುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವುದು ಅನ್ಯಾಯ. ಈ ರೀತಿ ಅನಾವಶ್ಯಕವಾದ ಕೆಲಸಗಳಿಗೆ ದುಬಾರಿ ಖರ್ಚುಮಾಡುವುದನ್ನು ಬಿಟ್ಟು ಹಳ್ಳಿಗಳಲ್ಲಿ ಹೆಣ್ಣು ಮಕ್ಕಳ ಶಾಲೆಗಳಿಗೆ ಅನುಕೂಲಮಾಡಿಕೊಡಿ.

ಹೀಗೆ ಮಿಡಲ್ ಸ್ಕೂಲ್ ಇದೆ, ಗರ್ಲ್ಸ್ ಸ್ಕೂಲ್ ಇದೆ ನಮ್ಮ ಗುಂಡ್ಲುಪೇಟೆಯಲ್ಲಿ. ಅಲ್ಲಿ ನಾನು ನೋಡಿದ್ದೇನೆ ಮಕ್ಕಳನ್ನು ಕುರಿ ತುಂಬಿದ ಹಾಗೆ ತುಂಬುತ್ತಾರೆ. ಇಂಥದಕ್ಕೆ ದುಡ್ಡು ಖರ್ಚುಮಾಡಿ ಕೆಲಸ ಮಾಡಬೇಕು. ಅಲ್ಲದೆ, ಅಲ್ಲಿ ಇಲ್ಲಿ ಏರ್‌ಕಂಡೀಶನ್‌ನ ಬಿಲ್ಡಿಂಗ್ ಕಟ್ಟಿಸುವುದಕ್ಕೆ ದುಡ್ಡು ಖರ್ಚು ಮಾಡುವುದು ಶುದ್ಧ ಅನ್ಯಾಯ.

ವಾಟಾಳ್ ನಾಗರಾಜ್.—ಏರ್ ಕಂಡೀಶನ್ ಆಗಬಾರದು.

ಶ್ರೀಮತಿ ನಾಗರತ್ನಮ್ಮ.—ಇನ್ನು ಈ ಮುದಗೂರ್ ಟ್ಯಾಂಕ್ ಕೆಲಸ ನಡೆಯುತ್ತಿದೆ. ನಮ್ಮ Divisionಗೆ ಅಲ್ಲೇನು ಆಫೀಸರನ್ನು ಪೋಸ್ಟು ಮಾಡುತ್ತಾರೋ, ಗೊತ್ತಿಲ್ಲ. ಮೊದಲು ಒಬ್ಬ ಎಕ್ಸಿಕ್ಯೂಟಿವ್ ಇಂಜಿನೀಯರ್ ಇದ್ದರು. ಈಗ ಇನ್ನೊಬ್ಬರು ಬಂದಿದ್ದಾರೆ. ಇವರು ರೂಲ್ಸ್, ರೂಲ್ಸ್ ಎನ್ನುತ್ತಿದ್ದಾರೆ. ಅವರು ಟ್ಯಾಂಕಿನ ಕೆಲಸ ನಿಲ್ಲಿಸಿ ಬಿಟ್ಟು ಹೊರಟು ಹೋಗಿದ್ದಾರೆ. ಏನೆಂದರೆ, ಗೊತ್ತಿಲ್ಲವೆನ್ನುತ್ತಾರೆ. ಇಂಥ ಸ್ಕೇರ್ಸಿಟಿ ಪರಿಸ್ಥಿತಿಯಲ್ಲಿ ಈ ರೀತಿ ಮಾಡಬಾರದು. ಇನ್ನು ನಾಲೂರು ಅಮಾನಿಕೆರೆಯ ಕೆಲಸ ಕೂಡ ನಿಂತು ಹೋಗಿದೆ. ಅಲ್ಲಿಯ ಕೆಲಸ ಕೂಡ ನಿಂತು ಹೋಗಿ, ಅಲ್ಲಿ ಏನಾದರೂ ಕೂಲಿ ಮಾಡತಕ್ಕ ಜನರಿಗಾದರೂ ಅನುಕೂಲವಾಗುತ್ತಿತ್ತು, ಅದು ಕೂಡ ಇಲ್ಲದಾಗೆ ಆಗಿದೆ.

ಇನ್ನು ನಂಜನಗೂಡು ಬ್ರಿಜ್. ಅಲ್ಲಿ ಒಂದು ಸಾರಿ ಹೋದರೆ, ಒಂದೊಂದು ಗಂಟೆ ಕಾಯ ಬೇಕು. ಒಂದು ಬಸ್, ಕಾರು, ಗಾಡಿ ಎಂದು ಬರಲಿಕ್ಕೇನೇ ಆಗುವುದಿಲ್ಲ. ಇದನ್ನು ನೀವು ತೆಗೆದುಕೊಂಡು ಸ್ವಲ್ಪ ಅನುಕೂಲವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪವರ್ ಫೈಲ್ಯೂರ್. ನಮ್ಮ ಸಹೋದರಿ, ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು—ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ, 20–25 ಜನರನ್ನು ನೀರು ಬಿಡುವುದಕ್ಕೆ ಕರಕೊಂಡು ಹೋದಾಗ, 10-15 ಸಾರಿ ವಿದ್ಯುಚ್ಛಕ್ತಿ ಫೈಲ್ಯೂರ್ ಆದರೆ, ಇಲಾಖೆಯ ಮೇಲೆ ಕೇಸ್ ಹಾಕುವ ಪರಿಸ್ಥಿತಿ ಬರುತ್ತದೆ. ಹೀಗಾಗಬಾರದು, ಇದನ್ನು ಸರಿಪಡಿಸುವುದಕ್ಕೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ನಿಮ್ಮ ಟ್ರಾನ್ಸ್‌ಫಾರ್ಮರ್ಸ್ ಏನಿವೆ, ಅವನ್ನು ಎಲ್ಲಾ ಒಳ್ಳೆಯ ರೀತಿಯಿಂದ ಇಡಬೇಕು. ಕೆಲವು ಕಡೆ ಇದರಿಂದ ರೈತರ ಪಂಪ್‌ಸೆಟ್ಟೇ ಭಸ್ಮ ವಾಗುವ ಪರಿಸ್ಥಿತಿ ಬರುತ್ತದೆ. ಮತ್ತು ಅದನ್ನು ರೈತರಿಗೆ ರಿಪೇರಿ ಮಾಡಬೇಕಾದರೆ, 300–400 ರೂಪಾಯಿ ಖರ್ಚಾಗುತ್ತದೆ.

ಇನ್ನು ಈ ಟ್ರಾನ್ಸ್‌ಫರ್ಸ್ ವಿಚಾರ. ಕೆಲವರು ನಮ್ಮನ್ನು ಕಾಡಿ, ಬೇಡಿಕೊಳ್ಳುತ್ತಿದ್ದಾರೆ. ಅವರ ನಿಜವಾದ ಸ್ಥಿತಿಯನ್ನು ಹೇಳಿದರೆ, ಖಂಡಿತವಾಗಿ ಅದನ್ನು ಮಾಡಬೇಕು. ಏಕೆಂದರೆ, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದ ತಕ್ಷಣ, ಅವರು ಹಿಂದಿನ ಬಾಗಿಲುಗಳಲ್ಲಿ ಹೋಗುತ್ತಾರೆ. ಒಬ್ಬೊಬ್ಬರು ಒಂದೊಂದು ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದುದನ್ನು ನಾನು ನೋಡಿದ್ದೇನೆ. ನಿಮ್ಮ ಚೀಫ್ ಇಂಜಿನಿಯರ ಮಾತು, ಏನೂ ನಡೆಯುವುದಿಲ್ಲ. ಅಲ್ಲಿ ಒಬ್ಬರು ಇದ್ದಾರೆ, ಹಣ ಕೊಡದೆ ಯಾವ ಟ್ರಾನ್ಸ್‌ಫರ್ಸ್ ಕೂಡ ಮಾಡುತ್ತಿಲ್ಲ, ಪೇಪರಿಗೆ ಸೈನ್ ಕೂಡ ಮಾಡುವುದಿಲ್ಲ. ನೀವೇ, ಅದರಿಂದ ಮಾಡಿದರೆ, ತಂಟೆ, ದೂರು ಎಲ್ಲಾ ತಪ್ಪಿಹೋಗುತ್ತದೆ. ಇದು Major irrigation Chief Engineer ಆಫೀಸಿನಲ್ಲಾಗಲೀ Chief Engineer General office ನಲ್ಲಾಗಲೀ ಇಲ್ಲ. C & B

(ಶ್ರೀಮತಿ ನಾಗರತ್ನಮ್ಮ)

ಆಫೀಸಿನಲ್ಲಿ ನಡೆಯುತ್ತಿದೆ. ಇದು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಆದ್ದರಿಂದ ಇನ್ನಾದರೂ ದಯವಿಟ್ಟು ಅಂಥದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳುತ್ತೇನೆ.

ಕೊನೆಯದಾಗಿ ಒಗರಗಟ್ಟ ಪ್ರೊಜೆಕ್ಟ್ ಆಗಿದೆ. ಅಲ್ಲಿ ಮಳೆ ಇಲ್ಲದೆ ನೀರು ಸಾಕಾಗುತ್ತಾ ಇಲ್ಲ. ಅದಕ್ಕೆ ಆಂಜನೇಯನ ದೇವಸ್ಥಾನದ ಹತ್ತಿರ ಹರಿಯುತ್ತಾ ಇರುವ ನೀರನ್ನು ಇದಕ್ಕೆ ಸೇರಿಸಿ ಕೊಂಡರೆ, ಈ ಟ್ಯಾಂಕಿಗೆ ಸಹಾಯವಾಗುತ್ತದೆ. ಈ ವಿಚಾರದಲ್ಲಿ ಸುಮಾರು ಅರ್ಜಿಗಳು ಬಂದಿವೆ. ಅದನ್ನು ದಯವಿಟ್ಟು ಪರಿಶೀಲಿಸಿ, ಕೆಲಸಮಾಡಿಸಿ ಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ಮಾತನಾಡಲು ಅವಕಾಶ ಕೊಟ್ಟದಕ್ಕಾಗಿ, ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದೆ ಮಂಡಿಸಿರತಕ್ಕಂತಹ ಬೇಡಿಕೆಗಳ ಚರ್ಚೆ ಮಾಡತಕ್ಕ ಕಾಲದಲ್ಲಿ ಸರ್ಕಾರ ತನ್ನ ಕರ್ತವ್ಯವನ್ನು ಎಷ್ಟು ಮಟ್ಟಿಗೆ ಸಾಧಿಸಿದೆ ಎನ್ನುವುದರ ಬಗ್ಗೆ ಈ ಮಾನ್ಯ ಸಭೆಯ ಗಮನವನ್ನು ಸೆಳೆಯ ಬಯಸುತ್ತೇನೆ.

ಇವತ್ತು ರಾಜ್ಯದ ಸುಮಾರು 50 ಪರ್‌ಸೆಂಟ್ ಹಣವನ್ನು ಇದಕ್ಕೆ ಖರ್ಚು ಮಾಡುತ್ತಿದ್ದಾರೆ. ಇವತ್ತಿನ ದಿವಸ ಕಾಲವಕಾಶ ಇಲ್ಲದಿರುವುದರಿಂದ ಅನೇಕ ವಿಷಯಗಳನ್ನು ಚರ್ಚೆ ಮಾಡ ಬೇಕಾಗಿದ್ದರೂ, ಕೇವಲ ಕೆಲವು ಗಹನವಾದ ವಿಷಯಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡಲಚ್ಛಿಸು ತ್ತೇನೆ. ಇವತ್ತಿನ ದಿವಸ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕಳೆದ ಸಭೆಯಲ್ಲಿ ಶ್ರೀಮಾನ್ ಚನ್ನಬಸಪ್ಪನವರು, ಹಾಗೂ ಸರ್ಕಾರದ ವತಿಯಿಂದ ಮಂತ್ರಿಯವರೂ, ಚರ್ಚೆಯ ಕಾಲದಲ್ಲಿ ಪಾತ್ರವನ್ನು ವಹಿಸಿದ್ದಾರೆ. ಈ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳಬೇಕು, ನಮ್ಮ ಹಕ್ಕು ಏನಿದೆ, ಅದನ್ನು ಕಾಯ್ದುಕೊಳ್ಳಬೇಕು, ಮತ್ತು ಇದರಿಂದ ನಮ್ಮ ಸಂಸ್ಥಾನಕ್ಕೆ ಅನ್ಯಾಯವಾಗ ಬಾರದು ಎಂದು ಮಾನ್ಯ ಮುಖ್ಯ ಮಂತ್ರಿಯವರಿಂದ ಹಿಡಿದು, ಲೋಕೋಪಯೋಗಿ ಶಾಖೆಯವರು ಹಾಗೂ ಎಲ್ಲಾ ಮಾನ್ಯ ಸದಸ್ಯರೂ ಈ ವಿಷಯದಲ್ಲಿ ಒಂದಲ್ಲ ಒಂದು ರೀತಿಯಿಂದ, ಒತ್ತಾಯ ಹಾಕಿದ್ದಾರೆ, ಮತ್ತು ಅವರು ತಮ್ಮ ಕರ್ತವ್ಯ ಪಾಲನೆ ಮಾಡತಕ್ಕದ್ದರಲ್ಲಿ ಹಿಂದೆ ಹೋಗಿಲ್ಲ. ಇವತ್ತಿನ ದಿವಸ ಬಜೆಟಿನಲ್ಲಿ ಹಣ ನೋಡಿದರೆ, ಕೊಟ್ಟಂತಹ ಮಾತು ಬಹುಶಃ ನೀವು ಮರೆತಿದ್ದೀರಿ ಎಂದು ಕಾಣುತ್ತದೆ. 1966ನೇ ಇಸವಿಯಲ್ಲಿ ಈ ಕಾವೇರಿ ನೀರಿನ ಬಗ್ಗೆ ಒಂದು ರಿಸೊಲ್ಯೂಶನ್ ತಂದಂತಹ ಕಾಲದಲ್ಲಿ, ತಾವು ಕೊಟ್ಟ ಉತ್ತರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 106 ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತಿನ ದಿವಸ ಕೊಟ್ಟಿರತಕ್ಕಂತಹ ಹಣ 52 ಕೋಟಿ. ನಿಮ್ಮ ಮಾತಿನಲ್ಲಿ ನಂಬಿಕೆ ಇದ್ದರೆ, ಇವತ್ತು ಈ ಮೇಜರ್ ಮತ್ತು ಮೀಡಿಯಂ ಇರಿಗೇಶನ್ ಏನಿದೆ, ಇದರ ಹಣವನ್ನು ದ್ವಿಗುಣಗೊಳಿಸದೆ ಹೋದರೆ, ಪ್ರಾಯಶಃ ನಮ್ಮ ಸಂಶಯ ಬಗೆಹರಿಸುವುದಕ್ಕಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಕಾವೇರಿ ನೀರಿನ ಬಗ್ಗೆ ಶ್ರೀ ನಂಜೇ ಗೌಡರು, ಮಾತನಾಡಿದ್ದಾರೆ, ಶ್ರೀಮಾನ್ ವಿ. ಎನ್. ಪಾಟೀಲರು ಮಾತನಾಡಿದ್ದಾರೆ, ಮತ್ತು ಕಾವೇರಿ ನೀರಿನ ಬಗ್ಗೆ ಅನೇಕ ಸಾರಿ ಇಲ್ಲಿ ಚರ್ಚೆ ಮಾಡಿದ್ದಾರೆ. ಕಳೆದ 5 ವರ್ಷಗಳಲ್ಲಿ ಒಂದು ಸಾರಿ ಖಾಸಗೀ ರಿಸೊಲ್ಯೂಶನ್ ತಂದು ವಾಪಸ್ಸು ತೆಗೆದುಕೊಂಡೆ, ಇನ್ನೊಂದು ಸಾರಿ ಯುನಾನಿಮಸ್ ಆಗಿ ಅಂಗೀಕೃತವಾಗಿದೆ. ಇವತ್ತು ನಾನಾದರೂ ಹೇಳುತ್ತೇನೆ, ಕಳೆದ ಸಾರಿ ನಾನ್, ಆಫೀಯಲ್ ರಿಸೊಲ್ಯೂಶನ್ ಒಪ್ಪಿಕೊಂಡ ಕಾಲದಲ್ಲಿ ಒಂದು ಟೆಕ್ನಿಕಲ್ ಕಮಿಟಿ ನೇಮಕ ಮಾಡಿ 1924ರ ಅಂಗ್ರಿಮೆಂಟ್‌ನಲ್ಲಿರತಕ್ಕ ಲೋಪದೋಷಗಳನ್ನು ಮತ್ತು ನಮ್ಮ ನೀರಿನ ಹಕ್ಕನ್ನು ಕಾಯತಕ್ಕ ಬಗ್ಗೆ ನಮ್ಮ ನಿಲುವೇನೆಂಬುದನ್ನು ತಯಾರು ಮಾಡುವ ಬಗ್ಗೆ ಒಂದು ಕಮಿಟಿ ಯನ್ನು ನೇಮಕ ಮಾಡುತ್ತೇವೆಂದು ತಿಳಿಸಿದ್ದೀರಿ. ಈಗ ಸಂಬಂದಪಟ್ಟ ಚೀಫ್ ಇಂಜಿನಿಯರ್ ರಿಟ್ಯಾರ್ ಆಗಿದ್ದಾರೆಂದು ಪತ್ರಿಕೆಯಲ್ಲಿ ಓದಿದ್ದೇನೆ. ನೀವು ಆ ಕಾರ್ಯವನ್ನು ಎಷ್ಟು ಮಟ್ಟಿಗೆ ಮುಂದುವರಿಸಿದ್ದೀರಿ ಎಂಬುದು ನನ್ನ ಪ್ರಶ್ನೆ. ಆ ಕಮಿಟಿಯಿಂದ ಎಷ್ಟೆಷ್ಟು ಕೆಲಸವಾಗಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಇವತ್ತಿನದಿವಸ ಕಾವೇರಿ ಬೇಸಿನ್ ವಾಟರನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಮಗೆ ಅನೇಕ ಅಡಚಣೆಗಳಿವೆ. ಈ ವಿಚಾರ ಅಗ್ರಿಮೆಂಟಿನಿಂದ ಗೊತ್ತಾಗುತ್ತದೆ. ಏನು ಅಡಚಣೆಗಳು ಇದ್ದರೂ ಸಹ ನಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಮಗಾಗಿರುವ ಅಡಚಣೆಗಳ ಬಗ್ಗೆ ಏನಾದರು ಒಂದು ನಿಲುವನ್ನು ತಾಳದೆ ಹೋದರೆ ಮುಂದೆ ನಮಗೆ ಹಾನಿಯಾಗುತ್ತದೆ. ಹಾರಂಗಿ ಯೋಜನೆಯ ಬಗ್ಗೆ ಶ್ರೀ ನಂಜೇಗೌಡರು

ಪ್ರಸ್ತಾಪಮಾಡಿದರು. ಆ ಯೋಜನೆಯನ್ನು ಕಟ್ಟುವುದಕ್ಕೆ ಕೇಂದ್ರಸರ್ಕಾರದವರು ಏತಕ್ಕೆ ಇದುವರೆಗೆ ಟೆಕ್ನಿಕಲ್ ಕ್ಲಿಯರೆನ್ಸ ಕೊಟ್ಟಿಲ್ಲ? ಆ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಏತಕ್ಕೆ ಪ್ರತಿಭಟನೆ ಸಲ್ಲಿಸಲಿಲ್ಲವೆಂದು ಪ್ರಸ್ತಾಪ ಮಾಡಿದರು. ಷೆಡ್ಯೂಲ್ ರಿವರ್ಸ್ ನೀರನ್ನು ಎಷ್ಟು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ, ನಾನ್ ಷೆಡ್ಯೂಲ್ ನೀರನ್ನು ಎಷ್ಟು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ನಮ್ಮ ಕಾವೇರಿ ಬೇಸಿನಲ್ಲಿ ಕೊನೆಯ ಹಂತದಲ್ಲಿ ಲೆಕ್ಕಾಚಾರ ಹಾಕುವುದಾದರೆ 435 ಟಿ.ಎಂ.ಸಿ.ನೀರು ಸಿಗುತ್ತದೆ. ಇದರಲ್ಲಿ ಮದ್ರಾಸಿನವರಿಗೆ 195—200 ಟಿ.ಎಂ.ಸಿ.ಏಫ್‌ಟಿ ನೀರನ್ನು ಕೊಟ್ಟರೆ ಸಾಕು ಎಂದು ತಜ್ಞರ ಅಭಿಪ್ರಾಯ. ಮದ್ರಾಸಿನವರು ಕಳೆದ 38 ವರ್ಷಗಳಿಂದ 380 ರಿಂದ 400 ಟಿ.ಎಂ.ಸಿ. ಯವರೆಗೆ ಕಾವೇರಿ ಬೇಸಿನ್ ನೀರನ್ನು ಉಪಯೋಗಮಾಡಿಕೊಳ್ಳುತ್ತಿದ್ದಾರೆ. ಕಾವೇರಿ ಬೇಸಿನ್ ನೀರಿನಿಂದ ಮದ್ರಾಸ್ ರಾಜ್ಯದಲ್ಲಿ ಸುಮಾರು 19 ಲಕ್ಷ ಎಕರೆಗೆ ನೀರಾವರಿಯಾಗುತ್ತಿದೆ. ನಮಗೆ ಸ್ವರಾಜ್ಯ ಬಂದಾಗಿನಿಂದಲೂ, ಆಡಳಿತಕ್ಕೆ ಬಂದ ಎಲ್ಲರೂ ಸಹ ಕಾವೇರಿ ಬೇಸಿನ್ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ದಾರಿ ತಪ್ಪಿದ್ದಾರೆ. ಶ್ರೀಮಾನ್ ಚೆನ್ನಬಸಪ್ಪನವರು ಇಲ್ಲಿ ಇದ್ದರೆ ಅವರಿಗೂ ಹೇಳುತ್ತಿದ್ದೆ. ಅವರು ಸಹ ಈ ವಿಚಾರದಲ್ಲಿ ತಪ್ಪಿತಸ್ಥರಾಗಿದ್ದಾರೆ. ತಾರೀಖು 4-8-1958ರಲ್ಲಿ ಕೇಂದ್ರದಲ್ಲಿ ನೀರಾವರಿ ಮಂತ್ರಿಗಳಾಗಿದ್ದ ಹಫೀಜ್ ಮಹಮದ್ ಇಬ್ರಾಹಿಂ ಅವರು ನಮ್ಮ ರಾಜ್ಯಕ್ಕೆ ಒಂದು ಕಾಗದವನ್ನು ಬರೆದರು. ಏನೆಂದರೆ ಸ್ಟೇಟ್ ರೀಆರ್ಗನೈಜೇಷನ್ ಆಕ್ಟಿನ ಒಂದು ಪರಿಮಿತಿಯೊಳಗೆ ಇನ್‌ಟರ್ ಸ್ಟೇಟ್ ಷೆಡ್ಯೂಲ್ ರಿವರ್ಸ್ ಏನೇನಿವೆ, ಅವುಗಳನ್ನು 1924ನೇ ಅಗ್ರಿಮೆಂಟ್‌ನ್ನು ಪುನರ್‌ವಿಮರ್ಶೆ ಮಾಡಬೇಕಾಗಿದೆ, ಆ ಬಗ್ಗೆ ನಿಮ್ಮ ರಾಜ್ಯ ಸರ್ಕಾರದ ನಿಲುವೇನು ಎಂಬ ಬಗ್ಗೆ ಕಾಗದ ಬರೆದರು ; ಅಂದರೆ ಕಾವೇರಿ ಬೇಸಿನ್‌ನೊಳಗೆ ಬರುವ ಕೊಳ್ಳೆಗಾಲ ಏರಿಯಾ ಕೊಡಗು ಕ್ಯಾಚ್‌ಮೆಂಟನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ ನಿಮ್ಮ ಸರ್ಕಾರದ ನಿಲುವನ್ನು ತಿಳಿಸಬೇಕೆಂದು ಅವರು ಕಾಗದ ಬರೆದರು. ಮತ್ತೊಂದು ಕಾಗದ ತಾ 28-4-1961ರಲ್ಲಿ ಬರೆದರು. ಆಗ ಶ್ರೀಮಾನ್ ಜತ್ತಿಯವರು ಮುಖ್ಯ ಮಂತ್ರಿಗಳಾಗಿ ಬರೆದರು. ಕೇಂದ್ರ ಸರ್ಕಾರದಿಂದ ಬಂದ ಕಾಗದಕ್ಕೆ ಇವರು ಉತ್ತರ ಕೊಡಲಿಲ್ಲ. ಕೇಂದ್ರದ ನೀರಾವರಿ ಮಂತ್ರಿಗಳು ಮತ್ತೆ ಡಿ.ಒ. ಕಾಗದವನ್ನು ನಮ್ಮ ಸರ್ಕಾರಕ್ಕೆ ಬರೆದರು, ಏನೆಂದರೆ, ನಾನು ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕಾಮರಾಜರೊಡನೆ ಮಾತನಾಡಿದ್ದೇನೆ, ಅಗ್ರಿಮೆಂಟನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ ನಿಮ್ಮ ನಿಲುವು ಏನು ಎಂಬುದರ ಬಗ್ಗೆ ಅಂಕಿಅಂಶಗಳೊಡನೆ ದೆಹಲಿಗೆ ಬರುವುದಾದರೆ ಒಂದು ತಾರೀಖನ್ನು ಫಿಕ್ಸ್ ಮಾಡುತ್ತೇನೆ ಎಂದು. ಈ ಎರಡು ಕಾಗದಗಳಿಗೂ ನಮ್ಮ ಸರ್ಕಾರದವರು ಉತ್ತರ ಕೊಡಲಿಲ್ಲ. ಕೇಂದ್ರ ಸರ್ಕಾರದವರು ಬರೆದ ಕಾಗದಕ್ಕೆ ಇವರು ಬೆಲೆ ಕೊಡಲಿಲ್ಲ. ಇದೇ ವಿಚಾರದಲ್ಲಿ 1961ರಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಒಂದು ಡಿ.ಒ. ಕಾಗದವನ್ನು ಬರೆದಾಗ ಅದಕ್ಕೂ ಸಹ ಉತ್ತರ ಕೊಡಲಿಲ್ಲ. ಆ ಮೂಲಕ ನಮಗೆ ಆಗುವ ಅನುಕೂಲವನ್ನು ತಪ್ಪಿಸುವುದರಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ಚೆನ್ನಬಸಪ್ಪನವರು ಮತ್ತು ಶ್ರೀಮಾನ್ ವೀರಣ್ಣಗೌಡರು ಹೊಣೆಯಾಗಿದ್ದಾರೆ. ಕೇವಲ ವೈಯುಕ್ತಿಕ ಟೀಕೆಯಿಂದ ಈ ವಿಚಾರ ಹೇಳುತ್ತಿಲ್ಲ. ಈ ವಿಚಾರದಲ್ಲಿ ಕರ್ತವ್ಯಭ್ರಷ್ಠರಾಗಿದ್ದಾರೆಂದು ನೋವಿನ ಮನಸ್ಸಿನಿಂದ ಹೇಳುತ್ತಿದ್ದೇನೆ. ಸ್ಥೂಲವಾಗಿ ಈ ಅಗ್ರಿಮೆಂಟ್ ಬಗ್ಗೆ ವಿಚಾರ ಮಾಡಿದರೆ, 1974ನೇ ಇಸವಿ ಕಳೆದ ಮೇಲೆ ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕಾವೇರಿ ಬೇಸಿನ್ ವಾಟರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ತಾಳ್ಮೆ ತಳೆದಿರಿ. 1974ರೊಳಗೆ ನಮ್ಮ ಪಾಲಿಗಿರುವ ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗುತ್ತದೆಯೇ ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಬೇಕು ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕಾಗಿದೆ. 1974ನೆ ಇಸವಿಯೊಳಗೆ ನಮ್ಮ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ, ನಮ್ಮ ಹಕ್ಕನ್ನು ಉಳಿಸಿಕೊಳ್ಳುವುದು ಕಷ್ಟವಾಗಬಹುದು ಎಂದು ತಮ್ಮ ಮುಂದೆ ನಿವೇದನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ 125 ಟಿ.ಎಂ.ಸಿ. ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಅಧಿಕಾರವಿದೆ. ನಾನ್ ಷೆಡ್ಯೂಲ್ ರಿವರ್ಸ್ ನೀರನ್ನು ಬೇರೆ ರಾಜ್ಯದವರು ಉಪಯೋಗಿಸಿಕೊಳ್ಳುವುದಕ್ಕೆ ಅಧಿಕಾರವಿಲ್ಲವೆಂದು ಶ್ರೀ ನಂಜೇಗೌಡರು ಹೇಳಿದರು. ಮೈನರ್, ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಮೂಲಕ ನಾವು ಈಗ 117 ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದೇವೆ. ಇನ್ನೂ 116 ಟಿ.ಎಂ.ಸಿ. ಎಫ್‌ಟಿ. ನೀರನ್ನು ಉಪಯೋಗಿಸಿಕೊಳ್ಳುವ ಅವಕಾಶ ನಮಗೆ ಇದೆಯೆಂದು ಗೊತ್ತಾಗುತ್ತದೆ. 1974ರೊಳಗೆ ಈ ನೀರನ್ನು ನಾವು ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಮದ್ರಾಸ್‌ನವರು ತಮಗೇ ಹಕ್ಕಿದೆಯೆಂದು ಪ್ರತಿಭಟನೆ ಸಲ್ಲಿಸುತ್ತಾರೆಂದು ಹೇಳಬೇಕಾಗಿದೆ. ನಮಗೆ ಹಕ್ಕಿರುವ ನೀರನ್ನೆಲ್ಲಾ ಉಪಯೋಗಿಸಿಕೊಳ್ಳುವುದಾದರೆ 6 ಲಕ್ಷ ಎಕರೆಗೆ ನೀರಾವರಿಯಾಗುತ್ತದೆಂದು ಸ್ಪಷ್ಟಪಡಿಸಿದ್ದಾರೆ, ಇದಕ್ಕೆ 60 ಕೋಟಿ ರೂಪಾಯಿಗಳು ಬೇಕಾಗು

(ಶ್ರೀ ಎಚ್. ಡಿ. ದೇವೇಗೌಡ)

ತ್ತದೆ. ಆದರೆ ಸರ್ಕಾರದವರು ಇವತ್ತಿನದಿವಸ ಹೇಮಾವತಿ ಯೋಜನೆಗೆ 35 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ, ಹಾರಂಗಿ ಯೋಜನೆಗೆ 4 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ, ಕಂಬದಕಡ ಯೋಜನೆಗೆ ಹಣವನ್ನೇ ಒದಗಿಸಿಲ್ಲ. ಈ ಯೋಜನೆಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸಿದ್ದರೆ ನಮಗೆ ಸಹಾಯ ಮಾಡಿದಂತಾಗುವುದಿಲ್ಲವೆಂಬ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ತಜ್ಞರ ಸಮಿತಿಯ ವರದಿ ಏನಿದೆ, ಅದರಂತೆ ತಾವು ಸಂಪೂರ್ಣ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು ಮತ್ತು 1974 ರೊಳಗೆ ಈ ಬಗ್ಗೆ ಸರ್ಕಾರದವರು ಏನು ನಿಲುವು ತೆಗೆದುಕೊಳ್ಳುತ್ತಾರೆ ಎಂಬುದರ ಬಗ್ಗೆ ಸಭೆಗೆ ಸ್ಪಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ ಇದು ಅಗ್ರಿಮೆಂಟ್ ಆಗುವುದಿಲ್ಲ. ಅಗ್ರಿಮೆಂಟನ್ನು ಸ್ಕ್ರ್ಯಾಪ್ ಮಾಡಬೇಕಾಗುತ್ತದೆ. ಸ್ಟೇಟ್ ರೀಆರ್ಗನೈಜೇಷನ್ ಪರಿಮಿತಿಯೊಳಗೆ ಯಾವ ಕ್ರಮವನ್ನು ತೆಗೆದುಕೊಳ್ಳದೆ ಸರ್ಕಾರದವರು ಉದಾಶೀನದಿಂದ ನಡೆಯುತ್ತಿದ್ದಾರೆ. ಮೈಸೂರು ರಾಜ್ಯದವರಿಗೂ ಮದ್ರಾಸ್ ರಾಜ್ಯದವರಿಗೂ 1924ರ ಅಗ್ರಿಮೆಂಟ್ ಪ್ರಕಾರ ನಮ್ಮ ರಾಜ್ಯಕ್ಕೆ ಬಹಳ ಲೋಪವಾಗಿದೆಯೆಂದು ಹೇಳುತ್ತೇನೆ. ಕೇರಳ ಸರ್ಕಾರ ಕಬಿನಿ ಯೋಜನೆಯನ್ನು ಕಟ್ಟುವ ವಿಚಾರದಲ್ಲಿ ತಕರಾರು ಹಾಕಿದ್ದಾರೆಂದು ನನಗೆ ತಿಳಿದುಬಂದಿದೆ. ಲಿಫ್ಟ್ ಇರಿಗೇಷನ್ ಬಗ್ಗೆ 1924ರ ಅಗ್ರಿಮೆಂಟ್ ಪ್ರಕಾರ ನಮಗೆ ಹೆಚ್ಚಿನ ಅನುಕೂಲವಾಗಿದೆಯೆಂದು ಸರ್ಕಾರದವರು ಹೇಳಿದ್ದಾರೆ, ಅದು ಹೇಗೆ ಎಂದು ಹೇಳಬೇಕು. ಇನ್ನೂ ಉಳಿದಿರುವ 116 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಯಾವ ಯಾವ ಯೋಜನೆಗಳಿಂದ ಸಾಧ್ಯವಾಗುತ್ತದೆಯೋ, ಆ ಯೋಜನೆಗಳಿಂದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು 1966ರ ಮಾರ್ಚ್ ತಿಂಗಳಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಹೊಳೆನರಸೀಪುರದಲ್ಲಿ ಎಷ್ಟು ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಂಡಿದ್ದೀರಿ ಮತ್ತು ಎಷ್ಟು ಸ್ಕೀಮ್‌ಗಳು ಮಂಜೂರಾಗಿವೆ ಎಂದು ಕೇಳಿದಕ್ಕೆ ಅವರು ಕೊಟ್ಟಿರುವ ಉತ್ತರ ನನ್ನಲ್ಲಿರುವ ಒಂದು ಪಟ್ಟಿಗೆ ಸರಿಹೊಂದುವುದಿಲ್ಲ. ಸರ್ಕಾರದಿಂದ ಬರುವ ಉತ್ತರಕ್ಕೆ ಒಂದು ಮಿತಿ ಇರಬೇಕು. ಸರ್ಕಾರದ ಉತ್ತರಕ್ಕೆ ಒಂದು ಸ್ಪಷ್ಟವಾದ ಘನತೆ ಗೌರವ ಇರುತ್ತದೆ. ಆದರೆ ಈ ತರಹದ ತಪ್ಪು ಉತ್ತರಗಳನ್ನು ಕೊಡಬಾರದು.

Sri ALUR HANUMANTHAPPA (Deputy Minister for Minor Irrigation).—The Member has asked what are all lift irrigation schemes. The hon. Member has given a list; the estimates for them are being finalised.

6–00 P.M.

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೃಷ್ಣಾ ಬೇಸಿನ್ ಬಗ್ಗೆ ಒಂದು ವಿಷಯ ಪ್ರಸ್ತಾಪಿಸಬೇಕಾಗಿದೆ. ಮತ್ತು ತಮ್ಮನ್ನು ಇದರ ಬಗ್ಗೆ ಬಹಳ ಕಟುವಾಗಿ ಟೀಕೆ ಮಾಡಬೇಕಾಗಿದೆ. ತಾವು ಒಂದು ಸಾರಿ ಒಂದು ರೀತಿ ಈ ಸಭೆಯಲ್ಲಿ ಉತ್ತರ ಕೊಡುತ್ತೀರಿ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೋಗಿ ನೋಡಿ ಅವರು ಹೇಳಿದಂತೆ ಎರಡನೇ ಪ್ಲಾನಿನಲ್ಲಿರುವ ಎಲ್ಲ ಕೆಲಸಗಳನ್ನೂ ಮುಗಿಸಬೇಕು ಹಾಗೆ ಮುಗಿಸದೇ ಇದ್ದವರ ಮೇಲೆ ತಕ್ಕ ಕ್ರಮ ತೆಗೆದುಕೊಂಡು ಸರಿಯಾದ ರೆಸ್‌ಪಾನ್‌ಸಿಬಿಲಿಟಿ ಫಿಕ್ಸ್ ಮಾಡಬೇಕು ಎಂದು ಹೇಳಿದ್ದರೂ ಕೂಡ ತಾವು ಬೇರೆ ರೀತಿಯಾಗಿ ಒಂದು ಆರ್ಡರು ಹೊರಡಿಸಿ ಆ ಕೆಲಸಗಳಾಗದಂತೆ ಮಾಡುತ್ತೀರಿ. ಹೀಗಾದರೆ ಹೇಗೆ ? ಇದರಿಂದ ಏನೇನು ಅನಾಹುತಗಳಾಗುತ್ತವೆ ಎನ್ನುವುದನ್ನು ತಾವು ಯೋಚನೆ ಮಾಡಿದ ಹಾಗೆ ಕಾಣುತ್ತಿಲ್ಲ ಎಂದು ನಾನು ಇಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ನಿಮ್ಮ ಅಧಿಕಾರಿಗಳು ಮಾಡುತ್ತಿರುವ ಕೆಲಸವನ್ನು ನೋಡಿದರೆ ತಾವು ಎಲ್ಲ ಕೆಲಸಗಳನ್ನೂ ಸರಿಯಾಗಿ ಮುಗಿಸುತ್ತೀರೋ ಇಲ್ಲವೋ ಎನ್ನುವ ಶಂಕೆ ಕೂಡ ಬರುತ್ತದೆ. ಈ ನೀರಿನ ವಿವಾದಗಳ ಬಗ್ಗೆ ಮಾತನಾಡುತ್ತಾ ಶ್ರೀಮಾನ್ ನಂಜೇಗೌಡರು ಇಲ್ಲಿ ಹೇಳುತ್ತಾ ಕೇಂದ್ರದ ನೀರಾವರಿ ಮಂತ್ರಿಗಳು ಇದಕ್ಕಾಗಿ ರಾಜೀನಾಮೆ ಕೊಡಬೇಕು ಎಂದೂ ಹೇಳಿದರು. ನಾವು ಎಷ್ಟು ಕಟುವಾಗಿ ಟೀಕೆ ಮಾಡಿದರೂ ಕೂಡ ನಮಗೆ ಎಷ್ಟು ನ್ಯಾಯ ದೊರೆಯಬೇಕೋ ಅಷ್ಟು ನ್ಯಾಯ ದೊರೆಯುತ್ತಿಲ್ಲ. ಈಚೆಗೆ ಆಂಧ್ರದ ಮುಖ್ಯಮಂತ್ರಿಗಳು ಒಂದು ಕಡೆ ಹೇಳಿಕೆ ಕೊಡುತ್ತಾ ನಮ್ಮಲ್ಲಿರುವ ನಾಗಾರ್ಜುನ ಸಾಗರದ ಯೋಜನೆಯಲ್ಲಿ ಒಂದನೇ ಹಾಗೂ

ಎರಡನೇ ಸ್ಟೇಜು ಎನ್ನುವುದೇ ಇಲ್ಲ ಮತ್ತು ಎಲ್ಲವೂ ಒಂದೇ ರೀತಿ ಇದೆ ಮತ್ತು ಇದಕ್ಕೆ ನಾವು ಒಪ್ಪಿಯೂ ಇಲ್ಲ ಎಂದು ಹೇಳುತ್ತಾರೆ. ಕೇವಲ ಹಣ ಕಾಸಿನ ವಿಂಗಡಣೆ ಬಗ್ಗೆ ಒಂದನೇ ಸ್ಟೇಜು ಹಾಗೂ ಎರಡನೇ ಸ್ಟೇಜು ಎಂದು ಹೇಳಿದೆವೇ ಹೊರತು ಬೇರೆ ಏನೂ ಹೇಳಿಲ್ಲ. ಇವೆಲ್ಲಾ ಏನು ತೋರಿಸುತ್ತದೆ ಎಂದರೆ ನಿಮ್ಮಲ್ಲಿರುವ ನೀತಿಯನ್ನು ತೋರಿಸುತ್ತದೆ. 1963ರಲ್ಲಿ ಗುಲಾಟಿ ಕಮಿಷನ್ನಿನವರ ಪ್ರಕಾರ ನಿಮಗೆ ಏನು ಅಲೊಕೇಷನ್ ಬಂದಿದೆ ಎಂದರೆ 600 ಟಿ. ಎಂ. ಸಿ. ಯಷ್ಟು. ಆ ಗುಲಾಟಿ ಕಮಿಷನ್ನಿನವರು ಆರು ತಿಂಗಳಿಗೆ ಮೊದಲೇ ಗೋದಾವರಿ ಬೇಸಿನ್‌ನಿಂದ ನೀರನ್ನು ಡೈವರ್ಟ್ ಮಾಡಲು ಪ್ರಿಲಿಮಿನರಿ ವರ್ಕ್ಸ್‌ಗಳನ್ನು ತಯಾರು ಮಾಡಿ ಒಂದು ನಿರ್ಣಯ ತೆಗೆದುಕೊಂಡಿತ್ತು. ಅದನ್ನೂ ಅಂತಿಮವಾಗಿ ತೀರ್ಮಾನ ಮಾಡಿದ ಮೇಲೆ ನಾಗಾರ್ಜುನ ಸಾಗರದ ಎರಡನೆಯ ಹಂತಕ್ಕೆ ಕ್ಲಿಯರೆನ್ಸ್ ದೊರೆತ ಮೇಲೆ ಅದನ್ನು ಮಾಡಬೇಕು ಎಂದು ಗುಲಾಟಿ ಕಮಿಷನ್ನಿನ ರಿಪೋರ್ಟಿನಲ್ಲಿತ್ತು. ಇವೊತ್ತಿನ ದಿವಸ ಸರಕಾರ ಸುಮಾರು ನಾಲ್ಕು ವರ್ಷಗಳಾದರೂ ಅದರ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೇ ಇರಲು ಕಾರಣವೇನು ? ಗೋದಾವರಿ ನೀರನ್ನು ಡೈವರ್ಟ್ ಮಾಡಿಕೊಂಡು ನಾಗಾರ್ಜುನಸಾಗರದ ಎರಡನೇ ಸ್ಟೇಜನ್ನು ಪ್ರಾರಂಭ ಮಾಡಲು ಪರ್ಮಿಷನ್ನು ಕೂಡ ಕೊಡುತ್ತಾರೆ ಎಂದು ಆಂಧ್ರದವರು ಹೇಳುತ್ತಿದ್ದಾರೆ. ಅಲ್ಲದೆ ಈ ಡೈವರ್ಷನ್ ಪ್ಲಾನು ಆಗದೇ ಇದ್ದರೂ ಚಿಂತೆ ಇಲ್ಲ. ಒಂದು ಅವರು ಕೆಲಸಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ ಮತ್ತು ಯಾವ ಯಾವ ಕಾರ್ಯಕ್ರಮಗಳನ್ನು ತಿಳಿದುಕೊಳ್ಳಬೇಕೋ ಅವನ್ನೆಲ್ಲಾ ಲೀಗಲ್ ಆಗಿ ತೆಗೆದುಕೊಳ್ಳಬೇಕೇ ಬೇಡವೇ ಎಂಬುದರ ಬಗ್ಗೆ ತಾವು ಎಷ್ಟೇ ಮಾಡಿದರೂ ನಿಮ್ಮ ಕೈಯ್ಯಲ್ಲಿ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಸೆಂಟರಿನ ಮೇಲೆ ಒತ್ತಾಯ ಮಾಡಿ ಅದು ಸಾಧ್ಯವಾಗದೇ ಇದ್ದರೆ ಇದನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಬೇಕೋ ಏನೋ ಎಂದು ಇನ್ನೂ ಯೋಚನೆ ಮಾಡುತ್ತಿದ್ದೀರಿ. ಅಲ್ಲದೆ ಇಲ್ಲಿಯವರೆಗೂ ತಾವು ಯಾವ ನಿಲುವನ್ನೂ ಸರಿಯಾಗಿ ತೆಗೆದುಕೊಂಡಿಲ್ಲ. ಈಗಲಾದರೂ ಒಂದು ಧೃಡವಾದ ನಿಲುವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ನಾನು ಇಲ್ಲಿ ಒತ್ತಾಯ ಮಾಡುತ್ತೇನೆ. ಇಲ್ಲದೇ ಇದ್ದರೆ ಟೆಕ್ನಿಕಲ್ ಆಗಿ ಇದರ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇದೂ ಅಲ್ಲದೆ ಇನ್ನೂ ಮಧ್ಯ ಪ್ರದೇಶದಲ್ಲಿ ಒಂದು ದೊಡ್ಡ ಡ್ಯಾಂನ್ನು ಕಟ್ಟಿ ಅದನ್ನು ಕೆಲವು ಷರತ್ತುಗಳ ಮೇಲೆ ಗೋದಾವರಿ ಡೈವರ್ಷನ್ನಿಗೆ ಒಪ್ಪಬೇಕೆಂದು ಆಂಧ್ರದವರು ಹೇಳಿರುವುದು ನನಗೆ ಗೊತ್ತಾಗಿದೆ. ಹೀಗಿರುವಾಗ ಗೋದಾವರಿ ಡೈವರ್ಷನ್ ಮಾಡತಕ್ಕ ಕಾಲದಲ್ಲಿ ಟೆಕ್ನಿಕಲ್ ಫೀಸಿಬಿಲಿಟಿ ಇದೆಯೇ ಮತ್ತು ಯಾವತ್ತೂ ಸ್ಟೇಟ್ ಟು ಸ್ಟೇಟ್ ಇದರೊಳಗೆ ಮಧ್ಯ ಪ್ರವೇಶಿಸಲು ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಗೋದಾವರಿ ಡೆಲ್ಟಾ ಇರಿಗೇಷನ್ನಿಗೆ ಶೇಕಡ ನೂರರಷ್ಟು ನೀರು ಕೊಟ್ಟು ಉಳಿದ ನೀರು ಹೊರಗೆ ಹೋಗಲು ಅವಕಾಶವಿದೆ ಎಂದು ಹೇಳುತ್ತಾರೆ ಮತ್ತು ಇದು ಒಂದು ಡಿಪೆಂಡಬಿಲಿಟಿಯ ಕ್ಲಿಷ್ಟ ಸಮಸ್ಯೆ ಕೂಡ ಆಗಿದೆ. ಈ ಮಧ್ಯೆ ಕೃಷ್ಣಾನದಿಯ ನೀರನ್ನು ಪಶ್ಚಿಮಕ್ಕೆ ತಿರುಗಿಸಿಕೊಂಡು ಮಹಾರಾಷ್ಟ್ರದವರು ಕೋಯ್ನಾ ಯೋಜನೆಯ ಎರಡನೆಯ ಹಂತ ಮಾಡಬೇಕೆಂದು ಇದ್ದಾರೆ ಮತ್ತು ಇದಕ್ಕೆ ಕನ್‌ಸೆಂಟು ಕೂಡ ಪಡೆದಿದ್ದಾರೆ ಎಂದು ಗೊತ್ತಾಗಿದೆ. ಈಗಲಾದರೂ ಸರಿ ನಿಮಗೆಲ್ಲರಿಗೂ ಆಸಕ್ತಿ ಇದ್ದದ್ದೇ ಆದರೆ ಆದಷ್ಟು ಜಾಗ್ರತೆ ಬಾಂಬೆ ಕರ್ನಾಟಕದ ಏರಿಯಾದಲ್ಲಿ ಹಾಗೂ ಹೈದರಾಬಾದು ಕರ್ನಾಟಕದಲ್ಲಿರುವ ಸುಮಾರು 19, 20 ತಾಲ್ಲೂಕುಗಳಿಗೆ ಅನುಕೂಲವಾಗುವಂತೆ ಆದಷ್ಟು ಬೇಗ ಹೆಚ್ಚಿನ ಶ್ರದ್ಧೆ ವಹಿಸಿ ಕೆಲಸ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಲು ಇಚ್ಛೆಪಡುತ್ತೇನೆ.

ಇನ್ನು ಪಿ. ಡಬ್ಲ್ಯು. ಇಲಾಖೆಯನ್ನು ರೀ ಆರ್ಗನೈಸೇಷನ್ ತಾವು ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ. ಇದರ ಬಗ್ಗೆ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಲು ಇಚ್ಛೆ ಪಡುತ್ತೇನೆ. ಇಲ್ಲಿ ಚೀಫ್ ಇಂಜನೀಯರು, ಮೇಜರು ಇರಿಗೇಷನ್ ಪ್ರಾಜೆಕ್ಟ್ಸ್ ಎಂದು ಇದ್ದಾರೆ ಮತ್ತು ಚೀಫ್ ಇಂಜನೀಯರು ಕನ್‌ಸ್ಟ್ರಕ್ಷನ್ ಹಾಗೂ ಇನ್‌ವೆಸ್ಟಿಗೇಷನ್ ಪ್ರಾಜೆಕ್ಟ್ಸ್ ಎಂದು ಇಬ್ಬರು ಅಧಿಕಾರಿಗಳಿದ್ದಾರೆ. ಇದರಲ್ಲಿ ಇನ್‌ವೆಸ್ಟಿಗೇಟು ಮಾಡಿರುವ ಎಸ್ಟಿಮೇಟುಗಳು ಮೇಜರು ಇರಿಗೇಷನ್ ಪ್ರಾಜೆಕ್ಟ್ಸ್ ಚೀಫ್‌ಇಂಜನೀಯರವರ ಬಳಿ ಬಂದಾಗ ಅದು ಯಾವ ರೀತಿಯೂ ಬದಲಾವಣೆ ಆಗುತ್ತವೆ. ಒಬ್ಬ ಚೀಫ್ ಇಂಜನೀಯರು ಇನ್‌ವೆಸ್ಟಿಗೇಟು ಮಾಡಿದುದು ಎಂದು ಇನ್ನೊಬ್ಬರು ಅದನ್ನು ಕೆಲಸ ಮಾಡುವಾಗ ಅಲ್ಲಿನ ಸನ್ನಿವೇಶಕ್ಕನುಗುಣವಾಗಿ ಇರುವ ಪ್ಲಾನು ಹಾಗೂ ಅಂದಾಜುಗಳು ಏಸಿವೆ ಅವು ಬದಲಾವಣೆಯಾಗಲೇ ಬೇಕಾಗುತ್ತದೆ. ಆದುದರಿಂದ ಇಲ್ಲಿ ಇಬ್ಬರು ಅಧಿಕಾರಿಗಳನ್ನು ಚೀಫ್ ಇಂಜನೀಯರು ಎಂದು ಮಾಡುವುದಕ್ಕೆ ಬದಲಾಗಿ ಒಬ್ಬರೇ ಚೀಫ್ ಇಂಜನೀಯರೇ ಇವೆಲ್ಲಾ ಕೆಲಸಗಳನ್ನು ಮಾಡುವಂತೆ ಮಾಡಿದರೆ ಕೆಲಸಗಳೂ ಬೇಗನೆ ಆಗುತ್ತವೆ ಹಾಗೂ ಪ್ಲಾನುಗಳ ಬದಲಾವಣೆ ಆಗದೆ ಕೆಲಸವೂ ಚೆನ್ನಾಗಿ ಆಗುತ್ತದೆ. ಈಗ ಇರುವಂತೆ ಇದ್ದರೆ ಇದು ಬರೀ ಡೂಪ್ಲಿಕೇಷನ್ ಆಫ್ ವರ್ಕ್ ಎಂದಂತಾಗುತ್ತದೆ. ಇದೇಕೆ ಇರಬೇಕು ಎನ್ನುವುದೂ ನನಗಂತೂ ಅರ್ಥವಾಗುತ್ತಿಲ್ಲ. ಅಲ್ಲದೆ ಇದರ

(ಶ್ರೀ ಹೆಚ್. ಡಿ. ದೇವೇಗೌಡ)

ಬಗ್ಗೆ ಎಲ್ಲೆಲ್ಲಿ ಯಾವ ಯಾವ ಪ್ರಾಜೆಕ್ಟುಗಳು ರಿವೈಸ್ ಆಗಿವೆ ಎನ್ನುವುದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕೂಡ ಅವರ ರಿಪೋರ್ಟಿನಲ್ಲಿ ಬಂದಿದೆ. ಈ ರೀತಿ ಡ್ಯೂಪ್ಲಿಕೇಷನ್ ಆಫ್ ವರ್ಕ್ ಎಂದು ಇದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಚೀಫ್ ಇಂಜನೀಯರು ಯಾರೇ ಆಗಿರಲಿ ಟೆಕ್ನಿಕಲ್ ಆಗಿ ಎಲ್ಲವನ್ನೂ ಪೂರ್ತಿಯಾಗಿ ತನಿಖೆ ಮಾಡದೇ ಇದ್ದರೆ ಅದರಿಂದೇನೂ ಪ್ರಯೋಜನ ವಾಗುವುದಿಲ್ಲ ಎಂದು ಇಲ್ಲ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ ಈಗ ಇನ್‌ವೆಸ್ಟಿಗೇಷನ್ ಹಾಗೂ ಕನ್‌ಸ್ಟ್ರಕ್ಷನ್ ಚೀಫ್ ಇಂಜನೀಯರವರಿಗೆ ಸರಿಯಾದ ಪವರುಗಳನ್ನು ಕೊಟ್ಟಿಲ್ಲ. ಒಂದು ಸಣ್ಣ ಕೆರೆ ಕಟ್ಟಬೇಕಾದರೂ ಸರಕಾರಕ್ಕೆ ಬಂದು ಹೋಗಬೇಕು. ಹೀಗಾಗುವುದರಿಂದ ಕೆಲಸಗಳೂ ಬಹಳ ತಡವಾಗುತ್ತವೆ. ಎಲ್ಲದಕ್ಕೂ ಸರಕಾರಕ್ಕೆ ಬರುವುದಕ್ಕೆ ಬದಲಾಗಿ ಸರಕಾರ ಸುಮಾರು 4—5 ಸಾವಿರ ರೂಪಾಯಿಗಳವರೆಗೆ ಚೀಫ್ ಇಂಜನೀಯರು ಹಾಗೂ ಅವರ ಕೈಕೆಳಗಿನ ಅಧಿಕಾರಿಗಳು ಇಂತಿಷ್ಟು ಸಾವಿರ ರೂಪಾಯಿಗಳ ಕೆಲಸ ಮಾಡಬಹುದು ಎಂದು ಮಾಡಿದರೆ ಕೆಲಸಗಳೂ ಬೇಗನೆ ಆಗುತ್ತವೆ ಮತ್ತು ಜನಕ್ಕೂ ಒಂದು ರೀತಿ ನ್ಯಾಯ ಸಿಗುತ್ತದೆ ಎನ್ನುವ ಭಾವನೆ ಬರುತ್ತದೆ. ನೀವೇ ಎಲ್ಲದಕ್ಕೂ ಆರ್ಡರು ಕೊಡಬೇಕು ಎಂದರೆ ಇಲ್ಲದೇ ಇರುವ ತೊಂದರೆಗಳಿಗೆ ನೀವೇ ಸಿಕ್ಕಿ ಕೊಂಡು ಕಷ್ಟಪಡಬೇಕಾಗುತ್ತದೆ. ಸರಕಾರಕ್ಕೆ ಈಗಿರುವ ಕೆಲಸಗಳೇ ಬೇಕಾದಷ್ಟಿವೆ, ಆದುದ ರಿಂದ ನಾನು ಮೇಲೆ ಹೇಳಿದುದನ್ನು ಒಪ್ಪಿಕೊಂಡರೆ ಈ ಏರ್ಪಾಡು ಎಲ್ಲರಿಗೂ ಅನುಕೂಲ ಗಳನ್ನುಂಟುಮಾಡಬಹುದು ಇದನ್ನು ತಾವು ಪರಿಶೀಲನೆ ಮಾಡಬೇಕೆಂದು ಇಲ್ಲಿ ಹೇಳುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಆಫ್ ಕಂಟ್ರ್ಯಾಕ್ಟರ್ಸ್ ಎಂದು ಒಂದು ಯೋಜನೆಯನ್ನು ಹಿಂದೆ ಮಾನ್ಯ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಜಾರಿಗೆ ತಂದರು. ಇದರಿಂದ ಅನುಕೂಲಕ್ಕಿಂತ ಹೆಚ್ಚಾಗಿ ಬಹಳ ತೊಂದರೆಗಳಾಗುತ್ತಿವೆ ಎಂದು ಇಲ್ಲ ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದರಿಂದಾಗತಕ್ಕ ಅನಾಹುತಗಳು ಅಷ್ಟಿಷ್ಟಲ್ಲ. ನಿಮಗೆಲ್ಲರಿಗೂ ಗೊತ್ತಿರುವಂತೆ ಇದರಲ್ಲಿ ಕ್ಲಾಸು 1 ಹಾಗೂ ಕ್ಲಾಸು 2 ಎಂದು ಎರಡು ವರ್ಗಗಳಾಗಿ ಮಾಡಿರುವುದರಿಂದ ಇಲ್ಲದ ಅನಾಹುತಗಳಿಗೆ ಇದು ಕಾರಣ ಆಗಿದೆ. ಇದನ್ನು ನಿಜವಾಗಿಯೂ ತಪ್ಪಿಸಿದರೆ ಬಹಳ ಒಳ್ಳೆಯದು. ಇದನ್ನು ಸರಕಾರ ಯೋಚನೆ ಮಾಡ ಬೇಕು. ಇಲ್ಲಿ ನಡೆಯತಕ್ಕ ಅನ್ಯಾಯಗಳು ಬೇರೆಲ್ಲಿಯೂ ನಡೆಯುವುದು ನನಗಂತೂ ಕಾಣುವುದಿಲ್ಲ. ಸರಕಾರದ ಹಣ ಇದರಿಂದ ಪೋಲು ಆಗುತ್ತದೆ. ಖರ್ಚು ಮಾಡುವುದರಲ್ಲಿ ಕೂಡ ಸುಮಾರು ಶೇಕಡಾ ಐವತ್ತರಷ್ಟು ಕೂಡ ಖರ್ಚು ಮಾಡಿ ಕೆಲಸಗಳನ್ನು ಮಾಡುತ್ತಿಲ್ಲ. ಇದರಿಂದ ಹಣ ದುರ್ವ್ಯಯ ವಾಗುತ್ತದೆ. ಇದರಿಂದ ದೇಶಕ್ಕಿರುವ ಒಳ್ಳೆಯ ಹೆಸರು ಹಾಳಾಗಿ ಹೋಗುತ್ತದೆ. ಮತ್ತು ಈ ಕಂಟ್ರ್ಯಾಕ್ಟರುಗಳ ಬಗ್ಗೆ ಅನೇಕರು ಈಗಾಗಲೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ತಾವು ಕೂಡಲೇ ಬದಲಾವಣೆ ಮಾಡಬೇಕೆಂದು ನನಗನಿಸುತ್ತದೆ. ಕಂಟ್ರಾಕ್ಟರುಗಳಿಂದ ಹೇಗೆ ಕೆಲಸ ನಡೆಯುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ಹೊಳೆನರಸೀಪುರದಲ್ಲಿ ಒಬ್ಬರು ಸುಮಾರು ಏಳು ಲಕ್ಷ ರೂಪಾಯಿಗಳ ವ್ಯವಹಾರವನ್ನು ಮಾಡಬೇಕಾಗಿದ್ದವರು ಮೂರು ಲಕ್ಷ ರೂಪಾಯಿಗಳಷ್ಟು ಕೆಲಸವನ್ನು ಮಾಡಿದ್ದಾರೆಂದು ಕೇಳುತ್ತೇವೆ. ಇಲ್ಲಿ ಹೇಗೆ ಇಷ್ಟು ಹಣ ದುರುಪಯೋಗವಾಗಿದೆ ಎನ್ನುವುದನ್ನು ಇದುವರೆಗೂ ತನಿಖೆ ಮಾಡದೇ ಇರಲು ಕಾರಣವೇನು ? ಇದರ ಬಗ್ಗೆ ನಿಗಾ ವಹಿಸಬೇಕು. ಆದುದರಿಂದ ಇಂತಹ ಕಂಟ್ರ್ಯಾಕ್ಟರುಗಳನ್ನು ರಿಜಿಸ್ಟರು ಮಾಡು ವುದಕ್ಕಿಂತ ಹಿಂದೆ ಏನು ಪದ್ಧತಿ ಇತ್ತೋ ಅದನ್ನೇ ಜಾರಿಗೆ ತಂದರೆ ಬಹಳ ಅನುಕೂಲವಾದೀತು. ಇದರ ಬಗ್ಗೆ ಏನಾದರೂ ಸೂಕ್ತವಾದ ಅಮೆಂಡ್‌ಮೆಂಟು ಬೇಕಾದರೂ ತಂದು ಈ ಪದ್ಧತಿಯನ್ನು ಬದಲಾವಣೆ ಮಾಡುವುದು ಅಗತ್ಯ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯ ಇಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇನ್‌ವೆಸ್ಟಿಗೇಷನ್ ಎಂದು ಮಾಡುವಾಗ ಕೆಲವು ಕಡೆ ಹತ್ತು ವರ್ಷಗಳಾದರೂ ಅದರ ಕೆಲಸಗಳು ಮುಗಿಯುವುದೇ ಇಲ್ಲ. ಸಂಬಂಧಪಟ್ಟ ಚೀಫ್ ಇಂಜನೀಯರು ಇದರ ಬಗ್ಗೆ ಸರಿಯಾಗಿ ಗಮನ ಕೊಟ್ಟಂತೆ ಕಾಣುವುದಿಲ್ಲ. ಇಷ್ಟು ವ್ಯವಹಾರದ ಕೆಲಸಗಳು ಇಷ್ಟು ದಿವಗಳಲ್ಲಿ ಮಾಡಲೇಬೇಕು ಎಂದು ಒಂದು ನಿಯಮವನ್ನು ಕಡ್ಡಾಯವಾಗಿ ಹಾಕಿ ಆ ರೀತಿಯಾದ ಒಂದು ನಿರ್ಣಯವನ್ನು ಮಂತ್ರಿಮಂಡಲದವರು ತೆಗೆದು ಕೊಂಡರೆ ಆಗ ಒಂದು ರೀತಿಯಲ್ಲಿ ಅಧಿಕಾರಿಗಳೂ ಕೆಲಸ ಮಾಡಬಹುದು. ಇದರ ಬಗ್ಗೆ ಸರಕಾರದ ಪಾಲಿಸಿ ಏನು ಎನ್ನುವುದನ್ನು ತಿಳಿಸಬೇಕು ಎಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಚನ್ನಯ್ಯ (ಮುಳಬಾಗಲು),—ಸ್ವಾಮಿ ಅಧ್ಯಕ್ಷರೇ, ಇಷ್ಟರತನಕ ಅನೇಕ ಮಾನ್ಯ ಸದಸ್ಯರು ನದಿಗಳು ಎಲ್ಲೆಲ್ಲಿ ಹರಿಯುತ್ತವೆ ಅಂತಹ ಕಡೆ ದೊಡ್ಡ ಪ್ರಾಜೆಕ್ಟ್ ವರ್ಕ್ಸ್‌ಗಳನ್ನು

ಮಾಡಬೇಕೆಂಬ ಬಗ್ಗೆ ಬಹಳ ಕೂಲಂಕಷವಾಗಿ ಪ್ರಸ್ತಾಪ ಮಾಡಿದ್ದಾರೆ. ಹಲವಾರು ಜಿಲ್ಲೆಗಳಲ್ಲಿ ಎಂದರೆ ಕೋಲಾರ, ಬೆಂಗಳೂರು, ತುಮಕೂರು ಇಂತಹ ಜಿಲ್ಲೆಗಳಲ್ಲಿ ಕೇವಲ ಕೆರೆಗಳನ್ನು ಮಾತ್ರ ಕಟ್ಟಿಕೊಂಡು, ಮಳೆ ನೀರನ್ನು ಅನುಸರಿಸಿಕೊಂಡು ವ್ಯವಸಾಯ ಮಾಡತಕ್ಕ ಅನೇಕ ಜನ ರೈತರು ಇದ್ದಾರೆ. ನದಿಗಳಿರತಕ್ಕ ಸ್ಥಳಗಳಲ್ಲಿ ಅವರಿಗೆ ಅನೇಕ ಪ್ರಾಜೆಕ್ಟುಗಳಿರುವುದರಿಂದ ಲಕ್ಷಾಂತರ ಎಕರೆ ನೀರಾವರಿ ಮಾಡುತ್ತಾರೆ ಅವರಿಗೆ ಅನುಕೂಲವಾಗಿರುವುದು ಒಂದು ಸಂತೋಷಕರವಾದ ವಿಚಾರ. ಆದರೆ ಕೆರೆಗಳನ್ನೇ ನಂಬಿಕೊಂಡು ಇರತಕ್ಕ ರೈತರ ಪರಿಸ್ಥಿತಿಯನ್ನು ಯೋಚನೆ ಮಾಡುವುದಾದರೆ ಒಂದೆರಡು ವರ್ಷ ಮಳೆ ಬರದೇ ಹೋದ ಪಕ್ಷದಲ್ಲಿ ಆ ವರ್ಷ ಬೆಳೆಯೇ ಆಗುವುದಿಲ್ಲ. ಅವರ ಜೀವನಕ್ಕೆ ಬಹಳ ತೊಂದರೆಯಾಗುತ್ತದೆ. ಇಂತಹ ಜಿಲ್ಲೆಗಳಲ್ಲಿ ಸರ್ಕಾರದವರು ಹಿಂದೆ ಅನೇಕ ಕೆರೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಸಾವಿರಾರು ಕೆರೆಗಳು ಇವೆ, ಕೋಲಾರ ಜಿಲ್ಲೆಯೊಂದರಲ್ಲೇ 3500 ಕೆರೆಗಳು ಇವೆ. ಈ ಕೆರೆಗಳ ದುರಸ್ತು ಹೇಗೆ ಆಗಿದೆ ಎಂದರೆ ಅವುಗಳನ್ನು ದುರಸ್ತು ಮಾಡತಕ್ಕ ಬಗ್ಗೆ ಆಗಲಿ ಅಥವಾ ಕೆರೆಯಲ್ಲಿರತಕ್ಕ ಹೂಳನ್ನು ತೆಗೆದು ಅವುಗಳನ್ನು ಆಳಮಾಡತಕ್ಕ ಬಗ್ಗೆ ಆಗಲಿ ಅಥವಾ ತೂಬನ್ನು ಸರಿಮಾಡತಕ್ಕ ವಿಷಯದಲ್ಲೇ ಆಗಲಿ ಸರ್ಕಾರದವರು ಸಾಕಾದಷ್ಟು ಕೆಲಸವನ್ನು ಮಾಡಿಸದೇ ಕೆರೆಯಲ್ಲಿ ಸಾಕಾದಷ್ಟು ನೀರಿನ ಶೇಖರಣೆಯಾಗದೇ ವ್ಯವಸಾಯ ಮಾಡಲಿಕ್ಕೆ ಅವಕಾಶವಿಲ್ಲದಂತಾಗಿ ರೈತರು ಬಹಳ ತೊಂದರೆಪಡುತ್ತಾ ಇದ್ದಾರೆ. ಹೆಚ್ಚು ಆಹಾರ ಪದಾರ್ಥವನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅವರುಗಳು ಪಡುತ್ತಾ ಇರತಕ್ಕ ತೊಂದರೆ ಅಷ್ಟಿಷ್ಟಲ್ಲ. ಆದ್ದರಿಂದ ಸರ್ಕಾರದವರು ಡ್ರೈಡಿಸ್ಟ್ರಿಕ್ಟ್‌ಗಳು ಯಾವುವು ಇವೆಯೋ ಅಂತಹ ಡಿಸ್ಟ್ರಿಕ್ಟ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಖರ್ಚುಮಾಡಿ ಆ ಕೆರೆಗಳನ್ನು ಒಳ್ಳೆಯ ಸ್ಥಿತಿಗೆ ತಂದು ಅಲ್ಲಿ ಹೆಚ್ಚು ನೀರು ನಿಲ್ಲುವಂತೆ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಕೊಡುತ್ತಾ ಇದ್ದೇನೆ.

ಎರಡನೆಯದಾಗಿ ಉದಾಹರಣೆಗೆ ಕೋಲಾರದ ಕೆರೆಯನ್ನು ತೆಗೆದುಕೊಳ್ಳೋಣ, ಅದನ್ನು ಸುಮಾರು 70--80 ವರ್ಷಗಳ ಕೆಳಗೆ ಕಟ್ಟಿದ್ದಾರೆ, ಅದಕ್ಕೆ ಸುಮಾರು 800 ಎಕರೆ ಅಚ್ಚುಕಟ್ಟು ಇದೆ. ಆ ಕೆರೆಯ ಕಲ್ಲುಗಳು ಅನೇಕ ಸ್ಥಳಗಳಲ್ಲಿ ಬಿದ್ದು ಹೋಗಿದೆ. 4—5 ವರ್ಷಗಳಿಂದಲೂ ಕೂಡ ಆ ರೀತಿಯಾಗಿದ್ದು ಅದರ ಪಕ್ಕದಲ್ಲಿರತಕ್ಕ ಮನೆಗಳು ಯಾವಾಗ ಕೊಚ್ಚಿಕೊಂಡು ಹೋಗುತ್ತವೆಯೋ ಎಂದು ಅಲ್ಲಿನ ಜನರು ಹೆದರುತ್ತಾ ಇದ್ದಾರೆ. ಅಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರುಗಳು ಇದ್ದಾರೆ. ಅವರಿದ್ದೂ ಕೂಡ ಅಲ್ಲಿ ಮಾಡಬೇಕಾದ ಕೆಲಸ ದುರಸ್ತು ಮಾಡುವುದಾಗಲಿ ಕಲ್ಲು ಕಟ್ಟಿಸತಕ್ಕ ವಿಷಯವಾಗಲಿ, ತೂಬು ರಿಪೇರಿ ಮಾಡಿಸತಕ್ಕ ವಿಷಯವಾಗಲಿ, ಕಟ್ಟೆಯನ್ನು ಬಡಾವಣೆ ಮಾಡಿ ಎತ್ತರ ಮಾಡತಕ್ಕ ವಿಚಾರವನ್ನಾಗಲಿ ಅಂತಹ ಯಾವ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಳ್ಳುವುದಿಲ್ಲ. ಬಹುಶಃ ಅವರು ಅವರಿಗೆ ಎಲ್ಲಿ ಅನುಕೂಲವಿದೆಯೋ ಅಂತಹ ಸ್ಥಳಗಳಲ್ಲಿ ಮಾತ್ರ ತೆಗೆದುಕೊಳ್ಳುತ್ತಾರೆ ಎಂದು ಕಾಣುತ್ತದೆ. ಅದು ಟೌನ್ ಹೆಡ್‌ಕ್ವಾರ್ಟರ್, 800 ಎಕರೆ ಅಚ್ಚುಕಟ್ಟು ಪ್ರದೇಶ ಅದು ಮೇಜರ್ ಟ್ಯಾಂಕ್ ಅಂತಹ ಕೆರೆಯನ್ನು ಇದುವರೆಗೂ ಕೂಡ ದುರಸ್ತು ಮಾಡಿಲ್ಲ ಎಂದರೆ ಎಷ್ಟುಮಟ್ಟಿಗೆ ಅವರು ಅಲಕ್ಷ್ಯಭಾವನೆಯನ್ನು ತೋರಿಸುತ್ತಾ ಇದ್ದಾರೆ ಎಂಬುದನ್ನು ತಾವು ಪರಿಶೀಲನೆ ಮಾಡಿ ನೋಡಬಹುದು. 3 ವರ್ಷಗಳ ಹಿಂದೆ ಚೀಫ್ ಮಿನಿಸ್ಟರು ಬಂದಾಗಲೂ ಕೂಡ ರೈತರು ಅವರಿಗೆ ಒಂದು ಮನವರಿಕೆಯನ್ನು ಮಾಡಿದರು. ಇದುವರೆಗೂ ಕೂಡ ಅದನ್ನು ದುರಸ್ತು ಮಾಡಿಸದೇ ಈ ಸಾರಿ ಕೆರೆ ತುಂಬಿದ್ದರೂ ಕೂಡ ಕಟ್ಟೆ ಕಿತ್ತು ಹೋಗುತ್ತದೆ ಎಂದು ಹೇಳಿ ರೈತರು ಕಟ್ಟೆಯನ್ನು ಒಡೆಯದಂತೆ ಮಾಡಲು ನೀರನ್ನು ಕಟ್ಟೆಯ ಪಕ್ಕಕ್ಕೆ ಬಿಟ್ಟು ಹೆಚ್ಚಿನ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದಂತಾಯಿತು, ನಮ್ಮ ಕಣ್ಣು ಮುಂದೆ ಇದ್ದರೂ ಕೂಡ ಅದನ್ನು ದುರಸ್ತಿ ಮಾಡದೇ ಇರಬೇಕಾದರೆ ಯಾವ ಕಂಟ್ರಾಕ್ಟ್‌ದಾರರು ಅವರಿಗೆ ಅನುಕೂಲವಾಗಿದ್ದಾರೆಯೋ ಅವರಿಗೆ ಕೆಲಸ ಕೊಡುತ್ತಾರೆ ಅಂತಹ ಕಡೆ ಕೆಲಸ ಮಾಡಿಸುತ್ತಾರೆ. ಅವರಿಗೂ ಆ ಕಂಟ್ರಾಕ್ಟ್‌ದಾರರಿಗೂ ಎಲ್ಲಿ ಬಾಂಧವ್ಯ ಇದೆಯೋ ಅಂತಹ ಕಡೆಗಳಲ್ಲಿರತಕ್ಕ ಕೆರೆಗಳ ಕೆಲಸ ಆಗುತ್ತಾ ಇದೆ. ಆ ರೀತಿಯಾಗಬಾರದು. ತಾಲ್ಲೂಕಿನಲ್ಲಿರತಕ್ಕ ಕೆರೆಗಳ ಒಂದು ಪಟ್ಟಿ ಮಾಡಿ ಅದನ್ನು ಡಿಸ್ಟ್ರಿಕ್ಟ್ ಎಕ್ಸಿಕ್ಯೂಟೀವ್ ಇಂಜಿನಿಯರಿಗೆ ಕಳುಹಿಸಿಕೊಟ್ಟು ಸೂಪರ್‌ಇಂಟೆಂಡಿಗ್ ಇಂಜಿನೀಯರು ಮತ್ತು ಚೀಫ್ ಇಂಜಿನೀಯರ ಮಂಜೂರಾತಿಯನ್ನು ಪಡೆದುಕೊಂಡು ಆ ಕೆರೆಗಳನ್ನು ದುರಸ್ತು ಮಾಡಬೇಕು ಅವರು ಅಂತಹ ಯಾವ ಗೋಜಿಗೂ ಹೋಗುವುದಿಲ್ಲ. ಇದರಲ್ಲಿ ಬರೀ ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆಯೇ ಹೊರತು ನಿಜವಾಗಿಯೂ ಅಲ್ಲಿ ಯಾವ ಕೆರೆ ದುರಸ್ತು ಆಗಬೇಕೋ ಆ ಕೆರೆ ದುರಸ್ತು ಆಗುತ್ತಾ ಇಲ್ಲ ಮತ್ತು ಅವನ್ನು ಸರಿಪಡಿಸಬೇಕು ಎನ್ನುವುದರ ಕಡೆಗೆ ಅಧಿಕಾರಿಗಳು ಗಮನವನ್ನು ಕೊಡುತ್ತಾ ಇಲ್ಲ, ಅವರಲ್ಲಿ ಸೇವಾ ಬುದ್ಧಿ ಇಲ್ಲವೇ ಇಲ್ಲ. ಏನಾದರೂ ಮಾಡಿ ಒಳ್ಳೆಯ ಚೆನ್ನಾಗಿ ಜೀವನ ನಡೆಸಿಕೊಂಡು ಹೋಗಬೇಕು ಎಂಬ ಭಾವನೆ ಇದೆಯೇ ಹೊರತು ಸೇವಾ ಬುದ್ಧಿ ಇಲ್ಲ. ಇದು ಅಧಿಕಾರ ವರ್ಗದಲ್ಲಿ ಬರದೆ

(ಶ್ರೀ ಟಿ. ಚೆನ್ನಯ್ಯ)

ಹೋದರೆ ಸರ್ಕಾರದವರಿಗೆ ಕೆಟ್ಟಹೆಸರು ಬರುತ್ತದೆ. ಆದ್ದರಿಂದ ಸರ್ಕಾರದ ಲೆವೆಲಿನಲ್ಲಿ ಮಿನಿಸ್ಟರ್ ಆದಂತವರು ಅಧಿಕಾರಿಗಳಿಗೆ ಸರಿಯಾದ ತಾಕೀತು ಕೊಟ್ಟು ಅವರಲ್ಲಿ ಕೆಲಸವನ್ನು ಮಾಡುವಂತಹ ಸೇವಾ ಬುದ್ಧಿ ಬರುವಂತೆ ಮಾಡಬೇಕು. ಆ ರೀತಿ ಮಾಡುವವರೆಗೂ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ.

ಅನೇಕ ತಾಲ್ಲೂಕು ಬೋರ್ಡು ರಸ್ತೆಗಳನ್ನು ಅವರೇ ತೆಗೆದುಕೊಂಡು ಮಾಡಬೇಕೆಂದು ಸರ್ಕಾರದವರು ಅವರಿಗೆ ವಹಿಸಿದ್ದಾರೆ. ಸರ್ಕಾರದವರು ತಾಲ್ಲೂಕು ಬೋರ್ಡುಗಳಿಗೆ ಕೊಡತಕ್ಕ ಹಣ ಬಹಳ ಕಡಿಮೆ. 8—10 ಮೈಲಿಗಳನ್ನು ತೆಗೆದುಕೊಂಡು ಸರಿಪಡಿಸಲಿಕ್ಕೂ ಕೂಡ ಅವರಲ್ಲಿ ಸಾಕಾದಷ್ಟು ಹಣವಿಲ್ಲ, ಆದ್ದರಿಂದ ಈ ಕೆಲಸವನ್ನು ಅವರಿಗೆ ಕೊಡುವುದು ಸರಿಯಲ್ಲ. 3 ಮೈಲಿಗೆ ಮೇಲ್ಪಟ್ಟು ಇರತಕ್ಕ ರಸ್ತೆಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಂಡು ಮಾಡತಕ್ಕ ವ್ಯವಸ್ಥೆಯನ್ನು ಮಾಡುದಿದ್ದರೆ ಬಹಳ ಕಷ್ಟವಾಗುತ್ತದೆ. ತಾಲ್ಲೂಕು ಬೋರ್ಡಿನವರು ಮಾಡತಕ್ಕ ಕೆಲಸ ಅನೇಕವಾಗಿವೆ. 2—3 ಸಾವಿರ ರೂಪಾಯಿಗೆ ಕಂಟ್ರಾಕ್ಟ್ ಕೊಟ್ಟರೆ ಅವರು ಬರೀ ಕಲ್ಲು ಮಣ್ಣು ಹಾಕಿ ರಸ್ತೆ ಮುಚ್ಚಿರುತ್ತಾರೆ, ಮಳೆ ಬಂದರೆ ಕಲ್ಲು ಚಲ್ಲಾಪಿಲ್ಲಿಯಾಗಿ ಬಿದ್ದಿರುತ್ತದೆ. ಇದರಿಂದ ಜನರಿಗೂ ಕಷ್ಟ ಮತ್ತು ಸರ್ಕಾರದವರಿಗೂ ಕೆಟ್ಟ ಹೆಸರು ಬರುತ್ತದೆ. ಈ ರೀತಿಯಲ್ಲಿ ಹಣ ದುರುಪಯೋಗವಾಗುವುದನ್ನು ನೋಡುತ್ತಾ ಇದ್ದೇವೆ. ಇದನ್ನು ನಿವಾರಣೆ ಮಾಡಲು ನಾನು ಮೊದಲೇ ಹೇಳಿದಂತೆ 3 ಮೈಲಿಗೆ ಮೇಲ್ಪಟ್ಟು ಇರತಕ್ಕ ರಸ್ತೆಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಂಡು ಮಾಡಿಸಬೇಕು.

ಸೇತುವೆಗಳು ಮತ್ತು ಕಲ್‌ವರ್ಟ್ಸ್ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಕೋಲಾರದ ಹತ್ತಿರ ಒಂದು ದೊಡ್ಡ ಬ್ರಿಡ್ಜ್ ಕಿತ್ತುಹೋಗಿದೆ. ಹೊಸಕೋಟೆಯ ಹತ್ತಿರ ಎರಡು ಸೇತುವೆ ಇವೆ, ಕಾರು ಲಾರಿ ಬಸ್ಸು ಬಂದರೆ ಬಹಳ ನಿಧಾನವಾಗಿ ಹೋಗಬೇಕು, ಬಹಳ ಇಕ್ಕಟ್ಟು. ಅದು ಎಷ್ಟೋ ವರ್ಷಗಳ ಹಿಂದೆ ಕಟ್ಟಿದ ಸೇತುವೆ. ಅದು ನ್ಯಾಷನಲ್ ಹೈವೇ, ಅದನ್ನು ದೊಡ್ಡದು ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಅನೇಕ ಜನ ಮಂತ್ರಿಗಳು ಆ ರಸ್ತೆಯಲ್ಲಿ ಬರುತ್ತಾ ಇರುತ್ತಾರೆ. ಅದನ್ನು ಇಲ್ಲಿಯತನಕ ಸರಿಪಡಿಸಿಲ್ಲ. ಇನ್ನೊಂದು ಉದಾಹರಣೆ ಕೊಡುವುದಾದರೆ ಬೆಂಗಳೂರಿನಿಂದ ಬೆಳಗಾಂಗೆ ಹೋಗುವ ನ್ಯಾಷನಲ್ ಹೈವೇನಲ್ಲಿ ನೆಲಮಂಗಲದ ಹತ್ತಿರ 5—6 ಮೈಲಿ ದೂರದಲ್ಲಿ ಒಂದು ಸೇತುವೆ ಇದೆ, ಪ್ರತಿವಾರ 3—4 ಜನ ಮಂತ್ರಿಗಳು ರಸ್ತೆಯಲ್ಲಿ ಹೋಗುತ್ತಾ ಇರುತ್ತಾರೆ, ಅದು ಬಹಳ ಇಕ್ಕಟ್ಟಾಗಿದೆ. ವಾಹನಗಳು ಹೋಗುವುದಕ್ಕಾಗುವುದಿಲ್ಲ ಅದನ್ನು ಇಲ್ಲಿಯವರೆಗೂ ಸರಿಪಡಿಸುವುದಕ್ಕೆ ಆಗಿಲ್ಲ. ನಾನು ಹೋದ ಸಾರಿ ಭಾಷಣ ಮಾಡಿದಾಗಲೂ ಆ ಸೇತುವೆಯ ವಿಷಯವನ್ನು ಹೇಳಿದ್ದೇನೆ. ಅದನ್ನು ವಿಚಾರ ಮಾಡಬೇಕು. ನಮ್ಮ ಕೋಲಾರದ ಹತ್ತಿರ ಒಂದು ನ್ಯಾಷನಲ್ ಹೈವೇ ಇದೆ ಸುಮಾರು 13 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ. ಕೋಲಾರಕ್ಕೆ 4 ಮೈಲಿ ಸುತ್ತಿಕೊಂಡು ಬರತಕ್ಕ ವ್ಯವಸ್ಥೆ ಮಾಡಿದ್ದಾರೆ. ಈಗಿರತಕ್ಕ ರಸ್ತೆಯನ್ನೇ ಮತ್ತುವರಿ ಮಾಡಿಕೊಂಡು ರಸ್ತೆಯನ್ನು ಏಕೆ ಅಗಲ ಮಾಡಕೂಡದು ? ಕೋಲಾರ ಟೌನ್ ಒಂದು ಹಳೆಯ ಮಾದರಿಯಲ್ಲಿ ಇದೆ. ಮಾನ್ಯ ಮಂತ್ರಿಗಳು ಈ ನ್ಯಾಷನಲ್ ಹೈವೇಸ್ ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಸೇರಿದ್ದು ಎಂದು ಹೇಳಿದ್ದಾರೆ. ಆದರೆ ನಮಗೆ ಯಾವುದು ಅನುಕೂಲ ಎಂಬುದನ್ನು ಕೇಂದ್ರ ಸರ್ಕಾರದವರಿಗೆ ಬರೆದರೆ ಅವರೇನೂ ಬೇಡ ಎಂದು ಹೇಳುವುದಿಲ್ಲ. ಆದ್ದರಿಂದ ಈ ನ್ಯಾಷನಲ್ ಹೈವೇ ಕೋಲಾರದ ಟೌನಿನಲ್ಲಿ ಹೋಗುವಂತೆ ಮಾಡಬೇಕೆಂದು ತಿಳಿಸುತ್ತೇನೆ.

ಇನ್ನೊಂದು ವಿಷಯ. ಈಗ ಅನೇಕ ಜಿಲ್ಲಾ ಪ್ರಾಜೆಕ್ಟುಗಳನ್ನು ಕಟ್ಟತಕ್ಕ ಸಮಯದಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಮತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಬೇಕು ಎಂಬುದಾಗಿ ಹೇಳಿ ಮಾಡುತ್ತಿದ್ದಾರೆ. ಆದರೆ ಹಳೆಯ ಮೈಸೂರಿನಲ್ಲಿ ನೋಡಿದರೆ ಈ ಪ್ರಾಜೆಕ್ಟುಗಳು ಸ್ಯಾಂಕ್ಷನ್‌ಗೋಸ್ಕರ ಹಾಗೆಯೇ ನಿಂತು ಹೋಗಿವೆ, ಇಂಡಿಯಾ ಸರ್ಕಾರದವರು ಅದಕ್ಕೆ ಅನುಮತಿ ಕೊಡಲಿಲ್ಲವೆಂದು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಕಾವೇರಿ ಸ್ಕೀಮಿನಲ್ಲಿ 1974 ರವರೆಗೆ ಆಗಿರತಕ್ಕ ಕರಾರು ಎಕ್ಸ್‌ಪೈರ್ ಆಗುತ್ತದೆ. ಅದಕ್ಕಾಗಿ ಜಾಗ್ರತೆಯಾಗಿ ಸರ್ಕಾರದವರು ಆ ಪ್ರಾಂತದಲ್ಲಿ ಎಷ್ಟೆಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕೋ ಅದನ್ನು ಉಪಯೋಗ ಮಾಡಿಕೊಂಡು ಅದಕ್ಕೆ ಸಾಕಾಗುವಷ್ಟು ಕೆಲಸಗಳನ್ನು ದೃಢವಾಗಿ ಮಾಡದೇ ಹೋದರೆ ನಮ್ಮ ಸರ್ಕಾರದವರೇ ತಮ್ಮ ಕರ್ತವ್ಯಲೋಪಮಾಡಿದಂತಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ಆ ನೀರನ್ನು ಉಪಯೋಗಿಸಿಕೊಂಡು ಪ್ರಾಜೆಕ್ಟ್ ಕೆಲಸಗಳನ್ನು ಮಾಡಬೇಕೋ ಅಂತಹ ಕಡೆಗಳಲ್ಲಿ ಚೆನ್ನಾಗಿ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು. ಅಡ್ಮಿನಿಸ್ಟ್ರೇಟಿವ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ ತೆಗೆದುಕೊಂಡು ಕೆಲಸ ಮಾಡುವುದಕ್ಕೆ ಪ್ರತಿಯೊಂದು ಹಂತದಲ್ಲಿಯೂ ಸರ್ಕಾರದವರು ಶ್ರದ್ಧೆವಹಿಸಬೇಕು.

ಹಿಂದೆ ರೆವಿನ್ಯೂ ಇಲಾಖೆಯವರು ರಸ್ತೆಯಲ್ಲಿ ಬೆಳೆಯತಕ್ಕ ಮರಗಳನ್ನು ನೋಡಿಕೊಳ್ಳುತ್ತಿದ್ದರು. ಈಗ ಆ ಕೆಲಸ ಪಿ. ಡಬ್ಲ್ಯು. ಡಿ. ಯವರಿಗೆ ಸೇರಿದೆ. ಅದು ನ್ಯಾಷನಲ್ ವೆಲ್ತ್. ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳತಕ್ಕದ್ದು ಆಗಿದೆ. ಅವು ಪ್ರಯಾಣಿಕರಿಗೆ ನೆರಳು ಕೊಡುವಂಥಾದ್ದು. ಅಂತಹ ಮರಗಳನ್ನು ಎಲ್ಲಿ ಬೇಕಾದರೂ ಕಡಿದುಕೊಂಡು ಹೋಗಬಹುದೆಂದು ಅವಕಾಶ ಮಾಡಿಕೊಡುತ್ತಿದ್ದಾರೆ. ಹಿಂದೆ ಶ್ಯಾನುಭೋಗರು, ಪಟೇಲರು ಅವರವರ ಗ್ರಾಮದ ಮರಗಳನ್ನು ಮೇಂಟೇನ್ ಮಾಡುತ್ತಿದ್ದರು. ಈಗ ಅದನ್ನು ತಪ್ಪಿಸಿದ್ದಾರೆ. ಪಿ. ಡಬ್ಲ್ಯು. ಡಿ. ಯವರೇ ಅವನ್ನು ನೋಡಿಕೊಳ್ಳುತ್ತೇವೆಂದು ಹೇಳಿದ್ದರೂ ಅವರು ಅಷ್ಟಾಗಿ ಮುತುವರ್ಜಿ ವಹಿಸಿ ನೋಡಿಕೊಳ್ಳುತ್ತಾ ಇಲ್ಲ. ಅಂತಹ ಮರಗಳು ಬಹಳ ಅನ್ಯಾಯವಾಗಿ ಹೋಗುತ್ತಿವೆ. ಮುಖ್ಯವಾಗಿ ರಸ್ತೆಗಳಲ್ಲಿರತಕ್ಕ ಮರಗಳನ್ನು ಯಾರೂ ಕಡಿದುಹಾಕದಹಾಗೆ ನೋಡಿಕೊಳ್ಳಬೇಕು.

ಇನ್ನು ಪಿ. ಡಬ್ಲ್ಯು. ಡಿ. ಯಲ್ಲಿ ಅಲ್ಲಿನ ಅನೇಕ ಕೆಲಸಗಳಿಗಾಗಿ ಬಡ್ಜೆಟ್ಟಿನಲ್ಲಿ 26 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆ ದುಡ್ಡನ್ನು ಸರ್ಕಾರದವರು ಸಂಬಂಧಪಟ್ಟ ಇಲಾಖೆಯು ನಾನಾ ಕೆಲಸಕಾರ್ಯಗಳಿಗಾಗಿ ಖರ್ಚು ಮಾಡಬೇಕಾಗಿದೆ. ಇದರಲ್ಲಿ ಸರ್ಕಾರೀ ಕೆಲಸಗಳೇನೋ ಬಹಳ ಚೆನ್ನಾಗಿ ನಡೆಯುತ್ತಿವೆ. ಆದರೆ ನಿಜವಾಗಿ ಅಷ್ಟು ದುಡ್ಡೂ ಆ ಕೆಲಸಗಳಿಗೆ ಖರ್ಚಾಗುವುದಿಲ್ಲ. ಅದು ನನ್ನ ಅನುಭವ. ಈ 26 ಕೋಟಿ ರೂಪಾಯಿಗಳಲ್ಲಿ ಕೇವಲ ಮೂರರಲ್ಲಿ ಒಂದು ಭಾಗ ಖರ್ಚು ಆಗುವುದೇ ಇಲ್ಲ. ಮಿಕ್ಕ ಮೂರನೇ ಎರಡು ಭಾಗ ಮಾತ್ರ ಖರ್ಚಾಗುತ್ತದೆ. ಅದರಿಂದ ಅನೇಕ ಕೆಲಸಗಳು ಆಗುವುದೇ ಇಲ್ಲ. ಖರ್ಚಾಗದೆ ಇರತಕ್ಕ ದುಡ್ಡು ನಾನಾ ರೂಪದಲ್ಲಿ ಹೋಗುತ್ತದೆ. ಇಂಥಾದ್ದನ್ನು ಸರ್ಕಾರದವರು ಕೂಡಲೇ ತಡೆಗಟ್ಟಬೇಕು. ಅದರಿಂದ ಒಂದು ವೇಳೆ ಹಣ ಬಡ್ಜೆಟ್ಟಿನಲ್ಲಿ ಖೋತಾ ಬಂದರೂ ಸರಿದೂಗಿಸಬಹುದು. ಆದ್ದರಿಂದ ಖರ್ಚಾಗದೆ ಉಳಿಯುತಕ್ಕ ಹಣವನ್ನು ಬೇರೆಯವರು ತಿನ್ನುವುದನ್ನು ತಪ್ಪಿಸಲು ಸರ್ಕಾರದವರು ಬಿಗಿ ಆಡಳಿತ ನಡೆಸಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಇನ್ನೊಂದು ವಿಷಯ. ಈಗ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಒಂದು ಹೊಸ ಪದ್ಧತಿಯನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆ. ಯಾರೂ ಕೂಡ ಹಣವನ್ನು ಮುಂಗಡವಾಗಿ ಕೊಟ್ಟರೆ ಆ ಕೆಲಸದಲ್ಲಿ ಅಷ್ಟು ನಾಜೋಕಾಗಿ ಕಟ್ಟುನಿಟ್ಟಾಗಿ ನಡೆಯಿಸುವುದಿಲ್ಲ, ಲಕ್ಷಾಂತರ ರೂಪಾಯಿಗಳನ್ನು ಹಾಗೂ ಕೋಟ್ಯಾಂತರ ರೂಪಾಯಿಗಳನ್ನು ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್‌ಗೆ ಅಡ್ವಾನ್ಸ್ ಆಗಿ ಕೊಡುತ್ತಿದ್ದಾರೆ. ಇದುವರೆಗೆ ಸಪ್ಲೈಯರ್ಸ್‌ಗೆ ಹಣ ಕೊಟ್ಟು ಕೆಲಸ ಮಾಡಿ ಎಂದು ಯಾರೂ ಕೇಳುತ್ತಿರಲಿಲ್ಲ. ಅವರಿಗೆ ಯೋಗ್ಯತೆ ಇದ್ದರೆ ಆ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರದಿಂದ ಏಕೆ ಅಡ್ವಾನ್ಸ್ ಪಡೆಯಬೇಕು. ಹೀಗೆ ಅನೇಕ ಸಪ್ಲೈಯರ್ಸ್‌ಗೆ ಅಡ್ವಾನ್ಸ್ ಕೊಟ್ಟಿದ್ದಾರೆ. ಆ ರೀತಿ ಅಡ್ವಾನ್ಸ್ ಕೊಟ್ಟಿದ್ದರೂ ಅವರು ಏನು ಮೆಟೀರಿಯಲ್ಸನ್ನು ಸಪ್ಲೈ ಮಾಡುತ್ತಿದ್ದಾರೆಂಬುದನ್ನೂ ಯಾರು ಕಂಡುಹಿಡಿದಿದ್ದಾರೆ. ಆದ್ದರಿಂದ ಅವರಿಗೆ ಅಡ್ವಾನ್ಸ್ ಕೊಡುವುದು ಸರಿಯಲ್ಲ. ಎಲ್ಲರೂ ಫಸ್ಟ್ ಕ್ಲಾಸ್ ಕಂಟ್ರಾಕ್ಟರ್ಸ್ ಎಂದು ಹೇಳಿಕೊಂಡವರಿಗೆಲ್ಲಾ ಸರ್ಕಾರದವರು ಏತಕ್ಕೆ ಕೊಡಬೇಕು. ಆದರೆ ಅವನಿಗೆ ಲಕ್ಷಗಟ್ಟಲೆ ಅಡ್ವಾನ್ಸ್ ಕೊಡುವುದು ದೊಡ್ಡ ದೊಡ್ಡ ಡ್ಯಾಮುಗಳನ್ನು ಕಟ್ಟುವುದಕ್ಕೆ. ನಿಜವಾಗಿ ಅಂತಹ ದೊಡ್ಡ ದೊಡ್ಡ ಕೆಲಸಗಳನ್ನು ಫಸ್ಟ್ ಕ್ಲಾಸ್ ಕಂಟ್ರಾಕ್ಟರ್ಸ್ ಎಂಬುದಾಗಿ ಹೇಳುವವನಿಗೆ ಕೊಡಬಾರದು. ನ್ಯಾಯವಲ್ಲ. ಏಕೆಂದರೆ ಅಂತಹವರಿಂದ ಬಹಳ ಕೆಲಸಗಳನ್ನು ಎಕ್ಸ್‌ಪೆಕ್ಟ್ ಮಾಡುವುದಕ್ಕಾಗುವುದಿಲ್ಲ. ಅವರು ನಿಜವಾಗಿ ಆ ಕೆಲಸಗಳನ್ನು ಮುತುವರ್ಜಿಯಿಂದ ಖಂಡಿತವಾಗಿ ಮಾಡುವುದಿಲ್ಲ. ಯಾವ ಕೆಲಸಕ್ಕೇ ಆಗಲೀ ಎಂ. ಎಸ್. ಇ. ಬಿ. ಮತ್ತು ಪಿ. ಡಬ್ಲ್ಯು. ಡಿ. ಯಲ್ಲಿ ಕಂಟ್ರಾಕ್ಟರುಗಳಿಗೆ ಅಡ್ವಾನ್ಸ್ ಪೇಮೆಂಟ್ ಮಾಡುವುದನ್ನು ಕೂಡಲೇ ತಪ್ಪಿಸಬೇಕು.

ಕಡೆಯದಾಗಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಪಿ.ಡಬ್ಲ್ಯು.ಡಿ. ಶಾಖೆ 26 ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸಬೇಕಾಗಿದೆ. 26 ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ಮೂರು ಜನ ಚೀಫ್ ಇಂಜನಿಯರುಗಳಿದ್ದರೆ, ಅವರಲ್ಲಿ ಒಬ್ಬೊಬ್ಬರಿಗೆ ಸುಮಾರು 9 ಕೋಟಿಯಂತೆ ಮೂರು ವಿಭಾಗಮಾಡಿ ಪ್ರತ್ಯೇಕವಾಗಿ ಈ ಇಲಾಖೆಯ ವ್ಯವಹಾರಗಳನ್ನು ಮೂವರು ಮಂತ್ರಿಗಳಿಗೆ ಕೊಡುವುದು ಮೇಲು. ಏಕೆಂದರೆ ಬೇರೆ ಕೆಲವು ಮಂತ್ರಿಗಳಿಗೆ ಕೆಲಸ ಅಷ್ಟು ಇಲ್ಲವೆಂದು ಹೇಳುತ್ತಿದ್ದಾರೆ. ಬಡ್ಜೆಟ್ಟಿನಲ್ಲಿರತಕ್ಕ 60 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸ ಮತ್ತು ಪಿ. ಡಬ್ಲ್ಯು. ಡಿ. ಈ ಎರಡು ಇಲಾಖೆಗಳಿಗೆ ಅಲಾಟ್ ಮಾಡಿದ್ದಾರೆ. ಕೆಲವು ಮಾನ್ಯ ಮಂತ್ರಿಗಳು ನಮಗೆ ಯಾವ ಹಣಕಾಸಿನ ಟ್ರಾನ್ಸಾಕ್ಷನ್ ವ್ಯವಹಾರ ಇಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಹೇಳಿದ ಹಾಗೆ ಇದನ್ನು ಮೂರು ವಿಭಾಗ ಮಾಡಿ ಏನೂ ಪ್ರಯೋಜನವಿಲ್ಲದೆ ಇರುವ ಖಾತೆಗಳನ್ನು ಕೊಟ್ಟಿರುವ ಮಂತ್ರಿಗಳಿಗೆ ಸ್ವಲ್ಪ

(ಶ್ರೀ ಟಿ. ಚನ್ನಯ್ಯ)

ಮಟ್ಟಿಗಾದರೂ ಸಮಾಧಾನವಾಗಿ ಕೆಲಸಮಾಡುವಂತೆ ಈ ಇಲಾಖೆಗಳನ್ನು ಮೂರು ಭಾಗಮಾಡಿ ಅವರಿಗೆ ಹಂಚಬೇಕು. ಈ ಇಲಾಖೆಗಳಲ್ಲಿ ಯಾವಾಗಲೂ ಬಹಳ ವಿಚಕ್ಷಣೆಯಿಂದ ಹಾಗೂ ದಕ್ಷತೆಯಿಂದ ಕೆಲಸಮಾಡದೆ ಹೋದರೆ ಸರ್ಕಾರದ ದುಡ್ಡು ಇನ್ನೂ ಅನೇಕ ರೀತಿಯಲ್ಲಿ ಅನ್ಯಾಯವಾಗಿ ಹೋಗುತ್ತದೆ. ಆದ್ದರಿಂದ ಬಿಗಿಯಾಗಿ ಹಾಗೂ ದಿಟ್ಟತನದಿಂದ ಸರ್ಕಾರದವರು ರಾಜ್ಯಾಡಳಿತಗವನ್ನು ಮಾಡಿ ಈಗ ಪೋಲಾಗುತ್ತಿರುವ ಹಣವನ್ನು ತಡೆಗಟ್ಟದೇ ಹೋದರೆ ನಿಜವಾಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ, ಖಂಡಿತವಾಗಿ ಕೆಟ್ಟ ಹೆಸರು ಬಂದೇ ಬರುತ್ತದೆ. ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಪಿ. ಬೋರಯ್ಯ (ಬನ್ನೂರು).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಸ್ವಾಮಿ, ಇದುವರೆಗೂ ಕಾವೇರಿ ಬೇಸಿನ್ ಜಲಾಶಯಗಳ ವಿಚಾರವಾಗಿ ಈ ಸಭೆಯ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನೂ ಸಹ ಅದನ್ನು ಪುಷ್ಟೀಕರಿಸುತ್ತೇನೆ.

6-30 P.M.

ಈಗ ಕಪಿನಿ ಪ್ರಾಜೆಕ್ಟಿಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಆ ಕೆಲಸ ಮುಗಿಯಬೇಕಾದರೆ ಇನ್ನೂ 30 ವರ್ಷಗಳ ಕಾಲ ಬೇಕಾಗುತ್ತದೆ. ಅದನ್ನು 1970ನೇ ಇಸವಿಯ ಒಳಗೆ ಮುಗಿಸುತ್ತೇವೆಂದು ಹೇಳುತ್ತಾರೆ. ಅದು ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ. ವಿಶ್ವೇಶ್ವರಯ್ಯ ನಾಲೆಯಲ್ಲಿ ತಾವು ನೀರು ಬಿಡುತ್ತಿದ್ದೀರಿ. ಆ ನಾಲೆ ಹರಿಯುತ್ತಾ ಇರತಕ್ಕಂಥಾದ್ದು ಹಳೆಯ ಮೈಸೂರಿನ ಅಭಾವ ಪ್ರದೇಶದಲ್ಲಿ. ವಿಶ್ವೇಶ್ವರಯ್ಯ ನಾಲೆಯಿಂದ ನೀರು ಸರ್ಮಕವಾಗಿ, ಸಮವಾಗಿ ಅಲ್ಲಿ ಇರತಕ್ಕಂಥ ರೈತರಿಗೆ ದೊರೆಯುತ್ತಾ ಇಲ್ಲ. ಈ ನೀರು ಕೆಲವು ಕಡೆ ಯಥೇಚ್ಛವಾಗಿ ದೊರೆಯುತ್ತದೆ. ಕೆಲವು ಕಡೆ ದೊರೆಯುತ್ತ ಇಲ್ಲ. ವಿಶ್ವೇಶ್ವರಯ್ಯ ನಾಲೆ ಕೆಳಗಡೆ ಟಿ. ನರಸೀಪುರ ತಾಲ್ಲೂಕಿನ ಕೆಲವು ಭಾಗ ಬಂದಿದೆ. ಈ ಭಾಗದ ತುರುಗನೂರು ಬ್ರ್ಯಾಂಚ್ ನಾಲಾದಲ್ಲಿ ಎಷ್ಟು ನೀರು ಬಿಡಬೇಕಾಗಿತ್ತೋ ಅದನ್ನು ಮೊದಲಿಂದಲೂ ಬಿಡುತ್ತಿಲ್ಲ. ಈಗ ಅಲ್ಲಿ ಅಭಿವೃದ್ಧಿ ಆಗಬೇಕಾದ್ದು 20 ಸಾವಿರ ಎಕರೆ ಜಮೀನು. ಈ 20 ಸಾವಿರ ಎಕರೆಗೆ ನೀರು ಬಿಡುತ್ತಿಲ್ಲ. ಕೇವಲ 10 ಸಾವಿರ ಎಕರೆಗೆ ಮಾತ್ರ ನೀರು ಬಿಡುತ್ತಿದ್ದಾರೆ. ಅಲ್ಲಿ ರೈತರು ನೀರಾವರಿ ವ್ಯವಸಾಯವನ್ನು ಮಾಡುವುದಕ್ಕೆ ಜಮೀನನ್ನು ತಯಾರು ಮಾಡಿಕೊಂಡಿದ್ದಾರೆ. ಆದರೆ ನೀರು ಮಾತ್ರ ಇಲ್ಲ. ಕಳೆದ 10 ವರ್ಷಗಳಿಂದ ನಾಲೆಯಲ್ಲಿ ನೀರು ಬರುತ್ತದೆ ಎಂದು ಚಾತಕಪಕ್ಷಿಗಳ ಹಾಗೆ ಕಾದಿದ್ದಾರೆ. ಈಗ V. C. ನಾಲೆಯಲ್ಲಿ ಇರತಕ್ಕ ನೀರನ್ನು ಸಮರ್ಪಕವಾಗಿ ಮತ್ತು ಸಮನಾಗಿ ಎಲ್ಲರಿಗೂ ಹಂಚಿ ಕೊಡುವುದಕ್ಕೆ ಅವಕಾಶವಿದೆ. ಯಥೇಚ್ಛವಾಗಿ ನೀರು ಉಪಯೋಗಿಸುತ್ತಿರುವುದರಿಂದ ನೀರು ಸರಿಯಾದ ರೀತಿಯಲ್ಲಿ ಹಂಚಿಕೆಯಾಗುತ್ತಿಲ್ಲ. ಇಲ್ಲಿಸಿಟ್ ಔಟ್‌ಲೆಟ್‌ಗಳು ಇರುವುದರಿಂದ ಹೆಚ್ಚಿಗೆ ನೀರು ಪೋಲಾಗುತ್ತಿದೆ. ಅದನ್ನ ಖಂಡಿತ ತಡೆಯತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಮಾನ್ಯ ಮಂತ್ರಿಗಳು ಪ್ರಶ್ನೋತ್ತರ ಕಾಲದಲ್ಲಿ ಅಕ್ರಮವಾಗಿ ನೀರು ತೆಗೆದುಕೊಳ್ಳುತ್ತಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಇಂಜಿನಿಯರುಗಳು ರಕ್ಷಣೆ ಕೊಡಬೇಕೆಂದು ಕೇಳುತ್ತಿದ್ದಾರೆ ಎಂದು ತಿಳಿಸಿದರು. ಸರ್ಕಾರದವರು ಅಷ್ಟು ನಿಶ್ಶಕ್ತರಾದರೆ ಅಲ್ಲಿರತಕ್ಕ ರೈತರ ಜಮೀನಿಗೆ ಹೇಗೆ ನೀರನ್ನು ಒದಗಿಸುವುದು ಸಾಧ್ಯ ಎಂದು ನಾನು ಅವರನ್ನ ಕೇಳುತ್ತೇನೆ. ಹಲವಾರ ಬ್ರ್ಯಾಂಚ್ ಮತ್ತು ಉಕ್ಕಲಗೆರೆ ಬ್ರ್ಯಾಂಚ್‌ಗೆ ನಾಲೆಗಳೂ ಸಹ ಅದು ಅಭಾವ ಪ್ರದೇಶಕ್ಕೆ ಸೇರಿದ್ದು. ಈ ಭಾಗದಲ್ಲಿ 60 ಸಾವಿರ ಜನ ವಾಸಮಾಡುತ್ತಿದ್ದಾರೆ. ಅಲ್ಲಿ ಸಾಕಷ್ಟು ಜಮೀನು ಇದೆ. ಸಾಕಷ್ಟು ಮಳೆ ಮತ್ತು ನೀರು ಇಲ್ಲದೆತೊಂದರೆಯಾಗಿದೆ. ನಾಲಾ ನೀರು ಒದಗಿಸದಿದ್ದರೆ ಅಲ್ಲಿನ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಇದರ ಕಡೆ ಹೆಚ್ಚಿನ ಗಮನ ಕೊಡಬೇಕು. ವಿಶ್ವೇಶ್ವರಯ್ಯ ನಾಲೆಯ ಯೋಜನೆಯ ಪ್ರಕಾರ ಈ ನಾಲೆಗಳಿಗೆ ಕೊಡಬೇಕಾದಂತಹ ನೀರನ್ನು ಕೊಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈಗ ಇರತಕ್ಕ ಹಳೇ ಮೈಸೂರಿನ ಅಭಾವ ಪ್ರದೇಶವಾದ ಮಂಡ್ಯಾ ಜಿಲ್ಲೆ ಸಾಕಷ್ಟು ಉತ್ತಮವಾಗಿದೆ. ಅಭಾವ ಪ್ರದೇಶಕ್ಕೆ ಸೇರಿದ ಟಿ. ನರಸೀಪುರದ ತಾಲ್ಲೂಕಿನ ಗ್ರಾಮಗಳ ಜಮೀನುಗಳಿಗೆ ಹೆಚ್ಚು ನೀರು ಕೊಡುವುದಕ್ಕೆ ಗಮನ ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಪಡಿಸುತ್ತೇನೆ. ಕೊನೆಯ

ಅಚ್ಚು ಕಟ್ಟಿನ ಜನರಿಗೆ ಹೆಚ್ಚಿಗೆ ನೀರು ಕೊಡುವ ವಿಚಾರದಲ್ಲಿ ಜನರಿಂದ ಕಾವೇರಿ ನದಿಯ ಎಡದಂಡೆಯಿಂದ ಒಂದು ಕಾಂಟೂರ್ ಚಾನಲ್ ಮಾಡಿಸಿ ತುರಗನೂರ್ ಚಾನಲ್‌ಗೆ ಸೇರಿಸಿ, ಟೀ.ನರಸೀಪುರ, ಮಳವಳ್ಳಿ ತಾಲ್ಲೂಕಿನ ಕೊನೆ ಅಚ್ಚು ಕಟ್ಟಿನ ರೈತರುಗಳಿಗೆ ನೀರಾವರಿ ಸೌಕರ್ಯ ಒದಗಿಸಬೇಕು ಎಂದು ಬೇಡಿಕೆ ಇತ್ತು. ಬೇಡಿಕೆಯ ಪ್ರಕಾರ ಸರ್ಕಾರದವರು ಇನ್‌ವೆಸ್ಟಿಗೇಷನ್ ಮಾಡಿಸಿ ಎಸ್ಟಿಮೇಟನ್ನು ಸಹ ತಯಾರು ಮಾಡಿಸಿ. ಅದನ್ನು ಕಾರ್ಯರೂಪಕ್ಕೆ ತರದೆ ಕೈಬಿಟ್ಟಿರುವುದು ಸರಿಯಲ್ಲ. ಕಾವೇರಿ ನದಿಯ ಬಲದಂಡೆಯಲ್ಲಿ ನಾಲಾ ಬೇಡಿಕೆ ಇದ್ದದ್ದು ಪೂರ್ಣಯ್ಯ ನಾಲೆಯನ್ನ ಜೀರ್ಣೋದ್ಧಾರ ಮಾಡಿ 12 ಸಾವಿರ ಎಕರೆಗೆ ನೀರನ್ನು ಕೊಡಬೇಕೆಂದು. ಅದನ್ನು ಬಹಳ ವಿಸ್ತರಿಸಿ 12 ಸಾವಿರ ಎಕರೆಗೆ ಬದಲು 24 ಸಾವಿರ ಎಕರೆಗೆ ಹೆಚ್ಚಿಸುವುದರಿಂದ ಕಾವೇರಿಯ ಎಡದಂಡೆ ಕೊನೆ ಅಚ್ಚು ಕಟ್ಟಿಗೆ 12 ಸಾವಿರ ಎಕರೆ ಜಮೀನಿಗೆ ನೀರು ಖೋತಾ ಆಗಿದೆ. ಕಾವೇರಿ ಎಡದಂಡೆಯಿಂದ ಒಂದು ಕಾಂಟೂರ್ ಚಾನಲ್ ಮಾಡಿ V. C. ನಾಲಾದ ತುರಗನೂರು ಬ್ರಾಂಚ್ ನಾಲಾಕ್ಕೆ ಸೇರಿಸಿದರೆ ಕೊನೆಯ ಅಚ್ಚು ಕಟ್ಟುದಾರರಿಗೆ ನೀರು ಸಿಕ್ಕುತ್ತದೆ. ಕಾಂಟೂರ್ ಚಾನಲ್ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಪೂರ್ಣಯ್ಯ ನಾಲೆಯನ್ನು ಜೀರ್ಣೋದ್ಧಾರ ಮಾಡಿದರೆ ಅದರಿಂದ 12 ಸಾವಿರ ಎಕರೆಗೆ ನೀರು ಸಿಕ್ಕುತ್ತದೆ. ಅದನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳುತ್ತೇನೆ. ಈ ಸಲಹೆ ಪ್ರಕಾರ ಎರಡು ಕಡೆಯ ರೈತರುಗಳಿಗೂ ಅನುಕೂಲವಾಗುತ್ತದೆ. ತುರವನೂರು ಬ್ರಾಂಚ್ ನಾಲಾ ಹನ್ನೊಂದನೆ ಡಿಸ್ಟ್ರಿಬ್ಯೂಟರಿಯನ್ನು ಓಪನ್ ಮಾಡಬೇಕೆಂದು ಕಳೆದ 10 ವರ್ಷಗಳಿಂದ ಇದರ ಬಗ್ಗೆ ಜನರ ಬೇಡಿಕೆ ಇದೆ. ಈ 11ನೆ ಡಿಸ್ಟ್ರಿಬ್ಯೂಟರಿಗೆ ಐದು-ಆರು ಕ್ಯೂಸೆಕ್ಸ್ ನೀರು ಕೊಟ್ಟರೆ ಸಾಕು. ಸುಮಾರು 85 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಈ ಕೆಲಸವಾಗುತ್ತದೆ. ಈ ಬೇಡಿಕೆ ಪೂರೈಸಿಲ್ಲಾ ಆದರೂ ಎರಡು ಮೂರು ಮಂತ್ರಿ ಮಂಡಲಗಳು ಬಂದು ಹೋದವು. ಮಂತ್ರಿಗಳು ಮತ್ತು ಅಧಿಕಾರಿಗಳು ಯಾವಾಗ ಬಂದರೂ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಇವೊತ್ತಿನವರೆಗೂ ಕೆಲಸ ಆಗಿಲ್ಲ. ಅದಕ್ಕೆ ಎಸ್ಟಿಮೇಟ್ ಕೂಡ ತಯಾರಾಗಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ ಎರಡೂ ಆಗಿದೆ. ಸ್ಯಾಂಕ್ಷನ್ನಾಗಿ 10 ವರ್ಷಗಳಾದರೂ ತಾವು ಈ ಕೆಲಸ ಪೂರೈಸಿಲ್ಲ. ಅಲ್ಲಿಯ ಜನರು ನೀರಿಗಾಗಿ ಕಾದಿದ್ದಾರೆ. ಸಣ್ಣ ಪುಟ್ಟ ಹಿಡುವಳಿದಾರರು ಹೆಚ್ಚಿನ ಪ್ರಮಾಣದ ಭೂಮಿ ಇಲ್ಲದ ರೈತರು ಅವರಿಗೆ ನೀರೇ ಜೀವನಾಧಾರವಾಗಿದೆ. ಅದರಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಕೆ. ಆರ್. ಸಾಗರದ ಕೆಳಮಟ್ಟದ ನಾಲೆಗಳು ಹಳೆಯ ಕಾಲದ ನಾಲಾಗಳು. ಇವುಗಳಲ್ಲಿ ಕೆಲವು 300 ವರ್ಷಗಳು ಮತ್ತೆ ಕೆಲವು ನಾಲಾಗಳು ಒಂದು ಸಾವಿರ ವರ್ಷಗಳ ನಾಲೆಗಳಾಗಿವೆ. ಅವುಗಳ ಅಭಿವೃದ್ಧಿಯ ಕಡೆಗೆ ಸರ್ಕಾರದವರು ನಿಗಾ ಕೊಡಬೇಕು. ಹಳೆಯ ನಾಲೆಗಳಲ್ಲಿ ಎಂದರೆ ರಾಮಸ್ವಾಮಿ ನಾಲೆ. ಅದರಲ್ಲಿ ಸಾಕಷ್ಟು ನೀರು ಇದೆ. ನೀರು ಬಹಳ ಸ್ಪೀಡಾಗಿ ಹೋಗತಕ್ಕ ವ್ಯವಸ್ಥೆಯಲ್ಲಿ ಬಹಳ ಅಡಚಣೆ ಮತ್ತು ಸಿಲ್ಟ್ ಅಪ್ ಆಗಿದೆ. ಅದರ ಕಡೆ ಹೆಚ್ಚಿನ ಗಮನ ಕೊಡಬೇಕು. ನೀರನ್ನು ಸ್ಪೀಡಪ್‌ಮಾಡಿ ಕೊನೆಯ ಅಚ್ಚುಕಟ್ಟುದಾರರಿಗೆ ನೀರು ಸಿಕ್ಕತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಮಂತ್ರಿಮಂಡಲದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಇರಿಗೇಷನ್ ಆಯಕಟ್ಟಿನಲ್ಲಿ ಬೇಕಾದಷ್ಟು ಕಾರ್ಟ್‌ಟ್ರಾಕ್ ದಾರಿ ಇದೆ. ಆ ಆಯಕಟ್ಟಿನಲ್ಲಿರುವ ದಾರಿಗಳನ್ನು ಸರಿಯಾಗಿ ಕಾಪಾಡಿಕೊಂಡು ಬಂದಿಲ್ಲ. ರೆವಿನ್ಯೂ ಇಲಾಖೆಯವರು ಇಂಜಿನಿಯರಿಂಗ್ ಇಲಾಖೆಯವರು ಯಾರೂ ಅದನ್ನು ನೋಡುತ್ತಿಲ್ಲ. ಒತ್ತುವರಿಯಾಗಿರುತ್ತವೆ. ಕಾರ್ಟ್‌ಟ್ರಾಕ್ ಇಲ್ಲದೆ ವ್ಯವಸಾಯಕ್ಕೆ ತೊಂದರೆಯಾಗಿದೆ. ಆದ್ದರಿಂದ ಈ ಕಾರ್ಟ್‌ಟ್ರಾಕ್ ಕಡೆ ಸರ್ಕಾರದವರು ಹೆಚ್ಚಿಗೆ ಗಮನಕೊಟ್ಟು ಅದನ್ನು ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ. ಮತ್ತೆ ಸಿ. ಡಿ. ಎಸ್. ಮೇನ್ ಚಾನಲ್ ಎನಿದೆ. ಇದು ಸುಮಾರು 70 ಮೈಲಿ ಉದ್ದ ಹರಿಯುತ್ತದೆ. ಅದು ಮಂಡ್ಯ ಜಿಲ್ಲೆ ಮತ್ತು ಮೈಸೂರು ಜಿಲ್ಲೆ ಎರಡು ಜಿಲ್ಲೆಗಳಲ್ಲೂ ಹರಿದು ಬರತಕ್ಕ ನಾಲೆ. ಈ ನಾಲೆಯ ಕೊನೆಯಲ್ಲಿರತಕ್ಕ ಟೀ. ನರಸೀಪುರ ತಾಲ್ಲೂಕಿನ ರೈತರಿಗೆ ತೊಂದರೆಯಾಗುತ್ತಾ ಇದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಬೇಡಿಕೆಯನ್ನು ಜನರು ತಿಳಿಸುತ್ತಾ ಬಂದಿದ್ದಾರೆ. ಈ ನಾಲೆಯ ಕೊನೆಯ ಅಚ್ಚುಕಟ್ಟುದಾರರ ಅನುಕೂಲಕ್ಕಾಗಿ ಲೋಕಪಾವನಿ ಪ್ರಾಜೆಕ್ಟಿಗೆ ಗೇಟನ್ನು ಹಾಕಿ ಈ ಜಲಾಶಯದಿಂದ ಸಿ. ಡಿ. ಎಸ್. ಮೈನ್ ಚಾನಲ್ ಮೂಲಕ ಬನ್ನೂರು ಕೆರೆಗೆ ನೀರು ಸರಬರಾಜು ಮಾಡಿ ಕೊನೆಯ ಅಚ್ಚುಕಟ್ಟುದಾರರಿಗೆ ನೀರಿನ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬನ್ನೂರು ಕೆರೆ ಮತ್ತು ಸಿ. ಡಿ. ಎಸ್. ಎಕ್ಸ್‌ಟೆನ್ಷನ್ ನಾಲಾ ಕೆರೆ ಎನಿದೆ ಇದರಿಂದ 12 ಸಾವಿರ ಎಕರೆ ಜಮೀನು ನೀರಾವರಿಯಾಗಿರುತ್ತದೆ. ಈ ಕೆರೆಯಲ್ಲಿ ಹೂಳು ತುಂಬಿರುವುದರಿಂದ ಅದರಲ್ಲಿ ಎಷ್ಟು ನೀರು ಹಿಡಿಯಬೇಕೋ ಅಷ್ಟು ನೀರು ಹಿಡಿಯುತ್ತಾ ಇಲ್ಲ. ಹೂಳು ತೆಗೆಸಿ ಬಿಡಾವಣೆ ಮಾಡಿಸಿ 12 ಸಾವಿರ ಎಕರೆಗೆ ನೀರನ್ನು ಒದಗಿಸಿ ಸರಿಯಾದ ವ್ಯವಸ್ಥೆ

(ಶ್ರೀ ಟಿ. ಪಿ. ಬೋರಯ್ಯ)

ಮಾಡಬೇಕು ಎಂದು ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಕೆ. ಆರ್. ಎಸ್. ಕೆಳ ಮಟ್ಟದ ಅನೇಕ ನಾಲೆಗಳ ಸೇತುವೆಗಳು ಬಹಳ ಹಳೆಯ ಕಾಲದವು. ಅವುಗಳೆಲ್ಲಾ ಸಹಸ್ರಾರು ವರ್ಷಗಳ ಹಿಂದೆ ಕಟ್ಟಿಸಿದಂತಹ ಸೇತುವೆಗಳು, ಈಗ ಆ ಸೇತುವೆಗಳು ಸಾಗಾಣಿಕೆಗೆ ಯೋಗ್ಯ ವಾಗಿಲ್ಲ. ಆ ಸೇತುವೆಗಳು ಅಲ್ಲಲ್ಲೇ ಮುರಿದುಬಿದ್ದಿವೆ. ಬಂಡಿಗಳು ಹೋಗುವುದಕ್ಕೆ ಆಗುತ್ತಿಲ್ಲ. ಉದಾಹರಣೆಗೆ ರಾಮಸ್ವಾಮಿ ನಾಲೆಯ 13 ಮೈಲಿ 2 ಫರ್ಲಾಂಗ್‌ನಲ್ಲಿ ಒಂದು ಸೇತುವೆ ಇದೆ. ಇದನ್ನು ಕಟ್ಟಿಸುತ್ತೇವೆಂದು 20 ವರ್ಷಗಳಿಂದ ಹೇಳುತ್ತಿದ್ದಾರೆ. ಅದನ್ನು ಕಟ್ಟುವುದಕ್ಕೆ ಒಂದು ಸಾರಿ ಕಲ್ಲು ತರಿಸಿದ್ದರು. ಆದರೆ ಹತ್ತು ವರ್ಷವಾದರೂ ಕೆಲಸ ಶುರು ಮಾಡಲಿಲ್ಲ.

ಇನ್ನೊಂದು ವಿಷಯ. ಸಿ. ಡಿ. ಎಸ್. ಎಕ್ಸ್‌ಟೆನ್ಷನ್ ಚಾನಲ್ ಮತ್ತು ರಾಮಸ್ವಾಮಿ ಚಾನಲ್ ಅಪ್ಪರ್ ಮಾರ್ಜಿನ್ನಿನ ಜಮೀನುಗಳಿಗೆ ಲಿಫ್ಟ್ ಇರಿಗೇಷನ್ ಪಂಪುಗಳನ್ನು ಹಾಕಿಕೊಂಡಿ ದ್ದಾರೆ. ಇದು ಅಕ್ರಮವಾಗಿ ಹಾಕಿಕೊಂಡಿರುವುದೇ ಹೊರತು ಇದಕ್ಕೆ ಇಲಾಖೆಯ ಒಪ್ಪಿಗೆಯನ್ನು ಪಡೆದಿಲ್ಲ. ನಾಲಾಗಳಲ್ಲಿ ಹೆಚ್ಚಿನ ನೀರು ಇಲ್ಲ. ಇದರಿಂದ ಕೊನೆಯ ಅಚ್ಚುಕಟ್ಟುದಾರರಿಗೆ ತೊಂದರೆಯಾಗಿದೆ. ಇಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು. ಸರ್ಕಾರದವರು ಕಂಡು ಸಹ ಕಾಣದಂತೆ ಇದ್ದಾರೆ. ಇವುಗಳಿಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಸ್ವಾಮಿ, ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ಕೃಷ್ಣರಾಜ ಬ್ರಿಡ್ಜಿನಿಂದ ರಾಮಸ್ವಾಮಿ ನಾಲಾ ಏರಿಯ ಮೇಲೆ ಎಸ್. ತ್ರೀ. (S-3) ರಸ್ತೆಗೆ ಸೇರುವ ಒಂದು ರಸ್ತೆ ಇದೆ. ಈ ರಸ್ತೆಗೆ ಒಂದು ಸಾರಿ ಸರ್ಕಾರದವರು 45,000 ರೂಪಾಯಿ ಗ್ರಾಂಟು ಕೊಟ್ಟು ಕೆಲಸ ಮಾಡಿಸಿರುತ್ತೀರಿ. ಇದರಿಂದ ಸ್ವಲ್ಪಮಟ್ಟಿಗೆ ರಸ್ತೆ ಸುಧಾರಿಸಿದೆ. ಈ ರಸ್ತೆ ಕರಿಮಣ್ಣು ಪ್ರದೇಶದಲ್ಲಿ ಹೋಗುತ್ತಾ ಇರುವುದರಿಂದ ರಸ್ತೆಗೆ ಹೆಚ್ಚಿನ ರಿಪೇರಿಯಾಗಬೇಕಾಗಿರುತ್ತೆ. ಈ ಪ್ರದೇಶದಲ್ಲಿ ವಾಸಮಾಡುವ ಸುಮಾರು ಹತ್ತು ಹದಿನೈದು ಸಾವಿರ ಜನಗಳಿಗೆ ಈ ರಸ್ತೆಯಲ್ಲದೆ ಬೇರೆ ರಸ್ತೆ ಇಲ್ಲಾ. ಈ ರಸ್ತೆಯನ್ನು ಪಿ. ಡಬ್ಲ್ಯು. ಡಿ.ಗೆ ಸೇರಿಸಿಕೊಂಡು ಜನರಿಗೆ ಸಂಚಾರ ಸೌಕರ್ಯವನ್ನು ಮಾಡಿಸಿಕೊಡುವಂತೆ ಒತ್ತಾಯ ಪಡಿಸುತ್ತೇನೆ. ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ, ಈ ಇಲಾಖೆ ಸರಕಾರದ ಆದಾಯದಲ್ಲಿ ಬಹು ಹೆಚ್ಚಿನ ಭಾಗ ಹಣವನ್ನು ಉಪಯೋಗಿಸಿಕೊಂಡು ಒಳ್ಳೆಯ ಕೆಲಸ ಮಾಡುವ ಇಲಾಖೆಯೆಂದು ಪ್ರಸಿದ್ಧವಾಗಿದೆ. ಅದಕ್ಕೆ ಸರಿಯಾಗಿ ಈ ಇಲಾಖೆಗೆ ಲೋಕೋಪಯೋಗಿ ಇಲಾಖೆ ಎಂದು ಇಟ್ಟಿರುವ ಹೆಸರು ಕೇಳುವುದಕ್ಕೂ ಕೂಡ ಚೆನ್ನಾಗಿ ಇದೆ, ಅರ್ಥಗರ್ಭಿತವಾಗಿದೆ. ಹಿಂದೆ ಈ ಮರಾಮತ್ ಇಲಾಖೆಯಲ್ಲಿ ಕೆಲಸ ಬಹು ಕರಾಮತ್ ಆಗಿ ನಡೆಯುತ್ತಿತ್ತು. ಜನಗಳು ಈ ಇಲಾಖೆಯಿಂದ ಉತ್ತಮ ಮಟ್ಟದ ಕೆಲಸ ಬಯಸುತ್ತಾರೆ, ಆದರೆ ಅಂಥ ಕೆಲಸವಾಗುವುದಿಲ್ಲ. ಈಗ ಬೇಕಾಗಿರತಕ್ಕಂಥ ಕೆಲಸ ಮಾಡಬೇಕಾದರೆ ಮುಂದಿನ ವರ್ಷ ಅದು ಆನ್ಯುಯಲ್ ರಿಪೇರ್ಸ್‌ಕ್ಕೆ ಬರಬೇಕು ಎಂಬ ಭಾವನೆಯಿಂದ ಕೆಲಸ ಮಾಡುತ್ತಾರೆ. ಹಿಂದಕ್ಕೆ ಮಾಡಿರತಕ್ಕಂಥ ಕೆಲಸಗಳು ಸಾವಿರಾರು ವರ್ಷಗಳವರೆಗೆ ಬಂದೋಬಸ್ತಾಗಿರಬೇಕೆಂದು ಆ ರೀತಿ ಕೆಲಸ ಮಾಡುತ್ತಿದ್ದರು. ಈಗ ಮಾಡಿದ ಕೆಲಸಕ್ಕೆ ಒಂದು ವರ್ಷದಲ್ಲಿ ಆನ್ಯುಯಲ್ ರಿಪೇರ್ಸ್ ಮಾಡಬೇಕಾಗುತ್ತದೆ. ಕಂಟ್ರಾಕ್ಟರುಗಳಿಗೆ ಉಪಕಾರ ಮಾಡಬೇಕು ಎನ್ನುವ ರೀತಿಯಲ್ಲಿ ಕೆಲಸ ಅವರಿಗೆ ಕೊಡಬೇಕು ಎಂಬ ಭಾವನೆ ಸರಕಾರಕ್ಕೆ ಬರುತ್ತದೆ. ಸರಕಾರ 56 ಕೋಟಿ 100 ಕೋಟಿ ಹಣ ಮೈನರ್ ಇರಿಗೇಷ ನ್ನಿಗೆ ಒದಗಿಸತಕ್ಕಂಥಾದ್ದು ಬಹಳ ಅಭಿನಂದನೀಯವಾದ ವಿಚಾರ. ಆಹಾರ ಅಭಾವ ಕಾಲದಲ್ಲಿ ಉತ್ತಮ ಕೆಲಸ ಮಾಡಿ ಹೆಚ್ಚು ಆಹಾರ ಉತ್ಪತ್ತಿ ಮಾಡಬೇಕಾದುದು ಪ್ರಾಮುಖ್ಯವಾದುದು. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಸರಕಾರ ಮಾಡುತ್ತಿದ್ದಾರೆ. ಆದರೆ ಸದ್ಯಕ್ಕೆ ಇದು ಹೆಚ್ಚಾಗಿ ಉಪಯೋಗವಾಗದೆ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಈಗ ಇರತಕ್ಕಂಥ ಪರಿಸ್ಥಿತಿ ಯನ್ನು ಸರಿಪಡಿಸುವುದಕ್ಕೆ ಹೆಚ್ಚು ಆಹಾರ ಪಡೆಯುವುದಕ್ಕೆ ಈ ಮೈನರ್ ಇರಿಗೇಷನ್ ಒಳ್ಳೆಯ ದಾಗಿದೆ. ಹಿಂದಕ್ಕೆ ನಮ್ಮ ದೇಶದಲ್ಲಿ ಸಾವಿರಾರು ಕೆರೆಗಳನ್ನು ಕಟ್ಟಿದ್ದಾರೆ, ಈಗ ಏನಾಗಿದೆ ಅಂದರೆ ಸಣ್ಣ ಸಣ್ಣ ಕೆರೆಗಳಲ್ಲಿ ಹೂಳು ನಿಂತು ಒಣಗಿ ಹೋಗಿರುವುದರಿಂದ ಪ್ರಭಾವೀ ಜನರು ಕೆರೆ ಒಡೆದು ಜಮೀನು ಮಾಡಿಕೊಂಡಿದ್ದಾರೆ. ಕೆರೆ ಕಟ್ಟುವುದರಿಂದ ಎಷ್ಟು ಅನುಕೂಲವಾಗ ಬೇಕಾಗಿತ್ತೋ ಅದು ಈ ಪ್ರಭಾವದಿಂದ ತಪ್ಪಿ ಹೋಗಿದೆ. ಇಂಥ ನಿದರ್ಶನಗಳು ಇವೆ. ಇದನ್ನು ನೋಡಿ ಸರಕಾರ ಏನು ಮಾಡುತ್ತಿದ್ದಾರೆ? ಹೆಚ್ಚಾಗಿ ಮೈನರ್ ಇರಿಗೇಷನ್ನಿಗೆ ಹಣ ವ್ಯಯ

ಮಾಡುತ್ತಿರುವುದರಿಂದ ಮಾಡುವ ಕೆಲಸವನ್ನು ಬಂದೋಬಸ್ತಾಗಿ ತೀವ್ರವಾಗಿ ಮಾಡಿದರೆ ಇಷ್ಟು ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದು ಸಾರ್ಥಕವಾಗುತ್ತದೆ ಎಂದು ಈ ಸಮಯದಲ್ಲಿ ಹೇಳ ಬಯಸುತ್ತೇನೆ.

ಇತ್ತೀಚೆಗೆ ರೋಡ್ ಮತ್ತು ಬಿಲ್ಡಿಂಗ್ ಕೆಲಸ ನಿಲ್ಲಿಸಿಬಿಡಬೇಕೆಂದು ಒಂದು ಆರ್ಡರ್ ಆಗಿದೆ. ಇದು ಒಳ್ಳೆಯ ಸಲಹೆಯಾದರೂ ಕೂಡ ಈ ಆರ್ಡರ್ ಸರಿಯಾಗಿ ಜಾರಿ ಮಾಡಿದರೆ ಅರ್ಧದವರೆಗೆ ಮಾಡಿದ ಕೆಲಸಗಳು ನಿಂತು ಹೋಗುತ್ತವೆ. ಕೆಲವು ಕಡೆ ರಸ್ತೆ ಮಾಡುವುದಕ್ಕೆ ಜಲ್ಲಿ ತಂದು ಹಾಕಿದ್ದಾರೆ, ಕೆಲವು ಕಡೆ ಕಲ್ಲು ತಂದು ಹಾಕಿದ್ದಾರೆ, ಅಂಥ ಕೆಲಸಗಳು ನಿಂತು ಹೋದರೆ ಸರಕಾರಕ್ಕೆ ಲುಕ್ಸಾನವಾಗುತ್ತದೆ. ಅಲ್ಲಿ ತಂದು ಹಾಕಿದ ಜಲ್ಲಿ ಕಲ್ಲು ಹೊರಟು ಹೋಗುತ್ತವೆ. ಇದರಲ್ಲಿ ಇನ್ನೊಂದು ರಸ್ತೆಗೆ ಅದನ್ನು ಹಾಕಿ ಅನುಕೂಲ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಈ ಇಲಾಖೆಯಲ್ಲಿ ವಿಜಿಲೆನ್ಸ್ ಕಮಿಷನ್ ಹಾಗೆ ಮಾಡಬೇಕಾದ ಕೆಲಸ ಬೇರೆ ಯಾವ ಇಲಾಖೆಯಲ್ಲಿ ಇಲ್ಲ. ಈ ಇಲಾಖೆಯಲ್ಲಿ ಕೆಲಸ ಮಾಡಬೇಕಾದರೆ ಹಿಂದಿನ ಜನ್ಮದಲ್ಲಿ ಈಶ್ವರ ಪೂಜಾ ಮಾಡಿ ವರ ಪಡೆದು ಶಾಶ್ವತವಾಗಿ ಇರತಕ್ಕ ಕೆಲಸಗಳನ್ನು ಜನರಿಗೆ ಅನುಕೂಲವಾಗತಕ್ಕ ಕೆಲಸಗಳನ್ನು ಮಾಡಿ ಅವರ ಹೆಸರು ಶಾಶ್ವತವಾಗಿ ನಿಲ್ಲಬೇಕು ಎಂದು ಇತ್ತು. ಈ ಭಾವನೆಯಿಂದ ಹಿಂದಕ್ಕೆ ಕೆರೆಗಳನ್ನು ಕಟ್ಟಿದ್ದಾರೆ. ಇಂಥ ಕೆರೆಗಳು ಚಾನಲ್ಸ್‌ಗಳು ಇವೆ. ಹಿಂದಕ್ಕೆ ಒಬ್ಬ ರಾಜ ಕೆಂಡತಿ ತಿಮ್ಮಸಾನಿ ಹೆಸರಿನಲ್ಲಿ ಚಿಂತಾಮಣಿ ಹತ್ತಿರ ಒಂದು ಕೆರೆ ಕಟ್ಟಿಸಿದ್ದಾರೆ. ಆದರೆ ಇತ್ತೀಚೆಗೆ ಕಟ್ಟಿಸಿದ ಕೆರೆಗಳು ಒಂದು ಸಾರಿ ಫ್ಲಡ್ ಬಂದರೆ ಒಡೆದು ಹೋಗಿ ಹಣ ಖರ್ಚು ಮಾಡಿದ್ದು ಹಾಳಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಅಧಿಕಾರಿಗಳಲ್ಲಿ ಕಾನೂನು ಭಯ ಇಲ್ಲ, ಸರಕಾರದ ಭಯವಿಲ್ಲ. ಸರಕಾರದ ಭಯ ಹೋಗಿ ಬಿಟ್ಟಿದೆ. ಸಣ್ಣ ಅಧಿಕಾರಿಗಳು ಹಿರಿಯ ಅಧಿಕಾರಿಗಳ ಮೇಲೆ ಅವಲಂಬಿಸಿರುತ್ತಾರೆ. ಯಜಮಾನನ ನಡತೆ ಚೆನ್ನಾಗಿ ಇದ್ದರೆ ಮಕ್ಕಳ ನಡತೆ ಚೆನ್ನಾಗಿ ಇರುತ್ತದೆ. ಹಿರಿಯರ ನಡತೆ ಸತ್ಯವಾಗಿ ಇದ್ದರೆ ಕಿರಿಯರು ಅದನ್ನು ಅನುಸರಿಸುತ್ತಾರೆ. ಅದೇ ರೀತಿಯಾಗಿ ಕಿರಿಯ ಅಧಿಕಾರಿಗಳು ದೇವರಿಗೆ ಸಾಕ್ಷಿಯಾಗಿ ಸತ್ಯದಿಂದ ನಿಜವಾಗಿ ಕೆಲಸ ಮಾಡಿದರೆ ಈ ಇಲಾಖೆಯಿಂದ ಜನರಿಗೆ ಹಾಗು ದೇಶಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಸಾಲುಮರಗಳ ಪರಿಸ್ಥಿತಿ ಹೇಗೆ ಇದೆ ಅಂದರೆ ಈ ಮರಗಳಿಗೆ ಕಾಂಗ್ರೆಸ್ ಕಟ್ ಕನ್ನಡ ಕಟ್ ಎಂದು ಹೇಳುವ ಹಾಗೆ ಆಗಿದೆ. ಒಂದು ಕಡೆ ಹಳ್ಳಿಯವರು ಕಡಿಯುತ್ತಾರೆ. ಇನ್ನೊಂದು ಕಡೆ ಕಂಟ್ರಾಕ್ಟರ್ಸ್ ಕಡಿಯುತ್ತಾರೆ, ಹೆವಿ ವೆಹಿಕಲ್ಸ್ ಹೋಗುವುದಕ್ಕೆ ತೊಂದರೆಯಾಗುತ್ತದೆಂದು ಅವನೂ ಕಡಿಯುತ್ತಾನೆ. ಹೀಗೆ ನಾಲ್ಕು ದಿಕ್ಕಿನಿಂದ ಮರ ಕಡಿಯುತ್ತಾರೆ. ಚಿತ್ರದಲ್ಲಿ ಬರೆದ ಹಾಗೆ ಈ ಸಾಲುಮರಗಳು ಉದ್ಧಕ್ಕೆ ಹೋಗಿವೆ. ಸಾಲು ಮರ ಹೋಗಿ ಸುಳ್ಳು ಮರ ಆಗಿವೆ. ಮುಂದಿನ ವರ್ಷ ಮನೆ ಕಟ್ಟುವುದಕ್ಕೆ ಮರ ಬೇಕೆಂದು ಮರ ಕಡಿದು ಇಟ್ಟುಕೊಳ್ಳುತ್ತಾರೆ. ಈ ರೀತಿ ಎಲ್ಲರೂ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಸರಕಾರ ವನಮಹೋತ್ಸವ ಕಾರ್ಯಕ್ರಮ ನಡೆಸುತ್ತಿದ್ದಾರೆ. ಒಂದು ಮರ ಕಡಿದರೆ ಇನ್ನೊಂದು ಮರ ನೆಡಬೇಕೆಂದು ಇದ್ದರೂ ಕೂಡ ಯಾರೂ ಮರಗಳನ್ನು ನೆಡುತ್ತಿಲ್ಲ. ವನಮಹೋತ್ಸವದಲ್ಲಿ ನೆಟ್ಟಂಥ ಮರಗಳನ್ನು ಕಡಿದು ಸೌದೆಗಾಗಿ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಜನರಲ್ಲಿ ಯಾವ ಭಯವೂ ಇಲ್ಲ. ಈ ರೀತಿ ಸಂದರ್ಭ ಇರುವುದರಿಂದ ಚಾನಲ್ ಟೇಲ್ ಎಂಡ್ ನಲ್ಲಿರುವವರಿಗೆ ನೀರು ಸಿಕ್ಕುವುದಿಲ್ಲ. ಇದನ್ನು ನಾನು ಅನುಭವಿಸಿದ್ದೇನೆ. ತನ್ನ ತೋಟ ಹಾಳಾಗಬಾರದು ಅದನ್ನು ಉಳಿಸಿಕೊಳ್ಳಬೇಕು ಎಂದು ನೀರು ಉಪಯೋಗಿಸಿಕೊಳ್ಳುತ್ತಾರೆ. ಈ ರೀತಿಯಾದರೆ ರೈತ ಉಳಿಯುವುದಕ್ಕೆ ಸಾಧ್ಯವಿದೆಯೇ? ನೀರು ಕಂದಾಯ ಕೊಡದೇ ಇದ್ದರೂ ಅವರಿಗೆ ಹೆದರಿಕೆ ಇಲ್ಲದೆ ನೀರು ಉಪಯೋಗಿಸಿಕೊಳ್ಳುತ್ತಾರೆ. ಅಂಥವರ ಮೇಲೆ ಯಾವ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಕಾನೂನು ಸರಿಯಾಗಿ ಉಪಯೋಗಿಸಿಕೊಂಡರೆ ಬಡವರಿಗೆ ಉಪಯೋಗವಾಗುತ್ತದೆಂದು ಮಂತ್ರಿಗಳ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಕೆಲವು ಅಧಿಕಾರಿಗಳಿಂದ ಅಧಿಕಾರ ಕಿತ್ತುಕೊಂಡಿದ್ದಾರೆ. ಅಸಿಸ್ಟೆಂಟ್ ಎಂಜಿನಿಯರು ಏನೂ ಮಾಡುವ ಹಾಗೆ ಇಲ್ಲ. ಎಲ್ಲವೂ ಚೀಫ್ ಎಂಜಿನಿಯರ್‌ರಿಂದ ಆಗಬೇಕು. ಇದರಿಂದ ಕೆಲವು ಸಮಯದಲ್ಲಿ ಜನರಿಗೆ ತೊಂದರೆಯಾಗುತ್ತದೆ. ಅಸಿಸ್ಟೆಂಟ್ ಎಂಜಿನಿಯರು ಇದು ತಕ್ಷಣ ಆಗಬೇಕು ಎಂದು ಹೇಳಿದರೂ ಕೂಡ ಎಗ್ಸಿಕ್ಯೂಟಿವ್ ಎಂಜಿನಿಯರು ಒಪ್ಪಲಿಲ್ಲ ಅಂದರೆ ಕೆಲಸ ಹಾಳಾಗಿ ಹೋಗುತ್ತದೆ. ಇದರಿಂದ ಜನರಿಗೆ ಕಷ್ಟವಾಗಿದೆ. ಈ ರೀತಿ ಕೆರೆ ಕಟ್ಟೆಗಳ ರಿಪೇರಿ ಕೆಲಸವಾಗದೇ ಇರತಕ್ಕ ನಿದರ್ಶನಗಳು ಇವೆ. ಒಂದು ಕೆಲಸದ ಬಗ್ಗೆ ಸರಿಯಾದ ಎಸ್ಟಿಮೇಟು ಕೊಟ್ಟಿದ್ದರೂ ಕೂಡ ಒಂದು ವರ್ಷದವರೆಗೆ ಕೆಲಸ ಮಾಡುವುದಿಲ್ಲ. ಎಸ್ಟಿಮೇಟು ರಿವೈಜ್ ಆಗಲಿ ಎಂದು ಈ ರೀತಿ ಮಾಡುತ್ತಾರೆ. ಸರಕಾರ ಹೆಚ್ಚಿನ ರೀತಿಯಲ್ಲಿ ಕಾನೂನು ಅನುಸರಿಸಿ ಸಮಾಜಕ್ಕೆ ಆಗುವ ತೊಂದರೆ ತಪ್ಪಿಸಬೇಕು ಎಂದು ಹೇಳುತ್ತೇನೆ.

(ಶ್ರೀ ಕೆ. ಎಂ. ತಮ್ಮಯ್ಯ)

ಎಲೆಕ್ಟ್ರಿಸಿಟಿ ವಿಚಾರ ಎಲ್ಲರೂ ಮಾತನಾಡಿದ್ದಾರೆ. ನಮ್ಮ ಕಡೆ ಬಹಳ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಸೌಕರ್ಯ ಇಲ್ಲ. ಇದಕ್ಕೆ ತೀವ್ರದಿಂದ ಗಮನ ಕೊಟ್ಟು ಸರಕಾರ ಈ ಕೆಲಸ ಮಾಡಿಕೊಡಬೇಕು. ನಮ್ಮ ಊರು ಮದಗನಕೆರೆಗೆ ವಿದ್ಯುತ್ ಸೌಕರ್ಯ ಒದಗಿಸಿ ಕೊಡಬೇಕು. ನಮ್ಮಲ್ಲಿ ಏಳೆಂಟು ಕೆರೆಗಳಲ್ಲಿ ನೀರು ತುಂಬುತ್ತದೆ. ಅಲ್ಲಿ ಅನ್‌ಆಥರೈಜ್ಡ್ ಆಗಿ ಕಲ್ಟಿವೇಶನ್ ಮಾಡುತ್ತಾರೆ. ಇದರಿಂದ ತೊಂದರೆಯಾಗಿದೆ. ಇದಕ್ಕೆ ಸರಕಾರ ಗಮನ ಹಾಕಿದ್ದಾರೆಂದು ತಿಳಿದು ಬಂದಿದೆ. ಜನರ ತೊಂದರೆ ಹೋಗಲಾಡಿಸಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಸರ್ಕಾರದ ವತಿಯಿಂದ ಲೋಕೋಪಯೋಗಿ ಶಾಖೆಯ ಬೇಡಿಕೆಗಳನ್ನು ಮಾನ್ಯ ಸಚಿವರು ಮಂಡಿಸಿರುವುದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಒಂದೆರಡು ಮಾತನ್ನು ನನ್ನ ಕ್ಷೇತ್ರದ ಬಗ್ಗೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿರುವ ಕೆಲವು ನ್ಯೂನತೆಗಳ ಬಗ್ಗೆ ಹೇಳಲು ಇಚ್ಛಿಸುತ್ತೇನೆ.

ಹಳೇ ಮೈಸೂರು ಭಾಗದಲ್ಲಿ ಸಣ್ಣ ಸಣ್ಣ ಕೆರೆಗಳ ಜೀರ್ಣೋದ್ಧಾರ ಮತ್ತು ಕೆಲವು ಹೊಸ ಕೆರೆಗಳ ನಿರ್ಮಾಣ ಆಗಬೇಕಾಗಿರುವುದರಿಂದ 1967-68ನೇ ಸಾಲಿನ ಬಜೆಟಿನಲ್ಲಿ ನಮೂದಿಸಿರುವ ಪ್ರಕಾರ 42,000 ಕೆರೆಗಳು ಇಡೀ ಸಂಸ್ಥಾನದಲ್ಲಿರುವ ಕಾಲದಲ್ಲಿ ಕೇವಲ 4,70,00,000 ರೂಪಾಯಿಗಳನ್ನು ಸರ್ಕಾರದವರು ಈ ಕಾರ್ಯಕ್ಕೆ ಖರ್ಚು ಮಾಡಬೇಕೆಂದು ಆಲೋಚನೆ ಮಾಡಿದ್ದಾರೆ. ಇದರ ಬಗ್ಗೆ ಹೇಳುವುದಾದರೆ ಹಳೆ ಕೆರೆಗಳ ರಿಪೇರಿ, ತೂಬುಗಳ ರಿಪೇರಿ, ಕಟ್ಟೆಗಳು, ಪಿಕಪ್‌ಗಳು, ಲಿಫ್ಟ್ ಇರಿಗೇಷನ್ ಮತ್ತು ಸಣ್ಣಪುಟ್ಟ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವುದಕ್ಕೆ ಇಟ್ಟಿರುವ ಹಣ ಏನೇನೂ ಸಾಲದು ಎಂದು ಸೂಚಿಸುತ್ತೇನೆ. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಕೊಡುವುದು ಉತ್ತಮ. ಬೇರೆ ಸಂಸ್ಥಾನಗಳಲ್ಲಿರುವ ನೀರಾವರಿ ಪ್ರದೇಶಕ್ಕೆ ನಮ್ಮ ಸಂಸ್ಥಾನವನ್ನು ಹೋಲಿಸಿ ನೋಡಿದರೆ ನಮ್ಮ ಮೈಸೂರು ಸಂಸ್ಥಾನದಲ್ಲಿ 9.16 ಪರ್ಸೆಂಟ್ ಮಾತ್ರ ನೀರಾವರಿ ಪ್ರದೇಶವಿರುತ್ತದೆ. ಪಕ್ಕದ ರಾಜ್ಯವಾದ ಮದ್ರಾಸಿನಲ್ಲಿ 40 ಪರ್ಸೆಂಟ್, ಆಂಧ್ರದಲ್ಲಿ 27 ಪರ್ಸೆಂಟ್ ಇದೆ. ಹೀಗಿರುವಾಗ ತ್ವರಿತವಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಂಡು, ಭಾರಿ ನೀರಾವರಿ ಯೋಜನೆಗಳ ಕಾರ್ಯದಲ್ಲಿ ಬಹಳ ತಡವಾಗುವುದರಿಂದ ಅವಕ್ಕೆ ಹಣ ಖರ್ಚು ಮಾಡಿ, ಖರ್ಚು ಮಾಡಬಾರದು ಎಂದು ಹೇಳುವುದಿಲ್ಲ; ಸಣ್ಣಪುಟ್ಟ ಕೆರೆಗಳ ಜೀರ್ಣೋದ್ಧಾರ ಮತ್ತು ಹೊಸ ಕೆರೆಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕು. ಅವುಗಳಿಗೆ ಹತ್ತಾರು ಸಾವಿರ ರೂಪಾಯಿಗೆ ಜಾಸ್ತಿ ಖರ್ಚಾಗುವುದಿಲ್ಲ. ಇಂಥ ಯೋಜನೆಗಳನ್ನು ಸರ್ಕಾರ ಗಮನದಲ್ಲಿಟ್ಟು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಕಾರ್ಯಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು. ಎಲ್ಲೆಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗಳಲ್ಲಿ ಸಣ್ಣಪುಟ್ಟ ಕೆರೆಗಳನ್ನು ಕಟ್ಟಿಸುವುದು, ಕೆರೆಗಳನ್ನು ದುರಸ್ತಿ ಮಾಡಿಸುವುದು ಇಂಥ ಕೆಲಸಗಳನ್ನು ಮಾಡದೆ ಹೋದರೆ ನಮ್ಮ ಜನಗಳಿಗೆ ಅದರಲ್ಲಿಯೂ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಒಂದೆರಡು ಕೆಲಸ ಮಾಡಿಸಬೇಕಾದರೆ ಬಹಳ ಕಷ್ಟವಾಗುತ್ತದೆ.

ನಾವು ಇಲ್ಲಿ ಪ್ರಶ್ನೆಗಳ ಮೂಲಕ ಕೇಳಿದ್ದಕ್ಕೆ ಜವಾಬು ಕೊಟ್ಟಿರುತ್ತಾರೆ; ಸ್ಪಿಲ್ ಓವರ್ ವರ್ಕ್ಸ್ ಮುಗಿಯಬೇಕು, ಅವುಗಳನ್ನು ಮೊದಲು ಮುಗಿಸಬೇಕು ಎಂದು ಹೇಳುತ್ತಾರೆ. ಈ ರೀತಿ ಕೆಲಸಗಳಾಗದೆ ಉಳಿಯುವುದಕ್ಕೆ ಆಯಾ ಕ್ಷೇತ್ರದ ಜನಗಳಾಗಲೀ, ಆ ಕ್ಷೇತ್ರದ ಪ್ರತಿನಿಧಿಗಳಾಗಲೀ ಜವಾಬ್ದಾರರಲ್ಲ ಎಂದು ಕಳಕಳಿಯಿಂದ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅನೇಕ ಕೆಲಸಗಳನ್ನು ತೆಗೆದುಕೊಂಡಿರುವ, ಸಣ್ಣ ಕೆರೆಗಳ ಕೆಲಸವಾಗಲೀ ಯಾವುದೇ ಕೆಲಸವಾಗಲೀ, ಅದನ್ನು ತೆಗೆದುಕೊಂಡಿರುವ ಕಂಟ್ರಾಕ್ಟರುಗಳು ಕೆಲಸವನ್ನು ಮಾಡದೆ ವ್ಯಥಾ ಕಾಲಹರಣ ಮಾಡಿ ಅಂದಾಜುಗಳು ಪುನರ್ವಿಮರ್ಶೆ ಆಗುವಂತೆ ಮಾಡಿದ್ದಾರೆ. ಇದಕ್ಕೆ ಅವರೇ ಜವಾಬ್ದಾರರು, ಜನಗಳು ಜವಾಬ್ದಾರರಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಕಂಟ್ರಾಕ್ಟರುಗಳ ಈ ನೀತಿಯಿಂದ ಕೆಲಸಗಳು ಉಳಿದುಹೋಗಲು ಕಾರಣವಾಗಿದೆ. ಇಂಥ ಕೆಲಸಗಳು ಪೂರೈಸುವವರೆಗೂ ಹೊಸ ಕೆರೆಗಳ ನಿರ್ಮಾಣವಾಗಲೀ, ಹಳೆಯ ಕೆರೆಗಳ ಜೀರ್ಣೋದ್ಧಾರವಾಗಲೀ ಆಗುವುದಕ್ಕೆ ಸಾಧ್ಯವಾಗುವುದಿಲ್ಲ, ಹಳೇ ಕೆಲಸಗಳು ಪೂರ್ತಿಯಾದ ಮೇಲೆ ಹೊಸ ಕೆಲಸಗಳಿಗೆ ಹಣ ಕೊಡುತ್ತೇವೆ ಎಂದು ಹೇಳುವುದು ನ್ಯಾಯವಲ್ಲ ಎಂದು ತಿಳಿಸಲು ಇಚ್ಛಿಸುತ್ತೇನೆ. ಈ ರೀತಿ ಕೆಲಸಗಳು ಮುಗಿಯದೆ ಉಳಿಯುವುದಕ್ಕೆ ಯಾರು ಕಾರಣರೋ, ಯಾರು ಜವಾಬ್ದಾರರೋ ಅವರ ಮೇಲೆ ಕ್ರಮ ತೆಗೆದುಕೊಂಡು, ಆಗಿರುವ ಲೋಪವನ್ನು ಸರಿಪಡಿಸಬೇಕೇ ಹೊರತು ಸ್ಪಿಲ್ ಓವರ್ ವರ್ಕ್ಸ್ ಉಳಿದಿವೆ

ಎಂದು ಹೊಸದಾಗಿ ಆಗಬೇಕಾದ ಕೆಲಸಗಳನ್ನು ತಡೆಹಿಡಿಯುವುದರಿಂದ ಮನಸ್ಸಿಗೆ ಬಹಳ ನೋವಾಗುತ್ತದೆ.

ಅನೇಕ ಮಾನ್ಯ ಸದಸ್ಯರು ಸೂಚಿಸಿದಂತೆ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣ ಅಖಿಲ ಭಾರತ ಮಟ್ಟದಲ್ಲಿ ಮತ್ತು ಸಂಸ್ಥಾನ ಮಟ್ಟದಲ್ಲಿ ಆಗಬೇಕು ಎಂದು ಇರುವ ಕಾಲದಲ್ಲಿ ಏನಾದರೂ ಹೊಸದಾಗಿ ಮಂಜೂರು ಮಾಡಬೇಕಾದರೆ, ಐದು-ಹತ್ತು ಸಾವಿರ ರೂಪಾಯಿ ಖರ್ಚು ಆಗುವ ಕೆರೆ ಕೆಲಸಕ್ಕೂ ಬೆಂಗಳೂರು ವಿಧಾನ ಸೌಧಕ್ಕೆ ಬಂದು ಅಲ್ಲಿ ಮಂಜೂರಾತಿ ಆಗಬೇಕೆಂದು ಹೇಳುವುದು ಸರಿಯಲ್ಲ. ಇದರಿಂದ ಬಹಳ ಕೆಲಸಗಳು ಆಗುವುದಿಲ್ಲ ಎಂದರೆ ನನ್ನ ಕ್ಷೇತ್ರದಲ್ಲಿ ಏನೂ ಕೆಲಸಗಳಾಗಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಮೈನರ್ ಇರಿಗೇಷನ್ ಸಬ್ ಡಿವಿಜನ್ ಎಂದು ಮಾಡಿ, ತ್ವರಿತದಿಂದ ಕೆಲಸಗಳನ್ನು ಮಾಡಲು ಅವುಗಳ ಅಂದಾಜುಗಳನ್ನು ತಯಾರು ಮಾಡಿಸಿದ್ದಾರೆ. 97 ಲಿಫ್ಟ್ ಇರಿಗೇಷನ್ ಸ್ಕೀಮುಗಳು, 7 ಮತ್ತು 56 ಲಿಫ್ಟ್ ಇರಿಗೇಷನ್ ಪ್ರಾಜೆಕ್ಟುಗಳ ಅಂದಾಜುಗಳು ಮಾಡಿ, ಒಂದು ಕಾರ್ಯಗತ ವಾಗುವುದಕ್ಕೆ ಇಲ್ಲ. ಮೂರು ನಾಲ್ಕು ವರ್ಷಗಳ ಕೆಳಗೆ ತಯಾರಿಸಿದ್ದ ಅಂದಾಜುಗಳನ್ನು ಸರ್ಕಾರ ದವರು ಮಂಜೂರು ಮಾಡಿದರೆ ಆ ಅಂದಾಜುಗಳೆಲ್ಲಾ ಪುನಃ ಹೆಚ್ಚುಮಾಡಬೇಕಾದ ಪರಿಸ್ಥಿತಿ ಬಂದು ಮತ್ತೊಂದು ಸಲ ಮೈನರ್ ಇರಿಗೇಷನ್ ಸಬ್‌ಡಿವಿಜನ್‌ಗೆ ಕಳಿಸತಕ್ಕ ಪರಿಸ್ಥಿತಿ ಬರುತ್ತದೆ. ಅಂಥ ಕೆಲಸಗಳನ್ನು ಪುನಃ ಇನ್‌ವೆಸ್ಟಿಗೇಟ್ ಮಾಡಿ, ಕಾರ್ಯಗತಮಾಡುವುದಕ್ಕೆ ಸರ್ಕಾರದವರು ಮಂಜೂರು ಮಾಡುವುದಕ್ಕೆ ಏರ್ಪಾಡು ಮಾಡಬೇಕೇ ಹೊರತು, ನಾವು ಮಂಜೂರು ಮಾಡಿದ್ದೇವೆ ಎಂದು ಹೇಳುವಾಗ ಮೈನರ್ ಇರಿಗೇಷನ್ ಸಬ್ ಡಿವಿಜನ್‌ನವರು ಮತ್ತೊಂದು ಅಂದಾಜನ್ನು ಮಾಡಿ ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಊಟಕ್ಕೆ ಕರದು ಬರೀ ಎಲೆಯನ್ನು ಹಾಕಿದ ಹಾಗೆ ಆಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛಿಸುತ್ತೇನೆ.

ಕೆಲಸಗಳು ನಿಧಾನವಾಗುವ ಕಾಲದಲ್ಲಿ ಮತ್ತೊಂದು ವಿಚಾರವನ್ನು ಕೇಳಿದ್ದೇನೆ. ಚೀಫ್ ಇಂಜಿನಿಯರ್ ಇರಿಗೇಷನ್ ಸಂಬಂಧಪಟ್ಟವರು ಒಂದು ಸರ್ಕ್ಯುಲರ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಅದರ ಪ್ರಕಾರ ಕೆಲಸ ಮಾಡಬೇಕಾದರೆ ಸಾಧ್ಯವೇ ಇಲ್ಲ. ಬಹಳ ಕಠಿಣವಾದ ಮತ್ತು ಜಟಿಲವಾದ ಸಮಸ್ಯೆಯನ್ನು ತಂದೊಡ್ಡಿದ್ದಾರೆಂದು ಕೇಳಿದ್ದೇನೆ. ಇದನ್ನು ನಾನು ತಜ್ಞನಾಗಿ ಹೇಳುತ್ತಿಲ್ಲ. ಸಾಮಾನ್ಯ ಪ್ರಜೆಯಾಗಿ ಹೇಳುವುದಾದರೆ ಕೆಲಸಗಳಾಗದೆ, ಕೆರೆಗಳ ನಿರ್ಮಾಣವಾಗದೆ ಅನೇಕರಿಗೆ ತೊಂದರೆಯಾಗುತ್ತಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳು ಪುನರ್ಯೋಚಿಸಬೇಕೆಂದೂ, ಅದಕ್ಕೆ ಸೂಕ್ತ ಏರ್ಪಾಡನ್ನು ಮಾಡಬೇಕೆಂದೂ ವಿಜ್ಞಾಪಿಸಿಕೊಳ್ಳುತ್ತೇನೆ.

ಕಾವೇರಿ ನದಿ ನೀರಿನ ವಿಷಯದಲ್ಲಿ ಹೇಳುವುದಾದರೆ 1924 ರ ಒಪ್ಪಂದದ ಪ್ರಕಾರ ನಾವು 45 ಟಿ. ಎಂ. ಸಿ. ಎಫ್‌ಟಿ. ನೀರನ್ನು 1974ರ ಒಳಗಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಹೇಮಾವತಿ ಯೋಜನೆಯನ್ನು ಪೂರೈಸಿದರೆ 18 ಟಿ. ಎಂ. ಸಿ. ಎಫ್.ಟಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಇನ್ನು ಕಂಬದಕಡ ವಿಷಯದಲ್ಲಿ ಅನೇಕ ಜಿಜ್ಞಾಸೆಗಳು ಬರುತ್ತಿವೆ. ನಾವು ಉಪಯೋಗಿಸಿಕೊಳ್ಳಬೇಕಾದ ನೀರನ್ನು ಎಲ್ಲಿಯೇ ಆಗಲೀ, ಯಾವ ಸ್ಥಳದಲ್ಲಿಯೇ ಆಗಲೀ ಅತಿ ಜಾಗ್ರತೆಯಾಗಿ ಉಪಯೋಗಿಸಿಕೊಳ್ಳಲು ಯೋಜನೆಯನ್ನು ತಯಾರುಮಾಡಿ, ಅದನ್ನು ಕಾರ್ಯಗತ ಮಾಡಬೇಕು. ಅದಕ್ಕೆ ಬೇಕಾದ ಹಣ ಮತ್ತು ಕೇಂದ್ರದಿಂದ, ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿನಿಂದ ಪ್ಲಾನಿಂಗ್ ಕಮಿಷನ್ನಿನಿಂದ ಒಪ್ಪಿಗೆಯನ್ನು ಪಡೆದು ಮಾಡದೆ ಹೋದರೆ 1974ರ ನಂತರ ನಮ್ಮ ಹಕ್ಕನ್ನು ನಾವು ಕಳೆದುಕೊಳ್ಳುತ್ತೇವೆ. ಇದನ್ನು ಜಾಗ್ರತೆ ಕಾರ್ಯಗತ ಮಾಡಿ ನೀರನ್ನು ಪರಮಾವಧಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳಬೇಕೆಂದು ಸರ್ಕಾರ ದವರನ್ನು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನಲ್ಲಿರುವವರಿಗೆ ರಸ್ತೆ ಸಂಚಾರ ಸೌಲಭ್ಯಗಳಿಲ್ಲ. ಹಳ್ಳಿಗಾಡಿನ ಜನ ಎತ್ತಿನ ಗಾಡಿಯಲ್ಲಿ ಕುಳಿತು ಬರುವುದಕ್ಕೆ ಅನುಕೂಲವಾಗುವಂಥ ರಸ್ತೆಗಳನ್ನಾದರೂ ಮಾಡಿಸ ಬೇಕು. ಶ್ರೀ ಎಚ್. ಎಂ. ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಬೇಕಾದಷ್ಟು ರಸ್ತೆಗಳನ್ನು ಮಾಡಿಸಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ 50 ಮೈಲಿಯಿಂದ 200 ಮೈಲಿವರೆಗೂ ಇಂಟರ್ ವಿಲೇಜ್ ಕಮ್ಯೂನಿಕೇಷನ್ ರೋಡ್ಸ್ ಮಾಡಿಸಿದ್ದಾರೆ. ಅದರ ಮೇಲೆ ಖರ್ಚು ಮಾಡಿರುವ ಹಣ, ರೈತರ ಹಣ. ಆ ರಸ್ತೆಗಳನ್ನು ದುರಸ್ತು ಮಾಡದೆ ಇರುವುದರಿಂದ ನೀರಿನಲ್ಲಿ ಹಾಕಿದ ಹಾಗೆ ಆಗಿದೆ ಎಂದರೆ ತಪ್ಪಾಗಲಾರದು. ಅಲ್ಲಿ ಆಗಬೇಕಾದ ಕ್ರಾಸ್ ಡ್ರೈನೇಜ್ ಕೆಲಸಗಳು ಮತ್ತು ಕಲ್ವರ್ಟ್‌ಗಳು ಇವುಗಳಿಗೆ ಬೇಕಾದ ಹಣವನ್ನು ಒದಗಿಸಿ ಕೆಲಸ ಮಾಡಿಸಬೇಕು. ಬೆಂಗಳೂರಿನಲ್ಲಿರುವಂಥ ರಸ್ತೆಗಳು

(ಶ್ರೀ ಎನ್. ಚಿಕ್ಕೇಗೌಡ)

ಅಲ್ಲಿ ಇಲ್ಲದೇ ಇದ್ದರೂ ಸರಿಯಾದ ರಸ್ತೆ, ಮೆಟಲ್ ಆಗದೆ ಇದ್ದರೂ ಚಿಂತೆಇಲ್ಲ, ಸಣ್ಣಪುಟ್ಟ ಕಲವರ್ಟ್ಸ್, ಕ್ರಾಸ್ ಡ್ರೈನೇಜ್ ವರ್ಕ್ಸ್ ಇವನ್ನಾದರೂ ಮಾಡಿಕೊಡದೆ ಹೋದರೆ ಬಹಳ ತೊಂದರೆಯಾಗುತ್ತದೆ. ಅನೇಕ ಸದಸ್ಯರು ಹೇಳಿದರು ರಾಜಭವನಕ್ಕೆ 13 ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಹೊರಟ್ಟಿದ್ದಾರೆ ಎಂದು. ಮಿತವ್ಯಯವನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿದರೂ ಸಹ, ಗ್ರಾಮಾಂತರ ರಸ್ತೆಗಳ ವಿಷಯದಲ್ಲಿ ಅದ್ಯತೆಯನ್ನು ಕೊಟ್ಟು ಹಿಂದುಳಿದ ಪ್ರದೇಶವಾದ, ಹಳ್ಳಿಗಾಡಿನ ರೈತರಿಗೆ ಜನಗಳಿಗೆ ಅನುಕೂಲವಾಗಬೇಕಾದರೆ ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದೊಂದು ತಾಲ್ಲೂಕಿನಲ್ಲಿಯೂ ಯಾವ ಮುಖ್ಯವಾದ ಕೆಲಸವಿದೆ ಅದನ್ನು ಇಂಟರ್ ವಿಲೇಜ್ ಕಮ್ಯುನಿಕೇಷನ್ ರೋಡ್ಸ್ ಏನಿವೆ ಅವುಗಳನ್ನು ರಿಪೇರಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ ಈ ಇಂಟರ್ ವಿಲೇಜ್ ಕಮೂನಿಕೇಷನ್ ರಸ್ತೆಗಳನ್ನೆಲ್ಲಾ ತಾಲ್ಲೂಕು ಬೋರ್ಡುಗಳಿಗೆ ವಹಿಸಿದ್ದೇವೆ. ಅವರ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ತಾಲ್ಲೂಕು ಬೋರ್ಡಿನವರು ಕುಡಿಯುವ ನೀರಿನ ಸೌಕರ್ಯ, ಶಾಲಾಕಟ್ಟಡ, ರಸ್ತೆಯ ಮೇಂಟೆನೆನ್ಸ್ ಇವುಗಳನ್ನೆಲ್ಲಾ ಮಾಡಬೇಕು ಎಂದು ಹೇಳುತ್ತಾರೆ ಒಂದು ಸಣ್ಣ ಸೇತುವೆ ಆಗ ಬೇಕಾದರೆ ತಾಲ್ಲೂಕು ಬೋರ್ಡಿಗೆ ವಹಿಸಿದ್ದೇನೆ ಎಂದು ಬರೀ ಮಾತಿನಲ್ಲೇ ಹೇಳಿದರೆ ಪ್ರಯೋಜನ ವಿಲ್ಲ. ಅದಕ್ಕೆ ಬೇಕಾದ ಹಣವನ್ನೂ ಒದಗಿಸಿಕೊಡಬೇಕು. ಮೈನರ್ ಇರಿಗೇಷನ್ 10 ಎಕರೆ ಅಚ್ಚುಕಟ್ಟಿಗಿಂತ ಕಡಮೆ ಇರುವ ಕೆರೆಗಳನ್ನೆಲ್ಲಾ ತಾಲ್ಲೂಕು ಬೋರ್ಡಿಗೆ ವಹಿಸಿದ್ದಾರೆ. ಸರ್ಕಾರ ತಾಲ್ಲೂಕು ಬೋರ್ಡುಗಳಿಗೆ ಹಣ ಕೊಡುವ ವೈಖರಿ ನೋಡಿದರೆ ವರ್ಷದ ಕೊನೆಯಲ್ಲಿ ದುಡ್ಡು ಕೊಡು ತ್ತಾರೆ; ಕೊನೇ ಘಳಿಗೆಯಲ್ಲಿ ಕೊಡುತ್ತಾರೆ. ಇದು ತಪ್ಪಬೇಕು. ನಾವು ಇಲ್ಲಿ ಮಾರ್ಚಿ 31ನೆ ತಾರೀಖಿನೊಳಗಾಗಿ ಬಜೆಟ್ಟನ್ನು ಪಾಸುಮಾಡಿದರೂ ಕೂಡ ಸಂಬಂಧಪಟ್ಟ ಇಲಾಖೆಗೆ ತಿಳಿಸಿ, ಅಲ್ಲಿಂದ ಜಿಲ್ಲಾಮಟ್ಟಕ್ಕೆ ಬಂದು, ತಾಲ್ಲೂಕು ಮಟ್ಟಕ್ಕೆ ಕಳಿಸಿಕೊಡಬೇಕಾದರೆ ಹೊಟ್ಟೆನೋವು ಬಂದ ಹಾಗೆ ಆಗಿ ಅವರು ಹಣವನ್ನೇ ಕೊಡುವುದಿಲ್ಲ. ವರ್ಷದ ಮೊದಲಿನಲ್ಲಿ ಹಣ ಕೊಡುವುದಿಲ್ಲ, ಕೊನೆಯಲ್ಲಿ ಮಾರ್ಚಿ ತಿಂಗಳ ಅಖೈರಿನಲ್ಲಿ ಕೊಡುತ್ತಾರೆ, ಆಗ ಖರ್ಚುಮಾಡುವುದಕ್ಕಾಗುವುದಿಲ್ಲ, ಅದರಿಂದ ಪ್ರಯೋಜನವಾಗುವುದಿಲ್ಲ. ಪ್ರತಿಯೊಂದು ಇಲಾಖೆಯಲ್ಲೂ ಬಹುಶಃ ಇರುವ ಇದೊಂದು ದೊಡ್ಡ ಖಾಯಿಲೆ.

7·00 P.M.

ಮತ್ತೊಂದು ವಿಚಾರ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರಿಗೆ ಕೊಟ್ಟಿರುವ ಅಧಿಕಾರಕ್ಕೆ ಸಂಬಂಧಪಟ್ಟಿದ್ದು. ಲೋಕೋಪಯೋಗಿ ಇಲಾಖೆಯಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಹಾಗೆ ಆಗದಿದ್ದರೆ ಕೆಲಸವಾಗುವುದಿಲ್ಲ. ಮೊದಲು ಅಸಿಸ್ಟೆಂಟ್ ಇಂಜನಿಯರಿಗೆ 3 ಸಾವಿರ, ರೂಪಾಯಿಗಳವರೆಗೂ ಇರುವ ಅಂದಾಜನ್ನು ಮಂಜೂರು ಮಾಡುವುದಕ್ಕೆ ಅಧಿಕಾರವಿತ್ತು, ಅದನ್ನು ತೆಗೆದಿದ್ದಾರೆ. ಆಗಾಗ್ಗೆ ಕಳಿಸುವ ಆರ್ಡರು, ಸರ್ಕ್ಯುಲರುಗಳನ್ನು ನೋಡಿದರೆ ಎಗ್ಜಿಕ್ಯುಟಿವ್ ಇಂಜನಿಯರಿಗೆ 50 ಸಾವಿರ ರೂಪಾಯಿಗಳವರೆಗೆ, ಸೂಪರಿಂಟೆಂಡಿಂಗ್ ಇಂಜನಿಯರಿಗೆ ಒಂದು ಲಕ್ಷದವರೆಗೆ, ಚೀಫ್ ಇಂಜನಿಯರಿಗೆ 7 ಲಕ್ಷದವರೆಗೆ ಹಣವನ್ನು ಅಂದಾಜುಗಳಿಗೆ ಮಂಜೂರು ಮಾಡಲು ಅವಕಾಶ ಕೊಟ್ಟಿರುವುದು ಕಂಡುಬರುತ್ತದೆ. ಆದರೆ ಎಲ್ಲಾ ಬರೀ ಕಾಗದದಮೇಲಿದೆ. ಸಣ್ಣಪುಟ್ಟ ಅಧಿಕಾರಗಳನ್ನು ವಿಕೇಂದ್ರೀಕರಣಮಾಡಿದರೆ ಜಾಗ್ರತೆ ಕೆಲಸಗಳಾಗಲು ಅವಕಾಶವಾಗು ತ್ತದೆ ? ಹಾಗೆ ಮಾಡದಿದ್ದರೆ ಏನೂ ಆಗುವುದಿಲ್ಲ. ಕೊಟ್ಟಿರುವ ಹಣಕ್ಕಿಂತ ಹೆಚ್ಚು ಖರ್ಚುಮಾಡಿ ದರೆ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಅದಕ್ಕೆ ಅವಕಾಶವಿಲ್ಲದಂತೆ ಅಧಿಕಾರ ವನ್ನುವಿಕೇಂದ್ರೀಕರಣಮಾಡುವುದು ಒಳ್ಳೆಯದು. ಅನೇಕ ಸದಸ್ಯರು ತಮ್ಮ ಕ್ಷೇತ್ರಗಳಿಗೆ ಸಂಬಂಧ ಪಟ್ಟ ಕೆಲಸಗಳನ್ನು 5 ವರ್ಷಗಳೊಳಗೆ ಮಾಡಿಸಿಕೊಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. 10 ಸಾವಿರ ರೂಪಾಯಿಗಳ ಒಂದು ಕೆರೆ ರಿಪೇರಿ ಮಾಡುವುದಕ್ಕೆ ಕೂಡ ಈಗ ಸಾಧ್ಯವಿಲ್ಲ. ಒಂದು ಹೊಸ ಕೆರೆ 5 ವರ್ಷಗಳಲ್ಲಿ ಮಾಡುವುದು ಕಷ್ಟ. ಸದಸ್ಯರು ಯಾರನ್ನಾದರೂ ವರ್ಗಮಾಡಿಸಬೇಕೆಂದರೆ ಅದನ್ನು ಮಾಡುವುದಿಲ್ಲ, ಮಂತ್ರಿಗಳ ಬಳಿ ಹೋಗಿ, ಏನು ಬೇಕೋ ಹೇಳಿ ಮಾಡಿಸಿಕೊಳ್ಳಿ ಎಂದು ಅಧಿಕಾರಿಗಳು ಹೇಳುತ್ತಾರೆ. ಇದೆಲ್ಲಾ ನೋಡಿ ಬೇಜಾರಾಗಿದೆ. ಅಭಿವೃದ್ಧಿಕಾರ್ಯಗಳು ವೇಗದಿಂದ ಆಗಬೇಕಾದರೆ ಅಧಿಕಾರಿಗಳಿಗೆ ಜವಾಬ್ದಾರಿ ಕೊಡಬೇಕು. ಮುಖ್ಯವಾಗಿ ಆಡಳಿತದಲ್ಲಿ ಮಿತವ್ಯಯ ಸಾಧಿಸಬೇಕು. ಈಗ ಸೇಕಡ 10 ರಷ್ಟು ಸಿಬ್ಬಂದಿ ಕಡಮೆಮಾಡಬೇಕು. ಈಗಿರುವ

10-12 ಚೀಫ್ ಇಂಜಿನಿಯರುಗಳ ಸಂಖ್ಯೆ ಜಾಸ್ತಿ, ಅದನ್ನು 3-4 ಕ್ಕೆ ಇಳಿಸಬೇಕು. ಈಗ ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ ಆಗಿ ಜಿಜ್ಞಾಸೆಯಾಗಿದೆ, ಅಧಿಕ್ಕಲ್ಲಿ ಸಿಬ್ಬಂದಿ ಜಾಸ್ತಿ ಇದೆ. ಯಾವ ಇಲಾಖೆಯಲ್ಲಿ ನೋಡಿದರೆ ಸಿಬ್ಬಂದಿ ಜಾಸ್ತಿಯಿದೆಯೇ ಹೊರತು ಕೆಲಸವೇನೂ ಆಗುವುದಿಲ್ಲ. ಹೀಗಾಗಿ ಅಧಿಕಾರಿಗಳು ಕಲೆತು ಯೋಚನೆಮಾಡಿ ತಮಗೆ ಬೇಕಾದ ಅನುಕೂಲಗಳನ್ನು ಮಾಡಿಕೊಳ್ಳುವುದಕ್ಕೆ ಉದ್ಯೋಗಿಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದು ಸರಿಯಲ್ಲ. ಈ ಸಂಬಂಧದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಹೊಸಕೋಟೆಯ ನಾಲ್ಕನೆಯ ನಂಬರಿನ ಸಬ್‌ಡಿವಿಜನ್ನಿನಲ್ಲಿ ಹೆಚ್ಚು ಹಣ ಖರ್ಚುಮಾಡಬೇಕೆಂದು ಹೇಳುವಾಗ 13 ಸಾವಿರ ರೂಪಾಯಿಗಳ ಖರ್ಚಿನ ಸಿಬ್ಬಂದಿಯಿಂದ 11 ಸಾವಿರ ರೂಪಾಯಿಗಳ ಕೆಲಸವಾಗಿದೆ. ಹೀಗೆ ಯಾವ ರೀತಿ ಸಿಬ್ಬಂದಿಗೆ ಖರ್ಚಾಗುತ್ತಿದೆ, ಕೆಲಸಗಳಿಗೆಷ್ಟು ಖರ್ಚಾಗುತ್ತಿದೆ ಎಂಬುದನ್ನು ತಿಳಿಯಲು ಅಂಕಿಅಂಶ ನೋಡಬೇಕು. ಸಿಬ್ಬಂದಿಗೇ ಹೆಚ್ಚು ಖರ್ಚಾಗುತ್ತಿರುವುದು ಎಲ್ಲರಿಗೂ ಕೂಡ ತಿಳಿದ ವಿಷಯ.

ಹೊಸಕೋಟೆ ಕ್ಷೇತ್ರದಲ್ಲಿ ಅಮಾನಿ ದೊಡ್ಡಕೆರೆ ಇದೆ. ಅದರ ಕೆಳಗೆ 2 ಸಾವಿರ ಎಕರೆಗಳ ಅಚ್ಚುಕಟ್ಟಿದೆ. ಹಿಂದೆ 900 ಎಕರೆಗಳಿಗಾಗಿ ಕೆರೆ ಕಟ್ಟಲಾಗಿತ್ತು, ಈಗ ಅದರಿಂದ 2 ಸಾವಿರ ಎಕರೆಗೆ ನೀರೊದಗುವುದು. ಆದರೆ ಅದರಲ್ಲಿ ಹೂಳು ತುಂಬಿದೆ. ಎನ್. ಹೆಚ್. 4ರ ರಸ್ತೆ ರಾಷ್ಟ್ರೀಯ ಹೆದ್ದಾರಿ, ಕೆರೆ ಏರಿಯಮೇಲೆ ಹೋಗುತ್ತದೆ, ಅದನ್ನು ಮೊದಲುಮಾಡಬೇಕು. ಇರುವ ಕೆರೆಯನ್ನು ದ್ವಿಗುಣಮಾಡಿ ಹೂಳು ತೆಗೆದರೆ ರೈತರಿಗೆ ಅನುಕೂಲವಾಗುತ್ತದೆ. ಎಲೆಮಲ್ಲಪ್ಪನ ಕೆರೆ 3-4 ವರ್ಷಕ್ಕೆ ಒಂದು ಸಲ ತುಂಬುತ್ತದೆ. ದೊಡ್ಡಕೆರೆ ಪ್ರತಿವರ್ಷ ತುಂಬುವುದಿಲ್ಲ. ಎಲೆಮಲ್ಲಪ್ಪನ ಕೆರೆಯಿಂದ ದೊಡ್ಡ ಕೆರೆಗೆ ಒಂದು ನಾಲೆಮಾಡಿದರೆ ಅನುಕೂಲ. ಈ ನಾಲೆಯಿಂದ ದೊಡ್ಡ ಕೆರೆಗೆ ಹೆಚ್ಚಿಗೆ ನೀರು ಬಂದು ವರ್ಷೇ ವರ್ಷೇ ತುಂಬಲು ಅನುಕೂಲವಾಗುತ್ತೆ. ಇದನ್ನು ಮಾಡಿಕೊಡಬೇಕು. ಮೂರು ನಾಲ್ಕು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಿಗೆ ತಿಳಿಸಿದ್ದೆ. ಅವನ್ನು ತೆಗೆದುಕೊಳ್ಳಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn to meet tomorrow at 9 A. M.

The House adjourned at Five Minutes past Seven of the Clock to meet again at Nine of the Clock on Friday the 21st July 1967.